
# ಅಪರಂಜಿ

ತಿಳಿನಗೆಯ ಕಾರಂಜಿ

ಜುಲೈ 2020




ಸ್ಪಾನ್ಸರ್‌ಗಳೇ ನಾಸ್ತಿ !

ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 37**

**ಸಂಚಿಕೆ - 10**

**ಜುಲೈ - 2020**

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಭವಿಷ್ಯದ ಭವಿಷ್ಯ | ಗೌತಮ | 6 |
| ಫಣಿಯಪ್ಪನ ಹುಲಿಗಳು | ಟೀಯೆಸ್ಸಾರ್ರಾವ್ | 9 |
| ಬಲವಂತ ಮಾಘ ಸ್ನಾನ | ಎಂ.ಎಸ್.ಬಾಲು | 13 |
| ಸೌಂದರ್ಯ ವೃದ್ಧಿ | ಮಣ್ಣೆರಾಜು | 16 |
| ಡಾ. ಪ್ರಭುಶಂಕರ್ ನೆನಪುಗಳು | ಜೆ.ಬಿ. ರಂಗಸ್ವಾಮಿ | 17 |
| ಮುದ್ದು ಮೀನಾಳ ಮೀಟೂ ಪ್ರಶ್ನೆ | ಪ್ರೊ. ಸಿ.ಕೆ. ರೇಣುಕಾರ್ಯ | 22 |
| ತುಂತುರು | ದಂನಳ | 27 |
| ಕೋಟಿಗೊಬ್ಬ ಕಾಣ್ರೀ... | ಎಚ್. ಗೋಪಾಲಕೃಷ್ಣ | 28 |
| ಯಾರ್ರೀ ಅವಳು.. | ಗುಂಡೂರಾವ್ ದೇಸಾಯಿ | 33 |
| ಗೂಬೆ ಸುಳಿಯ ಹೋರಿ | ಮಲ್ಲಿಕಾರ್ಜುನ ಹೊಸಪಾಳ್ಯ | 36 |
| ಹಿರಿಯರೊಂದಿಗಿನ ಅನುಭವ | ಬಿ.ಎಸ್. ದ್ವಾರಕಾನಾಥ್ | 39 |

ಮುಖಪುಟ ವ್ಯಂಗ್ಯಚಿತ್ರ
**ಕೃಪೆ : ಅಜಿತ್ ನಿನಾನ್,** ಟೈಂಸ್ ಆಫ್ ಇಂಡಿಯಾ

*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: beluruuramamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

**ತಾಪಮಾಪಕ ಯಂತ್ರಗಳನ್ನು ನಮ್ಮ ವಿಧಿಬರಹ ಅರಿಯಲು ಬಳಸುತ್ತಾರೆ ಎಂಬುದೂ ಶುದ್ಧ ಕುಹಕ!!!**

★★★

ಸರ್ಕಾರೀ ನೌಕರಿ ಬಿಟ್ಟು ಕೃಷಿಯಲ್ಲಿ ಗೆದ್ದ! -ಸುದ್ದಿ

**ಜೋರಾಗಿ ಹೇಳಬೇಡಿ, ತೆರಿಗೆ ಹಾಕಿಯಾರು!!**

★★★

ಜನರ ಆರೋಗ್ಯದ ಹಕ್ಕಿಗೆ ಗಡಿಗಳ ನಿರ್ಬಂಧ ಬೇಡ -ಪತ್ರಿಕೆ

**ಹಕ್ಕಿಗಳಿಗೆ ಸಹ ಗಡಿಗಳಿಲ್ಲವಲ್ಲ!!!**

★★★★

ಕೇರಳಕ್ಕೆ ಮಣ್ಣು, ಕೋಲಾರದ ಕೆರೆ ಕೆರೆಗಳೆಲ್ಲ ಕಂದಕ ಪರಿಹಾರ -ಸುದ್ದಿ

**ಮಣ್ಣು ಮುಕ್ಕಿಸಿದ ಅಂದರೆ ಹೊಸ ಅರ್ಥ ಹುಡುಕಬೇಕು ಈಗ!!!**

★★★★

ಸಬ್ಇನ್ಸ್‌ಪೆಕ್ಟರ್ ಸ್ಕೂಟರ್ ಕಳವು -ಮೈಸೂರು ಸುದ್ದಿ

**ಮಹಿಷಾಸುರನ ಕೈವಾಡ!?!**

★★★

ಸುರಕ್ಷತಾ ಕ್ರಮದೊಂದಿಗೆ ದೇಗುಲ ಪ್ರವೇಶ -ಮೇಲುಕೋಟೆ ಸುದ್ದಿ

**ಭಗವಂತ ಬೆಚ್ಚಿದನಂತೆ!!!**

★★★

ಮಾತುಕತೆಯಿಂದ ಬಿಕ್ಕಟ್ಟು ಪರಿಹಾರ -ಚೈನಾ

**ಮೂರ್ತಿಗಿಂತ ಕತೆಯೇ ಜಾಸ್ತಿ!!!**

★★★


# “ನಮ್ಮ ನಿಮ್ಮಲ್ಲಿ”

● **ಶಿವಕುಮಾರ್**

ಬಾಪೂಜಿಯವರು 1930ರಲ್ಲಿ ಕೈಗೊಂಡ ಉಪ್ಪಿನ ಸತ್ಯಾಗ್ರಹದ ಸಲುವಾಗಿ ಸಬರ್‌ಮತಿಯಿಂದ 'ದಂಡಿ'ಗೆ ನಡೆಸಿದ ಯಾತ್ರೆ ಯಾರಿಗೆ ತಿಳಿದಿಲ್ಲ? ಈ ಸತ್ಯಾಗ್ರಹದ ವಾರ್ಷಿಕೋತ್ಸವವನ್ನು ಆಚರಿಸುವ ಸಲುವಾಗಿ ಶ್ರೀ ರಾಜಮೋಹನ್ ಗಾಂಧಿಯವರು ತಮ್ಮ ಎಂ.ಆರ್.ಎ ಸಂಸ್ಥೆಯ ಮೂಲಕ ಒಂದು ಯಾತ್ರೆಯನ್ನು 1988ರಲ್ಲಿ ಆಯೋಜಿಸಿದ್ದರು. ಕರ್ನಾಟಕದ ಪ್ರತಿನಿಧಿಗಳಾಗಿ ನಾನು ಮತ್ತು ಗೆಳೆಯ ಶಾಂತಾರಾಮ್ ಈ ಯಾತ್ರೆಯಲ್ಲಿ ಭಾಗವಹಿಸಿದ್ದೆವು. ಮುಂಬೈನಿಂದ ನೇರವಾಗಿ ಗುಜರಾತಿನ ಸಮುದ್ರತೀರದ ಊರು 'ದಂಡಿ'ಗೆ ಪಯಣಿಸಿದ ನಂತರ ಅಲ್ಲಿಂದ ಹೊರಟು ಹತ್ತುದಿನಗಳ ಸಾವಧಾನ ಬಸ್ ಪಯಣದ ನಂತರ ನವಸಾರಿ, ಕರಾಡಿ, ವಡೋದರ, ನಡಿಯಾದ್ ಊರುಗಳ ಮಾರ್ಗವಾಗಿ ಸಬರಮತಿಯನ್ನು ತಲಪುವುದು ಈ ಯಾತ್ರೆಯ ಉದ್ದೇಶವಾಗಿತ್ತು. ಪ್ರತಿ ಊರಿನಲ್ಲೂ ಅಲ್ಲಿನ ಸಹೃದಯ ನಾಗರೀಕರುಗಳ ಮನೆಗಳಲ್ಲಿ ನಮಗೆಲ್ಲಾ ವಸತಿ ಹಾಗೂ ಆತಿಥ್ಯವನ್ನು ನಮ್ಮ ಅತಿಥೇಯ ಸಂಸ್ಥೆ ಏರ್ಪಡಿಸಿತ್ತು. ಪ್ರತಿ ಸಂಜೆ ಆ ಊರುಗಳ ಪುರಭವನಗಳಲ್ಲಿ ಬಾಪೂಜಿಯವರ ವಿಚಾರಧಾರೆ ಹಾಗೂ ನೈತಿಕ ಮೌಲ್ಯಗಳ ಬಗ್ಗೆ ಉಪನ್ಯಾಸ ಹಾಗೂ ಚರ್ಚೆ ನಡೆಯುತ್ತಿತ್ತು. ಸುಮಾರು ನೂರು ಜನ ಯಾತ್ರಿಗಳಿದ್ದ ಈ ಗುಂಪಿನಲ್ಲಿ ಭಾರತದ ಅನೇಕ ರಾಜ್ಯಗಳ ಪ್ರತಿನಿಧಿಗಳಷ್ಟೇ ಅಲ್ಲದೆ, ಅಮೆರಿಕೆಯಿಂದ ಮಾರ್ಟಿನ್ ಲೂಥರ್ ಕಿಂಗ್‌ರವರ ಅನುಯಾಯಿಗಳ ಗುಂಪೊಂದು ಕಿಂಗ್‌ರವರ ಮೇಲೆ ಬಹುವಾಗಿ ಪ್ರಭಾವ ಬೀರಿದ ಬಾಪೂಜಿಯವರಿಗೆ ನಮನ ಸಲ್ಲಿಸಲು ಈ ಯಾತ್ರೆಯಲ್ಲಿ ಭಾಗವಹಿಸಿದ್ದರು. ಮೊಟ್ಟಮೊದಲ ಬಾರಿ ಆಫ್ರಿಕನ್ ಮೂಲದ ಅಮೆರಿಕನ್ನರನ್ನು ಭೇಟಿಮಾಡಿದ್ದಷ್ಟೇ ಅಲ್ಲದೆ, ಅವರುಗಳೊಂದಿಗೆ ಆಪ್ತ ಸಂವಹನ ಮಾಡುವ ಅವಕಾಶ ನನಗೆ ಆಗ ದೊರಕಿತ್ತು. ಡೇವಿಡ್ ಜೋನ್ಸ್ ಆ ಗುಂಪಿನಲ್ಲಿನ ಒಬ್ಬ ಯಾತ್ರಿ.

ಡೇವಿಡ್ ಒಬ್ಬ ಫ್ರೀಲಾನ್ಸ್ ಪತ್ರಕರ್ತ. ಮಿನ್ನೆಸೋಟ ನಿವಾಸಿ. ಸ್ನೇಹಪರ ವ್ಯಕ್ತಿತ್ವ, ತಮಾಷೆ ಮಾತುಕತೆ ಇವುಗಳಿಂದಾಗಿ ಆತ ಆ ಯಾತ್ರೆಯಲ್ಲಿ ಬಹು ಜನಪ್ರಿಯನಾಗಿದ್ದ. ನಮ್ಮ ಯಾತ್ರೆಯ ಮುಖ್ಯ ಉದ್ದೇಶ, ನಶಿಸಿ ಹೋಗುತ್ತಿರುವ ಮೌಲ್ಯಗಳಾದ ಪ್ರಾಮಾಣಿಕತೆ, ನಿಷ್ಕಳಂಕತೆ, ನಿಃಸ್ವಾರ್ಥತೆ ಹಾಗೂ ವಿಶ್ವಪ್ರೇಮ ಇವುಗಳ ಪ್ರಚಾರ. ಪ್ರಾಮಾಣಿಕತೆಯ ಬಗ್ಗೆ ಡೇವಿಡ್‌ನನ್ನು ಕೇಳಿದಾಗ ಅವನು ಹೇಳಿದ್ದು– ''ಕಳ್ಳನಿಗೂ ಸಹಾ ಪ್ರಾಮಾಣಿಕತೆಯ ಅಗತ್ಯ ಇದೆ. ತಾನು ಮಾಡುತ್ತಿರುವ ಕಳ್ಳತನ ನ್ಯಾಯವಾದದ್ದು ಎಂದು ಅವನು ಪ್ರಾಮಾಣಿಕವಾಗಿ ನಂಬದಿದ್ದರೆ ಅವನಿಗೆ ರಾತ್ರೆ ನಿದ್ದೆಬರುವುದಾದರೂ ಹೇಗೆ? ನಮ್ಮ ಪ್ರಾಮಾಣಿಕತೆಗೆ ನಮ್ಮ ಅಂತರಾತ್ಮನೇ ಸಾಕ್ಷಿ ಎಂದುಕೊಳ್ಳುವವರು ಆ ಬಗ್ಗೆ ಯೋಚಿಸುವುದು ಒಳಿತು''.

ಡೇವಿಡ್‌ನಿಂದಾಗಿ ನನಗೆ ಕಪ್ಪು ಅಮೆರಿಕನ್ ಸಮಾಜದ ಬಗ್ಗೆ ಒಂದು ಒಳನೋಟ ಸಿಕ್ಕಿತು. ಒಮ್ಮೆ ಅವನೊಂದಿಗೆ ಮಾತನಾಡುತ್ತಿದ್ದಾಗ ಗಾದೆಗಳ ಮಾತು ಬಂತು. ''ನಮ್ಮಲ್ಲೂ ಗಾದೆಗಳಿವೆ. ''ಡೂ ಟೈಮ್. ಆರ್ ಟೈಮ್ ವಿಲ್ ಡೂ ಯೂ ಇನ್'' ಅಂತ ನಮ್ಮಲ್ಲಿ ಒಂದು ಗಾದೆ.'' ಅಂದ ಡೇವಿಡ್. ''ಏನು ಹಾಗಂದ್ರೆ?'' ಅಂತ ನಾನು ಕೇಳಿದೆ. ''ಡೂ ಟೈಮ್ ಅಂದ್ರೆ ಜೈಲು ವಾಸ ಮಾಡು ಅಂತ. ಚಿಕ್ಕಂದಿನಿಂದ ಮಕ್ಕಳಿಗೆ ಹೇಳುವ ಬುದ್ಧಿವಾದ ಇದು. ನಮ್ಮ ಕಪ್ಪು ಸಮಾಜದಲ್ಲಿ ದಿನನಿತ್ಯ ನಡೆಯುವ ಹಿಂಸೆ ಕೊಲೆ ಇವುಗಳಿಂದ ಪಾರಾಗಬೇಕಾದರೆ ಹಲವು



ವರ್ಷಗಳ ಜೈಲುವಾಸವೇ ಸೂಕ್ತ ಎಂಬ ನಂಬಿಕೆ ನಮ್ಮಲ್ಲಿದೆ. ಇದರಿಂದ ನಮ್ಮೊಳಗಿನ ಕ್ರೌರ್ಯ ಮತ್ತು ನಮ್ಮ ಮೇಲೆ ನಡೆಯುವ ದೌರ್ಜನ್ಯ ನಮ್ಮ ಸಮಾಜದಲ್ಲಿ ಎಷ್ಟು ಹಾಸು ಹೊಕ್ಕಾಗಿದೆ ಎಂಬುದು ತಿಳಿಯುತ್ತಲ್ಲವೇ'' ಅಂತ ಉತ್ತರ ಬಂತು.

ಗುಜರಾತ್ ಯಾತ್ರೆಯ ನಂತರ ಡೇವಿಡ್ ಒಂದು ವಾರದ ಮಟ್ಟಿಗೆ ಬೆಂಗಳೂರಿಗೆ ಬಂದು ನಮ್ಮ ಮನೆಯಲ್ಲಿ ಅತಿಥಿಯಾಗಿದ್ದ. ಆ ದಿನಗಳಲ್ಲಿ ಕಪ್ಪು ಜನರಿಗೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಬೇಕಾದಷ್ಟು ಮಾತುಕತೆ ನಡೆದಿತ್ತು. ''ನೀವೆಲ್ಲಾ ಇನ್ನೂ ಯಾಕೆ ಬಿಳಿಯರೊಂದಿಗೆ ಹೆಣಗುತ್ತಿದ್ದೀರಿ? ನಿಮ್ಮದೇ ಒಂದು ಪುಟ್ಟ ದೇಶ ಕಟ್ಟಿಕೊಂಡು ಸುಖವಾಗಿರಬಾರದೇಕೆ?'' ಅಂತ ಒಮ್ಮೆ ನಾನು ಕೇಳಿದೆ.

''ಬಹು ಒಳ್ಳೇ ಪ್ರಶ್ನೆ ಕೇಳಿದೆ ಮಾರಾಯ. ನಮ್ಮ ಕಪ್ಪು ಜನಗಳ ಮಿದುಳಿನ ವೈರಿಂಗೇ ಐಬು. ಇಂತಹ ಪ್ರಶ್ನೆ ಯಾರಿಗೂ ಹೊಳೆಯುವುದೇ ಇಲ್ಲ. ಒಬ್ಬನೇ ಒಬ್ಬ- ಅವನ ಹೆಸರು ಮಾಲ್ಕಮ್ ಎಕ್ಸ್- ಈ ಪ್ರಶ್ನೆ ಕೇಳಿದ್ದ. ಅದಕ್ಕಾಗಿ ದೇಶದ್ರೋಹದ ಆಪಾದನೆಯ ಮೇಲೆ ಅವನನ್ನ ಗುಂಡಿಕ್ಕಿಕೊಂದಿದ್ದರು.'' ಎಂದು ಹೇಳಿದ ಆತ.

ಡೇವಿಡ್‌ಗೆ ಭಾರತದ ಸಂಸ್ಕೃತಿಯ ಬಗ್ಗೆ ಅಪಾರ ಮೆಚ್ಚುಗೆ. ''ಹಜರತ್ ಇನಾಯತ್ ಖಾನ್''ರ ಹುಟ್ಟುನಾಡಿಗೆ ಬಂದಿರುವುದೇ ನನ್ನ ಸೌಭಾಗ್ಯ'' ಎಂದು ಡೇವಿಡ್ ಹೇಳಿದಾಗ ನಾನು ಅಮಾಯಕನಂತೆ ''ಅವರು ಯಾರು?'' ಅಂತ ಕೇಳಿದಾಗ, ''ಅವರೊಬ್ಬ ಸೂಫಿ ಸಂತರು ಹಾಗೂ ಸಂಗೀತಗಾರರು. ಮೂಲತಃ ಬರೋಡಾದವರಾದ ಅವರು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಯೂರೋಪಿಗೆ ಪ್ರವಾಸಮಾಡಿದರು. ನಾನು ಅವರ ಪುಸ್ತಕಗಳನ್ನೆಲ್ಲಾ ಓದಿ ಅವರಿಂದ ಬಹುವಾಗಿ ಪ್ರಭಾವಿತನಾಗಿದ್ದೇನೆ. ನೀನು ಅಮೆರಿಕೆಗೆ ಬಂದಾಗ ಆ ಪುಸ್ತಕಗಳನ್ನು ನಿನಗೆ ತೋರಿಸುವೆ'' ಎಂದ ಡೇವಿಡ್.

ಒಂದು ಸಂಜೆ ಮಲ್ಲೇಶ್ವರದ ನಮ್ಮ ಮನೆಯಿಂದ ಆರನೇ ಮುಖ್ಯ ರಸ್ತೆಯಲ್ಲಿ ನಾವಿಬ್ಬರೂ ವಾಕಿಂಗ್ ಹೊರಟಿದ್ದೆವು. ಹೆಜ್ಜೆಗೊಮ್ಮೆ ''ಹೇ ಶಿವ, ನಿಮ್ಮ ಊರು ಎಷ್ಟು ಚೆನ್ನಾಗಿದೆಯೋ, ಎಲ್ಲಿ ನೋಡಿದರೂ ಕಪ್ಪು ಜನ, ಅಪರಿಚಿತರೂ ಸಹಾ ನನ್ನನ್ನು ನೋಡಿ ಮುಗುಳ್ನಗು ಬೀರುತ್ತಾರೆ. ಪುಣ್ಯವಂತರ ನಾಡು ಇದು ''ಅಂತ ಡೇವಿಡ್ ಉದ್ಗರಿಸುತ್ತಿದ್ದ. ಆರನೇ ಮುಖ್ಯರಸ್ತೆ ಹಾದು ಹದಿನೇಳನೆಯ ಕ್ರಾಸಿನಲ್ಲಿ ಬಲಕ್ಕೆ ತಿರುಗಿದೆವು.

ಸ್ವಲ್ಪ ದೂರದಲ್ಲಿ ಬಲಗಡೆ ಒಂದು ಮೆಡಿಕಲ್ ಷಾಪ್ ಇತ್ತು. ನನ್ನ ಪರಿಚಿತ ಮುಲ್ಲರ್ ಪ್ಯಾಟನ್ ಎಂಬ ಗೌಡಸಾರಸ್ವತ ಸಜ್ಜನರೊಬ್ಬರು ಆ ಅಂಗಡಿಯನ್ನು ನಡೆಸುತ್ತಿದ್ದರು. ನಾವಿಬ್ಬರೂ ಅಂಗಡಿಯನ್ನು ದಾಟಿದಾಗ ಒಮ್ಮೆಲೇ ಡೇವಿಡ್‌ನ ಮುಖ ಕಳೆಗುಂದಿತು. ಇಷ್ಟು ಹೊತ್ತು ಹಾಸ್ಯಚಟಾಕಿಗಳನ್ನು ಹಾರಿಸುತ್ತಿದ್ದ ಮನುಷ್ಯ ಒಮ್ಮೆಲೇ ಸುಮ್ಮನಾಗಿಬಿಟ್ಟ, ನನಗೆ ಆಶ್ಚರ್ಯ! ''ಏನಾಯಿತು ಡೇವಿಡ್?'' ಅಂತ ಕೇಳಿದೆ. ಆತ ಪಿಸುಮಾತಿನಲ್ಲಿ ''ಆ ಔಷಧಿ ಅಂಗಡಿಯಲ್ಲಿ ಇದ್ದನಲ್ಲಾ ಆತ ಬಿಳಿಯನೇನು?'' ಅಂತ ಆತಂಕದಿಂದ ಕೇಳಿದ.

''ಛೇ ಛೇ ಅವರು ನನ್ನ ಪರಿಚಿತರು. ಈ ದೇಶದವರೇ. ಅವರು ಬಿಳಿಯರಾಗಿದ್ದರೂ ನಿನಗೇಕೆ ಗಾಬರಿ, ನೀನು ಆರಡಿ ಇದ್ದೀಯ. ಅವರು ನಿನ್ನ ಅರ್ಧದಷ್ಟು ಇಲ್ಲ'' ಅಂತ ನಾನು ನಗಾಡಿದೆ. ಅವನು ನಗಲಿಲ್ಲ. ''ಶಿವ, ನಿನಗೆ ಅರ್ಥ ಆಗೋದಿಲ್ಲ. ನಿಮಗೆ ಹಾವನ್ನ ಕಂಡರೆ ಗಾಬರಿ ಆಗೋಲ್ಲವೇ. ಹಾಗೆ ಬಿಳಿಯರನ್ನ ಕಂಡರೆ ನಮಗಾಗೋ ಗಾಬರಿಯನ್ನ ತರ್ಕಬದ್ಧವಾಗಿ ವಿವರಿಸೋಕ್ಕಾಗೋದಿಲ್ಲ.'' ಅಂತ ಹೇಳಿದ ಡೇವಿಡ್. ಟಾಟಾ ಇನ್ಸ್ಟಿಟ್ಯೂಟಿನಲ್ಲಿ ವಾಕಿಂಗ್ ಮುಗಿಸಿ ಮನೆಗೆ ಹಿಂತಿರುಗುವಾಗ ನಾನು ಬೇರೆ ರಸ್ತೆಯನ್ನು ಆರಿಸಿದೆ.

ಇದೆಲ್ಲಾ ನಡೆದ ನಂತರ ತೊಂಭತ್ತರ ದಶಕದಲ್ಲಿ ನಾನು ಅಮೆರಿಕೆಗೆ ನನ್ನ ತಮ್ಮ ರಾಮಸ್ವಾಮಿಯ ಮನೆಗೆ ಹೋಗಿದ್ದಾಗ ಅಲ್ಲಿಂದ ಮಿತ್ರ ಡೇವಿಡ್‌ನನ್ನು ಸಂಪರ್ಕಿಸಲು ಪ್ರಯತ್ನಿಸಿದೆ. ಡೇವಿಡ್‌ನ ಫೋನ್ ಚಾಲ್ತಿಯಲ್ಲಿರಲಿಲ್ಲ. ಇನ್ನೊಬ್ಬ ಅಮೆರಿಕನ್ ಮಿತ್ರ ಅಟ್ಲಾಂಟಾದ ಡಾ|| ಲೆಮನ್‌ಗೆ ಫೋನ್ ಮಾಡಿ ಡೇವಿಡ್‌ನ ಬಗ್ಗೆ ವಿಚಾರಿಸಿದಾಗ ಆತ ತೀರಿಕೊಂಡಿದ್ದು ತಿಳಿಯಿತು. ಮಿನ್ನೆಸೋಟಾದಲ್ಲಿ ಡೇವಿಡ್ ರಸ್ತೆ ದಾಟುತ್ತಿದ್ದಾಗ ಬಿಳಿಯ ಪೊಲೀಸನೊಬ್ಬ ಅವನನ್ನು ತಡೆದು ಕೆಂಪು ದೀಪವಿದ್ದಾಗ ರಸ್ತೆ ದಾಟಿದ ಅಪಾದನೆಯ ಮೇಲೆ ಬಂಧಿಸಲು ಯತ್ನಿಸಿದನಂತೆ. ಡೇವಿಡ್ ಅವನೊಂದಿಗೆ ಹೋರಾಟಕ್ಕೆ ಇಳಿದಿದ್ದರಿಂದ ಆ ಪೊಲೀಸಿನವ ವಿಧಿಯಿಲ್ಲದೇ ಇವನ ಮೇಲೆ ಗುಂಡು ಹಾರಿಸಬೇಕಾಯಿತಂತೆ. ಲೆಮನ್ ರಿಂದ ಈ ಮಾಹಿತಿಯನ್ನು ಪಡೆದ ನಂತರ ಒಂದೆರಡು ಕ್ಷಣ ನನಗೇನೂ ತೋಚಲಿಲ್ಲ. ನನಗೆ ಪರಿಚಯವಿದ್ದ ಡೇವಿಡ್ ಸಂಭಾವಿತ, ಸಜ್ಜನ. ಶಾಂತಿದೂತ ಇನಾಯತ್ ಖಾನರ ಶಿಷ್ಯ. ಅವನಿಗೇಕೆ ಪೊಲೀಸರೊಂದಿಗೆ ಹೋರಾಡುವ ದುರ್ಬುದ್ಧಿ ಎಂಬ ಪ್ರಶ್ನೆ ನನ್ನನ್ನು ಕಾಡಿತು. ನನ್ನ ತಮ್ಮನನ್ನು ಕೇಳಿದೆ. ಅವನು ಮಿತಭಾಷಿ. ''ನಿನ್ನ ಗೆಳೆಯ ಲೆಮನ್ ಬಿಳಿಯನೇನು?'' ಅಂತ ಕೇಳಿದ. ನಾನು ''ಹೌದು'' ಎಂದೆ. ''ಸರಿ, ಅವನು ಹೇಳಿದ್ದು ಪೊಲೀಸರ ವರ್ಷನ್, ನಿಜಸ್ಥಿತಿ ಬಿಳಿಯರ ದೌರ್ಜನ್ಯ'' ಎಂದು ಅವ ತನ್ನ ಕೆಲಸದಲ್ಲಿ ಮಗ್ನನಾದ.

ಡೇವಿಡ್ ಬೆಂಗಳೂರಿಗೆ ಬಂದಿದ್ದಾಗ ಅವನೊಂದಿಗೆ ನಡೆಸಿದ ಅನೇಕ ಸಂಭಾಷಣೆಗಳಲ್ಲಿ ಒಮ್ಮೆ ನೈತಿಕತೆಯ ವಿಷಯ ಬಂತು. ''ನೈತಿಕತೆ ನಮಗೇಕೆ ಬೇಕು? ಯಾರೋ ಗುರುಗಳೋ ಪಾದ್ರಿಗಳೋ ಹೇಳಿದ್ದಾರೆಂಬ ಕಾರಣಕ್ಕಲ್ಲ. ನಮಗೆ ಅದು ಅಗತ್ಯವೇಕೆಂದರೆ ಅದು ಭಗವಂತನ ನಿಯಮ. ಅವನ ಎಲ್ಲ ಮಕ್ಕಳಿಗೂ ಸಮಾನ ಅವಕಾಶ ದೊರಕಿ, ಅವರೆಲ್ಲರೂ ತಮ್ಮ ದೈವದತ್ತವಾದ ಎತ್ತರಕ್ಕೆ ಏರಲು ಆ ನೈತಿಕತೆ ಬೇಕು. ಅದಕ್ಕಾಗಿ ಈಗ ನೀವು ಹೋರಾಡದೇ, ನಮ್ಮ ಮನೆ ಸರಿಯಾಗಿದೆಯಲ್ಲಾ ನಮಗೇಕೆ ಇತರರ ಉಸಾಬರಿ ಎಂದು ಕುಳಿತುಬಿಟ್ಟರೆ, ನೀವು ಖಂಡಿತವಾಗಿ ಒಂದು ಟೈಮ್ ಬಾಂಬ್ ಮೇಲೆ ಕುಳಿತಿದ್ದೀರಿ. ಇನ್ನು ಮೂರು ನಾಲ್ಕು ದಶಕಗಳಲ್ಲಿ ಒಂದು ಮಹಾ ಸ್ಫೋಟವಾಗುವುದು ಖಂಡಿತ. ನಿಮ್ಮ ಮೊಮ್ಮಕ್ಕಳು, ಮರಿ ಮಕ್ಕಳು, ನಿಮ್ಮ ಆಲಸ್ಯಕ್ಕಾಗಿ ಹತ್ತು ಪಟ್ಟು ಹೆಚ್ಚು ಬೆಲೆಯನ್ನು ತೆರಬೇಕಾಗುತ್ತದೆ. ಇದೇ ನೈತಿಕತೆಯ ನಿಯಮ'' ಎಂದಿದ್ದ ಡೇವಿಡ್.

ಈ ದಿನಗಳಲ್ಲಿ ಅಮೆರಿಕೆಯಲ್ಲಿ ನಡೆಯುತ್ತಿರುವ ಪ್ರತಿಭಟನೆಗಳನ್ನು ಗಮನಿಸಿದಾಗ ಅಗಲಿದ ಮಿತ್ರನ ನೆನಪು ಮರುಕಳಿಸಿತು. ಅಲ್ಲಿನ ಸಮಾಜದ ಬದಲಾವಣೆಗಾಗಿ ಆತ್ಮಬಲಿ ಕೊಟ್ಟಿರುವ ಡೇವಿಡ್, ಜಾರ್ಜ್ ಮತ್ತಿತರ ಅನೇಕರಿಗೆ ಇದೊಂದು ನಮ್ರ ಶ್ರದ್ಧಾಂಜಲಿ.

■

# ಭವಿಷ್ಯದ ಭವಿಷ್ಯ

● 'ಗೌತಮ'

ಚೇಲ ಮಾಮೂಲಿನಂತೆ ಕ್ಷಣದಲ್ಲಿ ಬಾಗಿಲಲ್ಲಿ ಕಾಣಿಸಿಕೊಂಡ. ''ಬಾರಯ್ಯ ಚೇಲಾ, ಎಷ್ಟು ದಿನ ಆಗಿಹೋಯ್ತು ನಿನ್ನನ್ನ ನೋಡಿ. ಚೆನ್ನಾಗಿದ್ದೀಯಾ?''

''ಬೊಂಬಾಟಾಗಿದ್ದೀನಿ ಗುರೂ'' ಅಂತ ಸ್ವಲ್ಪ ತಡೆದು ''ಪದ್ದಕ್ಕನ ಕೈ ಕಾಫಿ ಸಿಕ್ಕಿಬಿಟ್ಟರೆ, ನನ್ನ ಕತೆ ಸುರು ಹಚ್ಚಿಕ್ಕೋತೀನಿ'' ಅನ್ನುತ್ತಿದ್ದಂತೆಯೇ ಪದ್ದಿ ಕಾಫಿಯೊಂದಿಗೆ ಬಂದು ಚೇಲನಿಗೆ ಒಂದು ಲೋಟ ಕೊಟ್ಟಳು.

''ಏನದು ನಿನ್ನ ಕೈಲಿ?'' ಕೇಳಿದೆ.

''ತಾಳು ಗುರೂ. ಅದಿಕ್ಕೇ ಬಂದಿದ್ದು'' ಅನ್ನುತ್ತಾ ಕೈಲಿದ್ದ ಪತ್ರಿಕೆಯನ್ನು ಬಿಡಿಸಿ ನನಗೆ ತೋರಿಸುತ್ತಾ ''ಗುರೂ, ಇವತ್ತಿಂದ ನಾನೊಬ್ಬ ಕಾಲಮಿಷ್ಟು''

''ಏನಪ್ಪ ಅದೂ ಕಾಲಮಿಷ್ಟು ಅಂದರೇ?''

''ಅದೇ ಗುರೂ, ಪೇಪರಲ್ಲಿ ಬರಿಯೋಕೆ ಅಂತ ದಿನಾ ಒಂದು ಜಾಗ ಕೊಡ್ತಾರಲ್ಲ ಅಂಕಣ ಅಂತಾ. ಅದಕ್ಕೆ ಬರೀತಾ ಇದೀನಿ''

''ಹೌದಾ? ವೆರಿ ಗುಡ್. ಅಂಕಣದ ಹೆಸರು?''

''ಭವಿಷ್ಯವಾಣಿ''

''ನೀನು ಯಾವಾಗ ಕಲಿತುಕೊಂಡೆಯಯ್ಯಾ ಜೋತಿಶ್ಯಾಸ್ತ್ರಾನಾ?''

''ಕಲ್ತುಕೊಳ್ಳೋದೇನಿದೆ ಅದರಲ್ಲೀ? ನೋಡು ಅದೂ ಒಂದು ಕಲೆ ಗುರೂ. ನೋಡು ಒಂದೆರಡು ಉದಾಹರಣೆ ಕೊಡ್ತೀನಿ. ''ನೀವು ತುಂಬಾ ನಿಷ್ಠಾವಂತರು. ಅದನ್ನು ಮಾತ್ರ ಬಿಡಬೇಡಿ. ಬಿಟ್ಟಿರೋ ನೀವು ಕೆಟ್ಟಿರಿ; ಸಂತಾನವಿಲ್ಲದವರಿಗೆ ಅದರ ಸೂಚನೆ ಕಾಣಬಹುದು, ನಿಮ್ಮ ಪ್ರಯತ್ನವನ್ನು ಮಾತ್ರ ಮುಂದುವರಿಸಿ; ಕಾಫಿ ಡೇಯಲ್ಲಿ ಕೂತು ಛಾಟ್ ಮಾಡಲು ಯುವಕರಿಗೆ ಇದು ಪ್ರಶಸ್ತ ಸಮಯ. ಆದರೆ ಬಿ ಕೇರ್‌ಫುಲ್; ಇದು ಹಿರಿಯರಿಗೆ ಕಾಲವಲ್ಲ, ಮಕ್ಕಳು ಏನಾದರೂ ಅಂದರೆ ಕೈ ಕಟ್ ಬಾಯ್ ಮುಚ್ ಮಾರ್ಗವನ್ನು ಅನುಸರಿಸಿ; ಅವಿವಾಹಿತರಿಗೆ ಕಂಕಣಭಾಗ್ಯ ಇಷ್ಟರಲ್ಲೇ ಕೂಡಿಬರಲಿದೆ, ಜೀವನ ಸಂಗಾತಿಯನ್ನು ಆರಿಸುವಾಗ ಮೈಮೇಲೆ ಎಚ್ಚರವಿರಲಿ; ಇಬ್ಬರ ನಡುವೆ ಜಗಳವಾಗುತ್ತಿದ್ದರೆ ಯಾವುದೇ ಕಾರಣಕ್ಕೂ ಅದನ್ನು ಬಿಡಿಸಲು ಹೋಗಬೇಡಿ, ನಿಮಗೆ ಅಪಾಯ ತಪ್ಪಿದ್ದಲ್ಲ; ಸಾವಿರ ಜನ ಸಾವಿರ ಹೇಳ್ತಾರೆ, ನಿಮ್ಮ ಅಂತರಾತ್ಮ ಏನು ಹೇಳುತ್ತೋ ಅದನ್ನು ಮಾಡಿ; ಇವತ್ತು ಅನವಶ್ಯಕವಾಗಿ ಜೇಬಿಗೆ ಕತ್ತರಿ ಬೀಳಲಿದೆ, ಹುಷಾರು; ಆರೋಗ್ಯವೇ ಭಾಗ್ಯ, ಅದನ್ನು ಕಾಪಾಡಿಕೊಳ್ಳಿ; ದೇವಿಯನ್ನು ಭಕ್ತಿಯಿಂದ ಪ್ರಾರ್ಥಿಸಿಕೊಳ್ಳಿ, ಅಮ್ಮ ನಿಮ್ಮ ಎಲ್ಲ ಆಸೆಗಳನ್ನೂ ಈಡೇರಿಸಬಹುದು'' ಈ ತರಹ ಒಂದು ನೂರು ವಾಣಿಗಳನ್ನ ಲ್ಯಾಪ್‌ಟಾಪಲ್ಲಿ ಲೋಡ್ ಮಾಡಿಟ್ಟುಕೊಂಡಿದ್ದೀನಿ. ಪ್ರತಿ ದಿನ ಪಿಕ್ ಅಂಡ್ ಸ್ಪೀಕ್ ಅನ್ನೋ ಥರ ಒಂದೊಂದನ್ನು ಎತ್ತಿ ಮೇಷ, ವೃಷಭ ಅಂತ ಎಲ್ಲಾ ರಾಶಿಗಳಿಗೂ ಹಚ್ಚತೀನಿ''

''ಹೌದೂ. ಇದೇನು ಭವಿಷ್ಯಾನೋ ಇಲ್ಲ ಉಪದೇಶಾನೋ?''

''ನಿಂಗೊತ್ತಾಗಲ್ಲ. ಜನಕ್ಕೆ ಇದೇ ಭವಿಷ್ಯ''

''ಅಲ್ಲಯ್ಯಾ, ನಿನ್ನ ಭವಿಷ್ಯ ಸುಳ್ಳಾದರೆ ಜನ ಸುಮ್ನೆ ಇರ್ತರೇನಯ್ಯ''

''ನೋಡೂ ಇಲ್ಲೇ ಇರೋದು ಕರಾಮತ್ತು. ಒಂದು ರಾಶೀಲಿ ಇರೋ ಐವತ್ತು ಪರ್ಸೆಂಟ್ ಜನಕ್ಕೆ ಈ ಭವಿಷ್ಯ ಸುಳ್ಳಾದರೆ ಇನ್ನು ಐವತ್ತು ಜನಕ್ಕೆ ನಿಜವಾಗತ್ತೆ ಗುರೂ''

ಮೂಗಿನ ಮೇಲೆ ಬೆರಳಿಟ್ಟುಕೊಂಡೆ. ''ಯಾರಯ್ಯಾ ಈ ಐಡಿಯಾ ಕೊಟ್ಟೋರು?''

''ಯಾರು ಯಾಕೆ ಕೊಡಬೇಕು? ಒಂದೊರ್ಷ ಪೇಪರುಗಳಲ್ಲಿ ಬರೋ ನಿತ್ಯ ಭವಿಷ್ಯವಾಣಿಗಳನ್ನ ಅಧ್ಯಯನ ಮಾಡಿದ್ದೀನಿ ಗೊತ್ತೋ? ತೀಸೀಸ್ ಬರೀಲಿಲ್ಲ ಅಷ್ಟೆ''

''ಗ್ರೇಟ್ ಕಣಯ್ಯ. ಅದು ಸರೀ, ಯಾವ ಆಧಾರದ ಮೇಲೆ ನಿನಗೆ ಈ ಅಂಕಣ ಕೊಟ್ಟರೂ?''

''ಅದೇ ಒಂದು ದೊಡ್ಡ ಕತೆ ಗುರೂ. ಅವತ್ತು ಆ ಎಡಿಟರ್ ಹಿಂದೆ ಬಿದ್ದೆ. ಅವರು ಕಾಫಿಡೇಗೆ ಹೋದರು. ನಾನು ಹೋದೆ. ಅವರು ಕೂತ ಟೇಬಲ್‌ನಲ್ಲೇ ನಾನು ಕೂತಕೊಂಡೆ. ''ನಮಸ್ಕಾರ'' ಅಂದೆ. ''ನಿಮ್ಮೆಸರು ಮಂಜಯ್ಯ, ನೀವು ಒಬ್ಬ ಎಡಿಟರ‍್ರು ತಾನೇ'' ಅಂದೆ. ''ಹೌದು'' ಅಂದರು. ''ನಿಮ್ಮ ಮನೆಯೋರ ಹೆಸರು ನಾಲಕ್ಕಕ್ಷರದ್ದು ತಾನೇ'' ಅಂದೆ. ತಲೆ ಆಡಿಸುತ್ತಾ ''ಅರುಂಧತಿ'' ಅಂದರು. ''ನಿಮಗೆ ಆರತಿಗೊಬ್ಬಳು ಕೀರ್ತಿಗೊಬ್ಬ'' ಅಂದೆ. ಆವಯ್ಯನಿಗೆ ಆಶ್ಚರ್ಯವೋ ಆಶ್ಚರ್ಯ. ''ನಿಮಗೆ ಹೇಗ್ರೀ ಗೊತ್ತೂ?'' ಅಂದರು. ''ನಾನು ಮುಖಸಾಮುದ್ರಿಕೇಲಿ ಎಕ್ಸ್‌ಪರ್ಟು ಸಾರ್. ''ನೀವು ಮುಖ ನೋಡದೇನೂ ಭವಿಷ್ಯ ಹೇಳ್ತೀರಾ?'' ಕೇಳಿದರು. ''ಓ. ನಾನು ಹಸ್ತ ಸಾಮುದ್ರಿಕೆ ಜೊತೆಗೆ ರಾಶಿ ಭವಿಷ್ಯಾನ್ನೂ ಹೇಳ್ತೀನಿ'' ಅಂದೆ. ''ನೋಡಿ, ನಮ್ಮ ಪತ್ರಿಕೆಯಲ್ಲಿ ನಿತ್ಯ ಭವಿಷ್ಯ ಕಾಲಂ ಷುರು ಮಾಡಬೇಕೂಂತ ಇದ್ದೀವಿ. ಪ್ರತಿದಿನ ರಾಶಿ ಭವಿಷ್ಯ ಬರೀತೀರಾ? ಇನ್ನೂರು ರುಪಾಯಿ ಸಂಭಾವನೆ. ಒಪ್ಪಿಕೊಳ್ಳಿ'' ಅಂತ ಕೇಳಿಕೊಂಡರು. ಭಾಗ್ಯದ ಬಾಗಿಲು ತೆರೀತು ನೋಡು ಗುರೂ'' ಅಂದ.

''ಅವರ ವಿಷಯ ಎಲ್ಲಾ ನಿಂಗೆ ಹೇಗೆ ಗೊತ್ತಾಯ್ತಯ್ಯಾ?''

''ಅದು ಇನ್ನೊಂದು ಕತೆ. ಅವತ್ತೊಂದಿನ ನಾನು ಹೀಗೇ ನಡಕೊಂಡು ಹೋಗ್ತಾ ಇದ್ದೆ. ಒಂದು ಮನೆಯಿಂದ ಒಬ್ಬರು ಸ್ಕೂಟರಲ್ಲಿ ಆಚೆ ಬಂದ್ರು. ಹಿಂದೆ ಮಗಳು ಕೂತಿದ್ದಳು. ಗೇಟು ದಾಟಿ ರಸ್ತೇಲಿ ತಿರುಗಿದಾಗ ಆ ಹುಡುಗಿ ಕೈಯಲ್ಲಿದ್ದ ಫೈಲೊಂದು ಬಿದ್ದೋಯ್ತು. ನಾನು ಅದನ್ನೆತ್ತಿಕೊಂಡು ಅವರನ್ನ ಕೂಗಿದೆ. ತುಂಬ ದೂರ ಹೋಗಿಬಿಟ್ಟಿದ್ರು. ಹೋಟೆಲಿಗೆ ನುಗ್ಗಿ ಕಾಫಿಗೆ ಹೇಳಿ ಫೈಲನ್ನ ತೆಗೆದೆ. ಅದರಲ್ಲಿ ಆವಯ್ಯನ ಪ್ಯಾಮಿಲಿ ಫೋಟೋ, ಅದರ ಜೊತೆಗೆ ಎಲ್ಲಾ ಡೀಟೇಲ್ಸೂ ಇದ್ವು. ಪಾಸ್‌ಪೋರ್ಟಿಗೆ ಸಂಬಂದಿಸಿದ್ದಿರಬೇಕು. ಕಾಫಿ ಕುಡಿದು ವಾಪಾಸ್ ಬಂದು ಅವರ ಮನೇಗೆ ಹೋಗಿ ನಿಮ್ಮುಡುಗಿ ಇದನ್ನ ಬೀಳಿಸಿಕೊಂಡು ಹೋಯ್ತು ಅಂತ ಹೇಳಿ ಆವಮ್ಮನಿಗೆ ಕೊಟ್ಟು ಆ ಎಡಿಟರ್ ಹಿಂದೆ ಬಿದ್ದೆ. ಸಿಕ್ಕಿದರು. ನನ್ನ ಭಾಗ್ಯದ ಬಾಗಿಲು ತೆರೀತು. ನೋಡಿದು ಕತೆ'' ಅಂದ.

''ನೀನು ಪಾಕಡಾ ಇದ್ದೀಯಾ ಚೇಲಾ. ಅದ್ಸರಿ, ಇದರಿಂದ ನಿನಗೆ ಮುವ್ವತ್ತು ದಿನಕ್ಕೆ ಆರು ಸಾವಿರ ರುಪಾಯಿ ಬರತ್ತಷ್ಟೇ. ದೊಡ್ ದೊಡ್ಡೋರ ಜೊತೆ ಓಡಾಡಿಕೊಂಡು ಬೇಜಾನ್ ದುಡ್ಡು ಮಾಡ್ತಿದ್ದೋನು ಅದನ್ನ ಬಿಟ್ಟು ಬರೀ ಆರು ಸಾವಿರ ರೂಪಾಯಿಗೆ ಆ ಕೆಲಸ ಬಿಡ್ತಾ ಇದೀಯಲ್ಲಾ. ಚೆನ್ನಾಗಿ ಯೋಚನೆ ಮಾಡಿದ್ದೀಯಾ?''

ಚೇಲ ಜೋರಾಗಿ ನಗುತ್ತಾ ''ಗುರೂ, ನನ್ನ ಪ್ಲಾನ್ ಕೇಳಿದರೆ ನೀನು ನನಗೆ ನೋಬಲ್ ಪ್ರಶಸ್ತಿ ಕೊಡಿಸಿಬಿಡ್ತೀಯ ಗೊತ್ತಾ?''

''ಅದ್ಯಾವುದಪ್ಪ ಅಷ್ಟು ದೊಡ್ಡ ಪ್ಲಾನೂ?''

''ಟೀವಿಟೆನ್‌ಗೆ ಹೋಗ್ತೀನಿ. ಈ ಕಾಲಂ ತೋರಿಸ್ತೀನಿ. ಅರ್ಧ ಗಂಟೆ ಸ್ಲಾಟ್ ಕೊಡೋ ಹಂಗೆ ಮಾಡ್ತೀನಿ. ಜುಟ್ಟು ಬಿಟ್ಟುಕೋತೀನಿ. ಹಣೆ ತುಂಬ ವಿಭೂತಿ ಬಳಕೋತೀನಿ. ಗುರೂಜಿ ಅಂತ ನನ್ನನ್ನ ಕರಕೋತೀನಿ. ಟೀವೀನಲ್ಲೇ ಜನರ ಭವಿಷ್ಯ ಹೇಳ್ತೀನೀ. ನಾನೇನೂ ಹೇಳಲ್ಲ, ಅವರ ಕೈಲೇ ಎಲ್ಲಾ ಹೇಳಿಸ್ತೀನಿ. ಆಮೇಲೆ ಅವರೆಲ್ಲೋ ನಾನೆಲ್ಲೋ'' ಅಂದ.

''ಚೇಲಾ, ನೀನೇನೂ ಸಾಮಾನ್ಯನಲ್ಲ ಬಿಡಪ್ಪಾ. ಪ್ರಚಂಡ ಇದೀಯ. ಆಲ್ ದ ಬೆಸ್ಟ್'' ಅಂತ ಅವನ ಕೈ ಕುಲುಕಿದೆ. ■

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## ಬೀಚಿ ಪ್ರಕಾಶನ Beechi Prakashana

| ಪುಸ್ತಕದ ಹೆಸರು | ಲೇಖಕರು | ಬೆಲೆ | ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|---|---|---|
| ರೇಡಿಯೋ ನಾಟಕಗಳು | ಬೀಚಿ | 70 | ಲೇವಡಿ ಟೈಪಿಸ್ಟ್ | ಬೀಚಿ | 100 |
| ಮಾತ್ರೆಗಳು | ಬೀಚಿ | 125 | ಬೆಳ್ಳಿ ಪತ್ರಗಳು | ಬೀಚಿ | 100 |
| ತಿಂಮನ ತಲೆ | ಬೀಚಿ | 70 | ಮಹಾಯುದ್ಧ | ಬೀಚಿ | 100 |
| ಹುಚ್ಚು ಹುರುಳು | ಬೀಚಿ | 50 | ಅಮ್ಮಾವ್ರ ಕಾಲ್ಗುಣ | ಬೀಚಿ | 100 |
| ಸತೀ ಸೂಳೆ | ಬೀಚಿ | 110 | ಕತ್ತಲಲ್ಲಿ ಬಂದವಳು | ಬೀಚಿ | 90 |
| ಖಾದಿ ಸೀರೆ | ಬೀಚಿ | 170 | ಮಾತನಾಡುವ ದೇವರುಗಳು | ಬೀಚಿ | 75 |
| ಸತ್ತವನು ಎದ್ದು ಬಂದಾಗ | ಬೀಚಿ | 60 | ಮನೆತನದ ಗೌರವ | ಬೀಚಿ | 100 |
| ಕಾಣದ ಸುಂದರಿ | ಬೀಚಿ | 150 | ಗರತಿಯ ಗುಟ್ಟು | ಬೀಚಿ | 60 |
| ಕಲ್ಲು ಹೇಳಿತು | ಬೀಚಿ | 150 | ನಂಬರ್ ಐವತ್ತೈದು | ಬೀಚಿ | 60 |
| ತಿಂಮ ರಸಾಯನ | ಬೀಚಿ | 120 | ಉತ್ತರ ಧ್ರುವ | ಬೀಚಿ | 250 |
| ದೇವನ ಹೆಂಡ | ಬೀಚಿ | 170 | ನರಪ್ರಾಣಿ | ಬೀಚಿ | 75 |
| ಮೇಡಮ್ಮನ ಗಂಡ | ಬೀಚಿ | 110 | ನನ್ನ ಭಯಾಗ್ರಫಿ | ಬೀಚಿ | 270 |
| ಟೆಂಟ್ ಸಿನಿಮಾ | ಬೀಚಿ | 100 | ಹುಲಿಯ ಬೆನ್ನು ಮೇಲಿಂದ | ಬೀಚಿ | 125 |
| ಬೆಳ್ಳಿ ತಿಂಮ ನೂರೆಂಟು ಹೇಳಿದ | ಬೀಚಿ | 75 | ಅಂದನಾ ತಿಂಮ | ಬೀಚಿ | 125 |
| ಮುರಿದ ಬೊಂಬೆ | ಬೀಚಿ | 100 | ಹೆಂಡತಿ ನಕ್ಕಾಗ | ಬೀಚಿ | 125 |
| ಸೀತೂ ಮದುವೆ | ಬೀಚಿ | 80 | ಕಮಲಮ್ಮನ ಕುಂಕುಮ ಬಲ | ಬೀಚಿ | 125 |
| ಬೀchi ಬುಲ್ಲೆಟಿನ್ | | | ಕೇಶವ ರಾವ್ | | 200 |
| ಬೀchi ತೋಚಿದ್ದು ಗೀಚಿದ್ದು | | | ಸ್ವಾಮಿ ರಾವ್ ಕುಲ್ಕರ್ಣಿ | | 120 |
| ಬೊಂಬಾಟ್ ಬೀಚಿ | | | ಬೇಲೂರು ರಾಮಮೂರ್ತಿ | | 60 |
| ವಾಗ್ಬಾಣಗಳು | | | ಗಂಗಾವತಿ ಪ್ರಾಣೇಶ್ | | 50 |
| ನಗಿಸುವವನ ನೋವುಗಳು | | | ಗಂಗಾವತಿ ಪ್ರಾಣೇಶ್ | | 50 |
| ಪೊಲೀಸ್ ಎನಕೌಂಟರ್ | | | Dr..ಡಿ.ವಿ.ಗುರುಪ್ರಸಾದ್ IPS | | 200 |
| ಪೊಲೀಸ್ ಜೀವನದಲ್ಲಿ ಹಾಸ್ಯ | | | Dr.ಡಿ.ವಿ.ಗುರುಪ್ರಸಾದ್ IPS | | 200 |
| ವಿಶ್ವಪರ್ಯಟನೆ | | | Dr.ಡಿ.ವಿ.ಗುರುಪ್ರಸಾದ್ IPS | | 300 |
| ರಾಜೀವ್ ಗಾಂಧಿ ಭೀಕರ ಹತ್ಯಾ | | | Dr.ಡಿ.ವಿ.ಗುರುಪ್ರಸಾದ್ IPS | | 250 |

ಇಂಗ್ಲಿಷ್ ಮೂಲ: ಪದ್ಮಶ್ರೀ ಡಿ ಆರ್ ಕಾರ್ತಿಕೇಯನ್

**ಪ್ರತಿಗಳಿಗೆ ಸಂಪರ್ಕಿಸಿ.: 9845264304**

*ಕೊರವಂಜಿಯಿಂದ*

# ಫಣಿಯಪ್ಪನ ಹುಲಿಗಳು

● ಟೀಯೆಸ್ಸಾರ್ರಾವ್

ನಮ್ಮೂರಿನ ಸುಪ್ರಸಿದ್ಧ ಷಿಕಾರಿ Fearless ಫಣಿಯಪ್ಪನನ್ನು ಆ ದಿನ ಏನುಮಾಡಿದರೂ ತಪ್ಪಿಸಿಕೊಳ್ಳಲಾಗಲಿಲ್ಲ ರೈಲಿನಲ್ಲಿ. ಏಕೆಂದರೆ ಬೇರೆ ಡಬ್ಬಿಗಳಲ್ಲಿ 'ಬಾಗಿಲು ಯಾವುದು' ಅಂತ ಪತ್ತೆಯಾಗದಂತೆ ಜನ ಮುತ್ತಿಕೊಂಡಿದ್ದರು. ಈತ ನಮ್ಮ ಕಡೆ ಕಾಡಿನ ಖಗಮೃಗಗಳನ್ನು ಹೊಡೆದಿರುವುದಕ್ಕಿಂತ 'ಹೊಡೆದಿರುವೆ'ನೆಂದು ಹೇಳಿಕೊಳ್ಳುವ ಕತೆಗಳೇ ಹೆಚ್ಚು ಹಾಗೂ ಸ್ವಾರಸ್ಯ ಎನ್ನುವುದನ್ನು ಎಲ್ಲರೂ ಬಲ್ಲರು.

'ಈಗಲೋ, ಆಗಲೋ ಈತನ ಸಂಭಾಷಣೆಗೆ ತುತ್ತಾಗಬೇಕಲ್ಲಾ' ಎಂದು ನಾಲ್ಕು ಜನ ಮೊಸರಿನವರ ಮಧ್ಯೆ ಸಿಕ್ಕಿಕೊಂಡು, ದೋಸೆ ಮಧ್ಯದ ಚಟ್ನಿಯಾಗಿ, ಮುದುರಿಕೊಂಡು ಮುಂದಿನವನ ಹಳ್ಳಿ ತಲೆಯ ವಾಸನೆಯನ್ನು ಉಚ್ಛ್ವಾಸಿಸುತ್ತಾ ನಿಂತಿದ್ದ ನನ್ನ ವಾಸನೆ ಫಣಿಯಪ್ಪನಿಗೆ ತಗುಲಿದೊಡನೆಯೇ, ಆತ ನನ್ನ ಕೈಹಿಡಿದು ಸೆಳೆದುಕೊಂಡ ತನ್ನ ಕಡೆಗೆ. ನಾನು ಮೊಸರಿನವರ ಗೊಂಚಲಿನಿಂದ ಕಿತ್ತು ಬಂದೆ. ನನ್ನ ಚಪ್ಪಲಿಗಳು ಕಳಚಿ ಸಂದಿನಲ್ಲಿ ಮಾಯವಾದುವು. ಫಣಿಯಪ್ಪ ಮೈಯನ್ನು ಅಕ್ಕಪಕ್ಕಕ್ಕೆ ಎರಡು ಸಾರಿ ಹೊರಳಿಸಿ, ಒಂದು ತೊಡೆ ಎತ್ತಿ ಇನ್ನೊಂದರಮೇಲಿಟ್ಟು ಕೊಂಡ. ನಾನು ಮಲಗಿಕೊಳ್ಳುವಷ್ಟು ಸ್ಥಳವಾಯಿತು. ಕೂತುಕೊಂಡೆ.

''ನಾನು ಡಬ್ಬಲ್-ಹುಲಿ ಮಾರ್ಕಿನ ಬೀಡಿ ಉಪಯೋಗಿಸುವುದು- ಹಚ್ಚಿ ಒಂದು'' ಅಂತ ಕಟ್ಟು ತೆಗೆದ, ''ಕ್ಷಮಿಸಿ, ಅಭ್ಯಾಸವಿಲ್ಲ'' ಅಂತ ಪಾರಾದೆ.

''ನನ್ನ ಹತ್ತಿರ ಗನ್‌ಲೈಸೆನ್ಸ್ ಇರುವುದಕ್ಕೂ, ನಾನು ಹುಲಿಮಾರ್ಕು ಬೀಡಿಯನ್ನೇ ಉಪಯೋಗಿಸುವುದಕ್ಕೂ, ನನ್ನ ಮೀಸೆಗೂ ಅನೇಕರು ಸಂಬಂಧ ಹುಡುಕುವುದಕ್ಕೆ ಬುಡವಿಲ್ಲವಾದರೂ, ಇದರ ರುಚಿ ಬಲ್ಲವನೇ ಬಲ್ಲ'' ಅಂತ ಕಟ್ಟು ಒಳಗಿಟ್ಟು ಕಡ್ಡಿ ಹಚ್ಚಿದ. ''ಚಿಂತೆಯಿಲ್ಲ ಗಾಳಿ ಜೋರಾಗಿದೆ- ನನಗೆ ಈಚೆಗೆ, ರೈಲಿನಲ್ಲಿ ವಾಂತಿಯಾಗುವುದು ನಿಂತಿದೆ'' ಅಂತ ಸ್ವಲ್ಪ ಸರಿದು ಮೂಲೆ ಹಿಡಿದೆ. ಆತ ಬೀಡಿ ಕೊಡವಿಕೊಂಡು ಮುಂದರಿದ.

'ನಾನೇನು ಇವತ್ತು ನಿನ್ನೆಯಿಂದ ಅಲ್ಲಾಸ್ವಾಮೀ ಇದನ್ನ ಸೇದೋದು. ನನ್ನನ್ನ ನಮ್ಮಪ್ಪ ಕನ್ನಡ ಲೋಯರ್ ಸೆಕೆಂಡ್ರಿಯಿಂದ ಹಿಂದಕ್ಕೆ ಕರೆಸ್ಕೋಳ್ಳೋದಕ್ಕೆ ಒಂದು ವರ್ಷ ಮುಂಚಿನಿಂದಲೇ ಶುರುಮಾಡಿದ್ದೆ. ಹೇಗಿದ್ದರೂ ಬೇಜಾರು. ''ನಿದ್ದೆ''! ಆದೂ ಈ ಮನುಷ್ಯನ ಪಕ್ಕದಲ್ಲಿ! ಸುತರಾಂ ಸಾಧ್ಯವಿಲ್ಲದ ಮಾತು. ಮಾತಾದರೂ ಆಡೋಣ ಅಂತ ನಾನೇ ಬಾಯಿಬಿಟ್ಟೆ.

''ನೋಡಿದಿರಾ! 'ಡಬ್ಬಲ್ ಹುಲಿ' ಅಂದ ತಕ್ಷಣ ಜ್ಞಾಪಕವಾಯಿತು, ಮೊನ್ನೆ ಯಾರೋ ಎರಡು ಹುಲಿ ಹೊಡೆದರಂತೆ ನಿಜವೇ''? ಎಂದೆ.

''ಉಂಟೇ ಸ್ವಾಮಿ ಎಲ್ಲಾದರೂ? ನಾನು ಹೇಳಿರಲಿಲ್ಲವೆ- ಒಂದು ಸಾರಿ ನಾನು ಬಂದೂಕ ಬಾರ್ ಮಾಡಿದ ಮೇಲೆ ಗೊತ್ತಾಯ್ತು 'ಹೆಣ್ಣು' ಅಂತ. ಅದಕ್ಕೇ ಸುಮ್ನೆ ಒಂದು ಕಾಲು ಮುರಿದು ಬಿಟ್ಟಿದ್ದೆ ಅಂತ? ಆ 'ಮರೀ'ನ ಹೊಡಿಯೋದಕ್ಕೇಂತ ಡಬ್ಬಲ್ ಷಿಕಾರಿಗಳು ಹೋಗಿ

ಸಿಂಗಲ್ ಆಗಿ ಬಂದ ಮಾತಲ್ಲವೇ ನೀವು ಹೇಳ್ತಾ ಇರೋದು?''

''ಓ.... ಹಾಗೇನು?''

''ಸರಿ, ಮತ್ತಷ್ಟಲ್ದೆ.. ನಮ್ಮ ಕಾಡಿನ ಹುಲಿಗಳ ಕಿಲಾಡಿತನ ನನಗೆ ಗೊತ್ತಿಲ್ಲವೆ? ಯಾವ ಗಂಡಸಿಗೆ ಚರ್ಬಿ ಇದ್ರೀ? ಬಂದೂಕ್ ಬಾರು ಮಾಡಿ ಬದುಕಿ ಬರೋ ಅಷ್ಟು?''

''ತ್ಚು... ತ್ಚು.... ತ್ಚು''

''ಮೈಸೂರು ಹುಲಿಗಳು ಕಿಲಾಡಿ ಕೋಮಿನವು ಅನ್ನೋದಕ್ಕೆ ಹೇಳ್ತೇನ್ಕೇಳೀ– ಮೊನ್ನೆ ದಸರಾದಲ್ಲಿ ವಿಜಯದಶ್ಮೀಕ್ಕೂಡ ಚಕ್ಕರ್ ಹೊಡೆದು ಹುಲಿಕಲ್ ಕಾಡಿಗೆ ಹೋದೆ. ಯಾವಾಗ ಷಿಕಾರಿಗೆ ಹೋದರೂ, ನಾನಾಯ್ತು ನನ್ನ ಬಂದೂಕವಾಯ್ತು. ಬೇರೆ ಒಂದು ನರಪ್ರಾಣಿ ಕಟ್ಟಿಕ್ಕೊಂಡು ಹೋಗಾಲ್ಲ ನಾನು. ಹೋದೆ, ಇನ್ನೂ ಮಠಮಠ ಮಧ್ಯಾಹ್ನ. ಒಂದು ಬೀಡಿ ಹಚ್ಚಿ ದಂ–ತಗೊಳ್ಳೋಣಾಂತ ಕೂತೆ ಸ್ವಾಮಿ ಒಂದು ಮರದ ಪಕ್ಕದಲ್ಲಿ, ಅದು ಬಿದ್ದಮರವಲ್ಲ, 'ಹುಲಿ' ಅಂತ ಪತ್ತೆಯಾದದ್ದು ಅದರ ಮುದುರಿದ ಬಾಲ ನೆಲಕ್ಕೆ ಬಡಿದಾಗಲೇ ನನ್ನ ಬಾಯಿಂದ ಬೀಡಿ ಕೆಳಗೆ ಬಿತ್ತು. ನನ್ನ ಕೈಕಾಲಿನ ಶಾಖತ್ತೆಲ್ಲಾ ಹಾಗೇ ನೆಲಸಮವಾಯ್ತೂಂತನ್ನಿ. ಎಂಥಾ ಹುಲೀಂತೀರಿ! ಭಾರೀ... ಬಹು ಭಾರೀ ಮೈಸೂರು ಗಂಡು... ಇನ್ನೇನು ಸಿದ್ಧವಾಗಿದೆ.

ಎದ್ದೆ... ಹೇಗೆ ಎದ್ದೆನೋ ಆ ಪರಶಿವ ಬಲ್ಲ. ಹತ್ತುವುದಕ್ಕೆ ಮರವಿಲ್ಲ.. ಮರವಿಲ್ಲವೇನು, ಅಂಥಾ ಸಮಯದಲ್ಲಿ ಕಾಲೇ ಇಲ್ಲ ಅನ್ನಿ. ಓಡಲು ಪ್ರಯತ್ನ ಪಟ್ಟೆನೋ– ಒಂದೇ ನೆಗೆತಕ್ಕೆ ನನ್ನನ್ನ ಒಂದು ಯಃಕಚಿತ್ ಮೊಲದಂತೆ ಅಗಿದು ಬಿಡುತ್ತೆ... ಏನುಮಾಡೋದು? ಅದೆಲ್ಲಿತ್ತೋ ಧೈರ್ಯ?... ಅಂಥಾ ಸಮಯದಲ್ಲಿ ಭಗವಂತನೇ ಬಚಾಯಿಸ್ಬೇಕೂ ಅನ್ನೋದು ಸುಳ್ಳುಸ್ವಾಮಿ.' ನಿಮ್ಮ ಬುದ್ಧಿ ನಿಮ್ಮನ್ಕಾಪಾಡಿದ್ರೇ ಉಂಟು. ಕಾಲು ನಿಗರಿಸಿ ಎದ್ದು ಒಂದು ಹೆಜ್ಜೆಯಿಟ್ಟಿತು ಬಾಯಿ ಕಳೆದುಕೊಂಡೇ. ಒಂದು ಭಾರಿ ಗುಹೆ ಅದರ ಬಾಯಿ. ಒಂದು ಸಾರಿ ನಮ್ಮನೆಯಲ್ಲಿ ನಮ್ಮಾಕೆಯ ಹಲ್ಲು ಕೀಳೋವಾಗ ಡಾಕ್ಟ್ರು ಅಷ್ಟು ಗಾಬ್ರಿ ಬಿದ್ದದ್ದು ಯಾಕೇಂತ ಆಗ ತಿಳೀತು ನನಗೆ. ಧೈರ್ಯಮಾಡಿದೆ. 'ತಿರುಪತಿ ತಿಮ್ಮಪ್ಪಾ'ಂದೆ ನುಗ್ಗಿದೆ 'ಗಪ್' ಅಂತ. ಕಳೆದ ಬಾಯಿಗೆ ಕೈ ಇಟ್ಟು ಬಾಯಿನ ಕೆಳಭಾಗಕ್ಕೂ ಮೇಲ್ಭಾಗಕ್ಕೂ ಗೂಟ ಹೊಡೆದಂತೆ ಟೀಕಾ ಕೊಟ್ಟು ಭದ್ರಪಡಿಸಿಕೊಂಡೆ. ಗುಡುಗಿನಂತೆ ಕುಣಿಯಲಾರಂಭಿಸಿತು. ಹೀಗೇ ಇದ್ದರೆ ಕೆಲಸ ಕೆಟ್ಟಿತು. ಅಂದಿದ್ದೇ.... ಏನುಮಾಡಿದೆ ಗೊತ್ತೆ? ಅದರ ದಂಡೆ ಬಾಯಿನಲ್ಲಿ ಮೆಲ್ಲಗೆ ಒಂದೊಂದಾಗಿ ನನ್ನ ಎರಡು ಕಾಲುಗಳನ್ನೂ ತೂರಿಸಿ, –ಏನಾಶ್ಚರ್ಯವಿಲ್ಲ!... ಇಷ್ಟತ್ತಡಿ ಹುಲಿ ಸ್ವಾಮೀ ಅದು – ಹುಷಾರಾಗಿ ಮೈಯೆಲ್ಲಾ ಒಳಕ್ಕೆಳೆದುಕೊಂಡು ಕೈಬಿಟ್ಟೆ. ವಿಶಾಲವಾಗಿದೆ ಒಳಭಾಗ, ಉಸಿರಾಡೋದಕ್ಕೇಂತೀರಾ? ಅದರ ಎರಡು ಕಿವಿಗಳಿಂದಲೂ ಬರ್ತಾ ಇದ್ದಷ್ಟು ಬೆಳಕೂ ಗಾಳೀ ನಮ್ಮನೆ ನಾಲ್ಕು ಕಿಟಿಕೀಲಿ ಬರುಲ್ಲಾ ಸ್ವಾಮಿ.

ಹಾಗೇ ಮುಂದೆ ಹೋದೆ. ಅದರ ಹೃದಯ–ಗೇರುಸೊಪ್ಪೆಯಂತೆ ರಕ್ತ ಧುಮುಕುತ್ತಿದೆ ಶ್ವಾಸಕೋಶಗಳು – ಅದು ಉಸಿರೆಳೆದಾಗಲೆಲ್ಲಾ ಒಳಗೆ ಗಾಡಾಂಧಕಾರ ಕವಿಯುತ್ತೆ. ಕರೀ ಪಿತ್ತಕೋಶ– ನಮ್ಮೂರಿಗೆ ಬಂದಿರುವ ಅಮೀಲ್ದಾರ್ರ ಪಿತ್ತಕೋಶ ಇನ್ನೂ ಕಪ್ಪಗಿರಬಹುದು. ಹೊಟ್ಟೆ ಸಿಕ್ಕಿತು ಆಮೇಲೆ, ಸುಳ್ಯಾಕೆ ಹೇಳಲಿ. ಒಂದೆರಡು ಕಾಡು ದ್ರಾಕ್ಷಿ ಹಣ್ಣುಗಳನ್ನು ಮಾತ್ರ ಆರಿಸಿಕೊಂಡು ತಿಂದೆ ಅಲ್ಲಿ. ಹಾಗೆ ಆರಿಸುವಾಗ ಕೇವಲ ಕೆಲವು ದಿನಸದ ಹಿಂದೆ ಆ ಕಾಡಿಗೆ ಷಿಕಾರಿ ಹೋಗಿ ಪತ್ತೆ ಇಲ್ಲವಾಗಿದ್ದ ಶಂಭುವಿನ ತಲೆ ಕೂಡ ಇತ್ತು. ಅಯ್ಯೋ ಎಂದೆ. ಇದೇ

ಹುಲಿ ಬಾಯಿಗೆ ಕೈಕೊಟ್ಟು ಕತ್ತರಿಸಿಕೊಂಡು ಬಂದ ಕಾಡಯ್ಯನ ವಾಚೂ ಚೈನು ಸಮೇತ ಜಠರದಲ್ಲೇ ಇತ್ತು. ಆರು ಗಂಟೆ ಏಳು ನಿಮಿಷವಾಗಿತ್ತು ಅದರಲ್ಲಿ ಇದಲ್ಲದೆ ನಾಲ್ಕಾರು ನಾಯಿಗಳು, ಮೂರು ಮೊಲಗಳು, ಎರಡು ಇಲಿಗಳು ಆಟವಾಡುತ್ತಿದ್ದುವು ಮುಂದೆ ಹೋದೆ ಹಾಗೇ ತೆವಳಿಕೊಂಡು ರಸ್ತೆ ಇಕ್ಕಟ್ಟಾಯಿತು – ಕರುಳುಗಳು ಇನ್ನೂ ಇಕ್ಕಟ್ಟಾಯಿತು. ಕೈ ಚಾಚಿದೆ–ಬಾಲ! ಅಲ್ಲಾಡುತ್ತಿದೆ! ತುದಿವರೆಗೆ ಕೈಚಾಚಿದೆ. ತುದಿಸಿಕ್ಕಿತು. ಒಳಗಿನಿಂದಲೇ ಬೆರಳುಗಳನ್ನು ಕೊಂಡಿ ಮಾಡಿ ಬಾಲದ ತುದಿಯನ್ನು ಬಿಗಿಯಾಗಿ ಹಿಡಿದೆ. ಹಿಂದಕ್ಕೆ ಎಳೆಯಲಾರಂಭಿಸಿದೆ. ('ಹೇಗೆ ಗೊತ್ತೆ' ಅಂತ ತನ್ನಕೋಟು ಬಿಚ್ಚಿ ತೋಳಿಗೆ ಕೈ ಹಾಕಿ ತುದಿ ಹಿಡಿದು ತೋಳನ್ನು ಹಿಂದಕ್ಕೆ ಎಳೆದು ಒಳಮೈ ಹೊರಮಾಡಿ ತೋರಿಸಿದ)

ಹುಷಾರಾಗಿ ಹಿಂದಕ್ಕೆ ಸರಿಯುತ್ತಾ ಬಂದೆ. ಕರುಳು, ಜಠರ, ಹೃದಯ ಹೀಗೇ ಗಂಟಲುತನಕ, ನಂಬಿದರೆ ನಂಬಿ ಬಿಟ್ಟರೆ ಬಿಡಿ– ಬಾಲದ ಮುಷ್ಟಿಮಾತ್ರ ಬಿಡಲಿಲ್ಲ ಪುನಃ ಬಾಯಿಗೆ ಬಂದು ನಾಲಗೆಗೆ ಬಲವಾಗಿ ಒದ್ದೆ. ಬಾಯಿಬಿಟ್ಟಿತು. ಕೈಕೊಟ್ಟುಕೊಂಡು ಅಡ್ಡಲಾಗಿ– ಹುಷಾರಾಗಿ ನನ್ನ ದೇಹವನ್ನೂ, ಈ ಕೋಟಿನ ತೋಳಿನಂತೆ ಒಳಮೈ ಹೊರಗಾಗಿ ಬರುತ್ತಿದ್ದ ಅದರ ದೇಹವನ್ನು ಹಿಡಿದು ತರುತ್ತಿದ್ದ ಕಪಿಮುಷ್ಟಿಯನ್ನೂ, ವಿಶ್ವಪ್ರಯತ್ನದಿಂದ ಹೊರಕ್ಕೆಳೆದು ಧುಮುಕೇ ಬಿಟ್ಟೆ ಭೂಮಿಗೆ ! ಆದರೂ ಕಿಲಾಡಿ ಹುಲಿ ಅದು ಸ್ವಲ್ಪ ಒದ್ದಾಡಿ ನಿಂತೇ ಬಿಟ್ಟಿತು. ಆದರೇನು, ಚರ್ಮ ಒಳಗೆ–ಮಾಂಸ ಹೊರಗೆ, ಹಲ್ಲು ಹೊರಗೆ– ಮೀಸೆ ಒಳಗೆ...''

''ಬುರುಡೆ ಅನ್ನಬಹುದು ನೀವು. ಬೇಕಾದರೆ ಹೋಗಿ ನೋಡಿ ಹುಲಿಕಲ್ಲಿಗೆ –ಇವತ್ತಿಗೂ ಓಡಾಡುತ್ತಿದೆ ಅದೇ ಹುಲಿ–ಅದೇ ಸ್ಥಿತಿಯಲ್ಲಿ ನನಗಾಗಿ ಕಾಯುತ್ತಿದೆ– ಎಂದು ಬಂದು ತಿರುವಿಹಾಕುತ್ತಾನೋ ಪುಣ್ಯಾತ್ಮ ಅಂತ.''

'ಇಷ್ಟು ಬಲವಾದ ಬುರುಡೆ ಬಿಡುವುದಕ್ಕೆ ನಾಚಿಕೆಯಾಗುವುದಿಲ್ಲವೇ ಈ ಘಟಕ್ಕೆ' ಅನ್ನಿಸಿತು. ಆದರೂ ಆತನ ವಾಕ್ಚಾತುರ್ಯಕ್ಕೆ ಸಮ್ಮತ ಹೊಡೆದು ನಾನು ತೆಪ್ಪಗೆ ಕೂತರೆ, ಆತ ಬಿಡಬೇಕಲ್ಲ!

''ಇದಕ್ಕೇನು ಸ್ವಾಮೀ ಇಷ್ಟು ಆಶ್ಚರ್ಯಪಡ್ತೀರಿ. ಇಂಥದ್ದು ನೂರಾರು ಅನುಭವ ಆಗಿದೆ ನನಗೆ. ಇನ್ನೂ ಎಂತೆಂಥ ಕಿಲಾಡಿ ಹುಲಿಗಳಿವೆ ಅಂತೀರಿ ಹುಲಿ ಕಲ್ ಕಾಡಿನಲ್ಲಿ''. (ನನ್ನ ಮುಖದಲ್ಲಿನ ಬೇಜಾರು, ಆಕಳಿಕೆಗಳನ್ನು ಆಲಕ್ಷಿಸಿ ಮುಂದುವರಿಸಿದ ಪಾಪಿ!)

''ನನಗೆ ರಾತ್ರಿ ಷಿಕಾರಿ ಬಹು ಇಷ್ಟ ಕಾಡಿನಲ್ಲಿ ಕ್ಯಾಂಪ್ ಮಾಡಿ ವಾರ ಗಟ್ಟಲೆ ರಾತ್ರಿ ಷಿಕಾರಿ ಮಾಡುವುದುಂಟು ನಾನು. ರಾತ್ರಿ ಹನ್ನೆರಡು ಗಂಟೆಮೇಲೆ ಹೊರಟು ನನ್ನ ಮಾಮೂಲು ಮರದ ಪೊಟರೆಯಲ್ಲಿ ಕೂತು ಸುತ್ತಲೂ ನೋಡುವುದು. ಹಗಲಿಗಿಂತ ಬೇಗ ಪತ್ತೆಯಾಗುತ್ತವೆ ನನ್ನ ಕಣ್ಣಿಗೆ ಹುಲಿಗಳು ರಾತ್ರಿಯಲ್ಲಿ; ಹೊಳಪಾಗಿ ಝಳಪಿಸುವ ಎರಡು ಕಣ್ಣುಗಳೇ ಕಾಣಿಸುವುದು ಅಮಾವಾಸ್ಯೆ ಕತ್ತಲಿನಲ್ಲಿ, ಸರಿಯಾಗಿ ಎರಡು ಕಣ್ಣುಗಳ ಮಧ್ಯಕ್ಕೆ ಗುರಿ ಇಟ್ಟು ಹೊಡೆದು ಬಂದು ಮಲಗಿದರೆ, ಬೆಳಿಗೆದ್ದು ನನ್ನ ಕಡೆಯವರು ಹೋಗಿ ಹುಲಿಯ ಶವ ಎತ್ತಿಕೊಂಡು ಬರುವುದು ವಾಡಿಕೆ. ಹೀಗೇ, ನೂರಾರು ಚರ್ಮಗಳನ್ನು ಮನೆಯಲ್ಲಿ ಹಾಸಿರುವುದು ನಾನು.''

ನಾನು ಒಂದು ಸಾರಿ ಕಣ್ಣುಜ್ಜಿಕೊಂಡು, ಒಂದು ಆಸ್ಪರಿನ್ ಗುಳಿಗೆ ನುಂಗಿದೆ. ಆತನಿಗೆ ಕರುಣ ಬರಲಿಲ್ಲ.

''ಒಂದು ಸಾರಿ, ಹೀಗೇ ಹೊರಟೆ ಷಿಕಾರಿ. ಮೊನ್ನೆ ಮೊನ್ನೇಂದ್ರೇ, ಹೋಗಿ ಎಂದಿನಂತೆ ಅಮಾವಾಸ್ಯೆ ರಾತ್ರಿ ಗುರಿ ಇಟ್ಟು ಹೊಡೆದು ಬಂದು ಕ್ಯಾಂಪಿನಲ್ಲಿ ಮಲಗಿದೆ. ಬೆಳಗ್ಗೆ ಎದ್ದು ಕಾಡೆಲ್ಲಾ ಹುಡುಕಿದರೂ ಒಂದು ಸತ್ತ ಬೆಕ್ಕಿನ ಶವ ಕೂಡ ಸಿಕ್ಕಲಿಲ್ಲ. ನನ್ನ ಗುರಿ ತಪ್ಪುವುದೆಂದರೆ ಅರ್ಥವೇ ಇಲ್ಲಸ್ವಾಮಿ. ನನಗೆ ರೇಗಿತು- ಆಶ್ಚರ್ಯವೂ ಆಯಿತು. 'ಇರಲಿ, ಮಾಡುತ್ತೇನೆ' ಅಂತ ಮರಳಿ ಯತ್ನ ಮಾಡಿದೆ ಮಾರನೇ ರಾತ್ರಿ. ಹೆಣ ಬೀಳಲಿಲ್ಲ ಹೀಗೆ ಮೂರು ರಾತ್ರಿ ವ್ಯರ್ಥವಾದ ಮೇಲೆ ಒಂದು ಉಪಾಯ ಹೂಡಿದೆ! ಊರಿನಿಂದ ಸಾಹುಕಾರ್ ಸಣ್ಣಯ್ಯನ ಕಾರು ತಂದು ಷಿಕಾರಿ ಸ್ಥಳದಲ್ಲಿ ನಿಲ್ಲಿಸಿದೆವು- ಹುಲಿಗಳು ಇರುತ್ತಿದ್ದ ಸ್ಥಳಕ್ಕೆ ಎದುರಾಗಿ ನಿಲ್ಲಿಸಿದೆವು. 'ರಾತ್ರಿ ಎಂದಿನಂತೆ ನಾನು ಬಂದೂಕು ಬಾರ್ ಮಾಡಿ, ಗುಂಡು ಹಾರಿಸಿದ ಕೂಡಲೆ ಕಾರಿನ ಲೈಟುಗಳನ್ನು ಬೇಟೇ ಸ್ಥಳಕ್ಕೆ ಜೋರಾಗಿ ಬಿಟ್ಟು ಈ ಐಬನ್ನು ಪತ್ತೆ ಹಚ್ಚಬೇಕು' ಅಂತ ಏರ್ಪಾಡಾಯಿತು. ಎಲ್ಲಾ ಸಿದ್ಧವಾಯಿತು ರಾತ್ರಿ ಹೋದೆವು. ಕಾರ್ಗತ್ತಲು ಎಂದಿನಂತೆ ಎರಡು ಕಣ್ಣುಗಳು ಝಳಪಿಸುತ್ತಿವೆ. ಗುಂಡು ಹಾರಿತು-ಬಿಟ್ಟರು ಭಾರೀ ಲೈಟುಗಳನ್ನು ಎರಡನ್ನೂ, ಪತ್ತೆಯಾಯಿತು ಮರ್ಮ! ಏನು? ಗುಂಡು ಎಲ್ಲಿಹೋಯಿತು ಅಂತ.''

ನನ್ನ ಕುತೂಹಲ ಸ್ವಲ್ಪ ಕೆರಳಿತು. ಆಶ್ಚರ್ಯದಿಂದ ಬಾಯಿ ಬಿಟ್ಟು ಕೂತೆ, ಕಣ್ಣು ಆಗಲಿಸಿಕೊಂಡು.

''ಹುಲಿ ಸಿಕ್ಕಿತು, ಆದರೆ ಒಂದಲ್ಲ- ಎರಡು ಸಿಕ್ಕಿದುವು ಏನುಮಾಡಿದೆ ಗೊತ್ತೆ? ಒಂದರ ಪಕ್ಕದಲ್ಲಿ ಒಂದು ನಿಂತುಕೊಂಡು, ಒಂದು ಹುಲಿ ಬಲಗಣ್ಣನ್ನೂ, ಒಂದು ಹುಲಿ ಎಡಗಣ್ಣನ್ನೂ ಮುಚ್ಚಿಕೊಂಡಿವೆ. ನಾನು ಹೊಡೆದ ಗುಂಡು ಎರಡು ಕಣ್ಣುಗಳ ಮಧ್ಯೆ ಗಾಳಿಯಲ್ಲಿ ಮಾಯವಾಯಿತು!... ಹೇಗಿದೆ ಮೈಸೂರು ಹುಲಿಗಳ ಕಿಲಾಡಿತನ?...''

ಅಷ್ಟರಲ್ಲಿ ನಮ್ಮೂರು ಕೆರೆ ಕಾಣಿಸಿತು. ಚೀಲ, ಚಪ್ಪಲಿ, ಚೊಂಬು ಹುಡುಕಿ ಎತ್ತಿಟ್ಟುಕೊಂಡೆ. ''ಎಲಾ ಇಷ್ಟು ಗಡವನಾಗಿ, ಎಮ್ಮೆ ಹಾಗಿದ್ದಾನೆ- ಈತ ಚಿಕ್ಕಮಕ್ಕಳಿಗೆ ಹೊಡೆದಂತೆ ಇಂಥಾ ಭಾರೀ ಬುರುಡೆ ಬಿಡುತ್ತಾನಲ್ಲ... ಕೊಂಚವೂ ನಯ... ನಾಚಿಕೆ? ನಂಜನಗೂಡು ಆಚೆಗೆ ಇರಬಹುದು ಇವನ ಹುಟ್ಟು ಸ್ಥಳ'' ಅಂದುಕೊಂಡು ಸ್ಟೇಷನ್ ಕಾಣಿಸುತ್ತಲೂ ಏಳುವುದಕ್ಕೆ ಪ್ರಯತ್ನಿಸಿದ ಕೂಡಲೆ ಹೇಳಿದ;

''ಹೇಗಿದೆ ಸ್ವಾಮಿ ಕತೆಗಳು? 'ಯಾರು ಭಾರೀ ಬುರುಡೆ ಬಿಡುತ್ತಾರೆ' ಅನ್ನೋಪಂದ್ಯದಲ್ಲಿ ಮೊನ್ನೆ ಈ ಕತೆಗಳನ್ನು ಹೇಳಿ ನಾನು ಆರುದೋಸೆ, ನಾಲ್ಕು ಇಡ್ಲಿಗಳನ್ನು ಗೆದ್ದೆ ನಮ್ಮೂರಿನಲ್ಲಿ, ಬೇಜಾರಾಯಿತೇನೋ ನಿಮಗೆ, ಇನ್ನೊಂದು ಸಾರಿ ಸಿಕ್ಕಾಗ ''ವ್ಯಾಘ್ರ'' ಎನ್ನೋ ಬಿರುದು ಬಂದ ಕತೆ ಹೇಳುತ್ತೇನೆ- ನಮಸ್ಕಾರ.'' ■

**ಭಾರ ಯಾರಿಗೆ**

ಹರಿಯಾಣದ ಒಬ್ಬ ರೈತ ಒಂದು ಮೂಟೆ ಭತ್ತ ಹೊತ್ತು ಹೋಗುತ್ತಿದ್ದ. ಹಾದಿಯಲ್ಲಿ ಎತ್ತಿನ ಗಾಡಿಯಲ್ಲಿ ಬಂದ ಇನ್ನೊಬ್ಬ ರೈತ ಯಾಕೆ ಭಾರ ಹೊತ್ತುಕೊಂಡು ಹೋಗ್ತೀಯ. ನನ್ನ ಎತ್ತಿನ ಗಾಡಿಯಲ್ಲಿ ಬಾ ಎಂದು ಅವನನ್ನು ಗಾಡಿಗೆ ಹತ್ತಿಸಿಕೊಂಡ. ಗಾಡಿ ಹತ್ತಿದ ರೈತ ಭತ್ತದ ಮೂಟೆಯನ್ನು ಮಾತ್ರ ತಲೆಯ ಮೇಲೇ ಇಟ್ಟುಕೊಂಡಿದ್ದ., ಗಾಡಿಯವನು ಯಾಕೆ ಮೂಟೆಯನ್ನು ಇನ್ನೂ ಹೊತ್ತುಕೊಂಡೇ ಇದ್ದೀಯ ಗಾಡಿಯೊಳಗೆ ಹಾಕು ಅಂದ. ಅದಕ್ಕೆ ರೈತ ಬೇಡಪ್ಪ ಈಗಾಗಲೇ ಗಾಡಿ ತುಂಬಾ ಭಾರವಾಗಿದೆ. ನನ್ನ ಮೂಟೆಯನ್ನೂ ಹಾಕಿದರೆ ನಿನ್ನ ಎತ್ತಿಗೆ ಇನ್ನೂ ಹೆಚ್ಚಿನ ಭಾರವಾಗುತ್ತದೆ. ಅದಕ್ಕೆ ನನ್ನ ಮೂಟೆಯನ್ನು ನಾನೇ ಹೊತ್ತು ಕೂತಿರ್ತೀನಿ ಅಂದ

# ಬಲವಂತ ಮಾಘ ಸ್ನಾನ

●ಎಂ.ಎಸ್. ಬಾಲು

ಮಾಘ ಮಾಸದಲ್ಲಿ ಬೆಳಗಿನ ಜಾವ ಹೊಳೆಗೆ ಹೋಗಿ ಬಿದ್ದರೆ ಹೇಗಿರುತ್ತೆ? ಹೇಳಿ? ಈ ಅನುಭವ ನನಗೆ ನೀರಿಗೆ ಬೀಳದೆ ಆಯಿತು!

ಒಂದು ಪೂರ್ಣಿಮ ರಾತ್ರಿ, ಮಾರ್ವಾಡಿ ಜನರ ಕಲ್ಯಾಣ ಮಹೋತ್ಸವದ ಮದುವೆಯ ಮೆರವಣಿಗೆ ವಿಜೃಂಭಣೆಯಿಂದ ಸಾಗುತ್ತಿದೆ.

ಸಿನಿಮಾ ನಟಿಯರನ್ನೇ ನಾಚಿಸುವಂತೆ, ಸ್ತ್ರೀಯರು ನಾನಾ ವರ್ಣದ ಉಡುಗೆಗಳನ್ನು ಧರಿಸಿಕೊಂಡು, ವಜ್ರ ವೈಢೂರ್ಯಗಳ ತೊಡಿಗೆಗಳನ್ನು ಹಾಕಿಕೊಂಡು ಹೋಗುತ್ತಿದ್ದಾರೆ. ಬಿಳಿ ಕುದುರೆ ಮೇಲೆ ರಾಜ ಸ್ಥಾನದ ರಾಜಕುಮಾರನಂತೆ ಅಲಂಕರಿಸಿಕೊಂಡು, ಕತ್ತಿಯೊಂದನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಮದುವೆ ಗಂಡು ವೈಭವದಿಂದ ಬರುತ್ತಿದ್ದಾನೆ. ಮುಂದೆ ಬ್ಯಾಂಡ್‌ವ್ಯಾನ್‌ನಲ್ಲಿ ಒಂದು ಹುಡುಗಿ ಹಾಡು ಹೇಳಿಕೊಂಡು ಹೋಗುತ್ತಿದ್ದಾಳೆ. ಅದಕ್ಕೆ ಬ್ಯಾಂಡ್‌ನವರು ಅನುಗುಣವಾಗಿ ಬ್ಯಾಂಡ್ ಬಾರಿಸಿಕೊಂಡು ನಡೆಯುತ್ತಿದ್ದಾರೆ.

ಛತ್ರ ಸಮೀಪಿಸುತ್ತಿದ್ದಂತೆ, ಮದುಮಗ ತುಂಬಾ ಕಾತುರದಿಂದ ತನ್ನ ಭಾವಿ ವಧುವನ್ನು ನೋಡಲು ಕುದುರೆಯಿಂದ ಧುಮುಕುತ್ತಾನೆ.

ಆ ಭರದಲ್ಲಿ ಅವನ ಕತ್ತಿ ಕುದುರೆಗೆ ಚುಚ್ಚಿ ಅದು ಜೋರಾಗಿ ಕೆನೆಯುತ್ತಾ ಹಾರಿ ಹೋಗುತ್ತದೆ. ಬ್ಯಾಂಡ್‌ನವರು ಜೋರಾಗಿ ಢಮಾರ್ ಎಂದು ಬಾರಿಸುತ್ತಾರೆ. ಆ ಶಬ್ದಕ್ಕೆ ನನಗೆ ಎಚ್ಚರವಾಗಿ ಬಿಡುತ್ತದೆ. ಅಯ್ಯೋ ಎಲ್ಲ ಕನಸೇ ಅಂತ ನಿರಾಶೆಯಾಯಿತು.

ಆದರೆ, ಆ ಹುಡುಗಿ ಹಾಡಿದ ಎರಡು ವಾಕ್ಯಗಳು ಚೆನ್ನಾಗಿ ಜ್ಞಾಪಕಕ್ಕೆ ಬಂತು. ಅದು ಹೀಗಿತ್ತು.

ಹುಣ್ಣಿಮೆ ಚಂದ್ರಮನ ಬೆಳಕಿನ ರಾತ್ರಿಯಿದು.

ಕಂಗಳು ಕಾಣುವ ಬೆಳಕಿನ ರಾತ್ರಿಯಿದು.

ಪಕ್ಕದಲ್ಲಿ ಮಲಗಿದ್ದ ನನ್ನ ಹೆಂಡತಿಯನ್ನು ಎಬ್ಬಿಸಿ, ನನ್ನ ಕನಸಿನ ಬಗ್ಗೆ ಎಲ್ಲಾ ಹೇಳಿದೆ. ಈ ಎರಡು ಲೈನ್‌ಗಳು ತುಂಬಾ ಚೆನ್ನಾಗಿವೆ. ಅವನ್ನು ಡೆವಲಪ್ ಮಾಡಿ ಒಂದು ಕವನ ಬರಿ ಎಂದೆ. ಸ್ವಲ್ಪ ಸಮಯ ಯೋಚಿಸಿ, ಇದನ್ನು ನೀವೇ ಬರೀರಿ ಎಂದಳು. ಈಗ ಶುರುವಾಯಿತು ನೋಡಿ, ನನಗೆ ಬಲವಂತ ಮಾಘ ಸ್ನಾನ.

ಅಲ್ಲಾಕಣೆ, ನನ್ನ ಮಾತೃ ಭಾಷೆ ಕನ್ನಡ ಆದ್ರೂ, ನಾನು ಕನ್ನಡ ಓದಿರುವುದು ಮಾಧ್ಯಮಿಕ ಶಾಲೆತನಕನೆ. ನಂತರ ಸಂಸ್ಕೃತ ಮತ್ತು ಇಂಗ್ಲೀಷ್ ಆಗಿಹೋಯಿತು. ಆಮೇಲೆ ತಾಂತ್ರಿಕ ವಿದ್ಯಾಭ್ಯಾಸ. ನನಗೆ ಕನ್ನಡ ಸಾಹಿತ್ಯದ ಬಗ್ಗೆ ಗೊತ್ತಿಲ್ಲ ಎಂದೆ. ನೀನಾದರೊ, ಕನ್ನಡವನ್ನು ಚೆನ್ನಾಗಿ ತಿಳಿದವಳು, ನುರಿತವಳು, ಸಾಲದಕ್ಕೆ ಕನ್ನಡ ಪಂಡಿತರ ಮಗಳು ಅಂತ ಎಲ್ಲಾ ಹೇಳಿದೆ. ಆದರೂ ಕೇಳದೆ, ನೀವೆ ಬರೀರಿ ಎಂದು ಹೇಳಿಬಿಟ್ಟಳು.

ನನಗೆ ಖಂಡಿತ ಬರಲ್ಲ ಎಂದು ಎಷ್ಟು ಹೇಳಿದರೂ ಕೇಳಲಿಲ್ಲ, ತಲೆ ಕೆರ್‍ಕೊಂಡು ಚೆನ್ನಾಗಿ ಯೋಚನೆ ಮಾಡಿ, ಎಲ್ಲಾ ಹೊಳೆಯುತ್ತದೆ ಎಂದು ಹೇಳಿ ಮನೆ ಕೆಲಸಕ್ಕೆ ಹೊರಟು ಹೋದಳು.

ಒಂದು ದಿನ, ಯಾರೂ ಮನೆಯಲ್ಲಿ ಇಲ್ಲದಿದ್ದಾಗ, ತಲೆಯನ್ನು ಚೆನ್ನಾಗಿ ಕೆರೆದು ಕೊಂಡೆ. ಕೈಗೆ ಬಂತು ಸ್ವಲ್ಪ ನನ್ನ ಬಿಳಿಕೂದಲು, ತಲೆ ಸ್ವಲ್ಪ ಬೋಕ್ ಆಯಿತು. ತಲೆ ಉರಿಯಿತು. ಏನೂ ಹೊಳೆಯಲಿಲ್ಲ ಅದೇ ಯೋಚನೆಯಲ್ಲೇ ಇದ್ದೆ. ಒಂದೆರಡು ದಿನ ಆದ ಮೇಲೆ ದೂರದಲ್ಲಿ ಆಕಾಶದಲ್ಲಿ ಒಂದೆರಡು ಸಣ್ಣ ಮಿಂಚುಗಳು ಹೊಳೆದಂತೆ ತಲೇಲಿ ಏನೊ ಭಾಸವಾಯಿತು.

ಥಾಮಸ್ ಗ್ರೇ ದು ''ಎಲಿಜಿ ರಿಟನ್ ಇನ್ ಕಂಟ್ರಿ ಚರ್ಚಯಾರ್ಡ್'' ಜ್ಞಾಪಕಕ್ಕೆ ಬಂತು. ಪಾಪ! ಅವನು ಎಷ್ಟು ಕಷ್ಟಪಟ್ಟನೊ? ನಿಧಾನವಾಗಿ ಯೋಚಿಸುತ್ತ, ದಾರಕ್ಕೆ ಒಂದೊಂದೆ ಮಣಿ ಪೋಣಿಸುವಂತೆ ಅಕ್ಷರ ಸಂಯೋಜನೆ ಮಾಡತೊಡಗಿದೆ.

ದಿನಕ್ಕೊಂದು, ನಾಲ್ಕುದಿನಕ್ಕೊಂದು, ವಾರಕ್ಕೊಂದು, ಹೀಗೆ ಪಂಕ್ತಿಗಳನ್ನು ಬರೆಯುತ್ತಾ ಬಂದೆ. ಒಂದು ತಿಂಗಳ ಹೊತ್ತಿಗೆ ಹೀಗೆ ರೂಪಗೊಂಡಿತು.

**ಬೆಳಕಿನ ರಾತ್ರಿ**

ಹುಣ್ಣಿಮೆ ಚಂದ್ರಮನ ಬೆಳಕಿನ ರಾತ್ರಿಯಿದು.
ಕಂಗಳು ಕಾಣುವ ಬೆಳಕಿನ ರಾತ್ರಿಯಿದು.
ರವಿಯ ಮರೆಯಲಿ ಹೊಳೆದ ಬೆಳಕಿನ ರಾತ್ರಿಯಿದು.
ನೈದಿಲೆ ನಗುವಿನ ಚಂದದ ಬೆಳಕಿನ ರಾತ್ರಿಯಿದು.
ಬೇಸಿಗೆ ಬೇಗೆಯ ತಂಪಿಸುವ ಬೆಳಕಿನ ರಾತ್ರಿಯಿದು.
ಬಾನಲಿ ತಾರೆಯರ ನಾಚಿಸುವ ಬೆಳಕಿನ ರಾತ್ರಿಯಿದು.
ಝುಳ ಝುಳ ಝರಿಯ ಬೆಳಗಿಸುವ ಬೆಳಕಿನ ರಾತ್ರಿಯಿದು.
ಇರುಳಲಿ, ವನದಲಿ ಹಾದಿ ತೋರುವ ಬೆಳಕಿನ ರಾತ್ರಿಯಿದು.
ಮುಳುಗುವ ರವಿಯ ಕೂಗಿಗೆ ಉತ್ತರಿಸುವ ಬೆಳಕಿನ ರಾತ್ರಿಯಿದು.
ದೂರದ ಬೆಟ್ಟಕೆ ಬೆಳ್ಳಿಯ ತೊಡಿಸುವ ಬೆಳಕಿನ ರಾತ್ರಿಯಿದು.
ಹೊಲದಲಿ ನಲಿದಾಡುವ ತೆನೆಗಳ ಮಿರಿಮಿರಿ ಮಿರುಗಿಸುವ ಬೆಳಕಿನ ರಾತ್ರಿಯಿದು.
ಪ್ರೇಮಿಗಳ ಮಿಲನದ ಬೆಳಕಿನ ರಾತ್ರಿಯಿದು.
ಬಾಲ ರವಿಯ ಮೆಚ್ಚುಗೆಯಲಿ ಕಣ್ಮರೆಯಾಗುತಿಹ
ಬೆಳಕಿನ ರಾತ್ರಿಯಿದು. ಬೆಳಕಿನ ರಾತ್ರಿಯಿದು.

ಇದು ಹೇಗಿದೆ? ಎಂದು ನನ್ನ ಹೆಂಡತಿಯನ್ನು ಕೇಳಿದೆ. ಅದಕ್ಕೆ ಅವಳು ಸ್ವಲ್ಪ ಯೋಚಿಸಿ, ನಿಮ್ಮ ''ಅಪರಂಜಿ''ಯ ಬಳಗವನ್ನೆ ಕೇಳಿ, ಎಂದು ಹೇಳಿ ಬಿಟ್ಟಳು.

■

# ಸೌಂದರ್ಯ ವೃದ್ಧಿ

**● ಮಣ್ಣೆ ರಾಜು**

'ಹೆಂಗಸರಿಗೆ ಮೈ ಮೇಲೆ ಪ್ರಜ್ಞೆ ಇಲ್ಲದಿದ್ದರೂ ಸೌಂದರ್ಯ ಪ್ರಜ್ಞೆ ಇರಬೇಕು' ಅಂದಳು ಸುಮಿ. 'ಹೌದೌದು, ಇರಬಹುದೇನೋ' ಅಂದ ಶಂಕ್ರಿ. 'ಈಗ ನನ್ನ ಸೌಂದರ್ಯ ಟ್ವೆಂಟಿಫೈವ್ ಪರ್ಸೆಂಟ್ ಜಾಸ್ತಿ ಆಗಿದೆ ಅಲ್ಲವೇನ್ರೀ?' ಕನ್ನಡಿ ಮುಂದೆ ನಿಂತು ವಯ್ಯಾರ ಮಾಡುತ್ತಾ ಕೇಳಿದಳು ಸುಮಿ.

ಇಲ್ಲ ಅನ್ನಲಾಗದೆ, 'ಹೌದು ನಿನ್ನ ಸೌಂದರ್ಯ ಇಂಪ್ರೂ ಆಗ್ತಿದೆ' ಅಂದ.

ಸುಮಿ ಸೌಂದರ್ಯ ವೃದ್ಧಿಯ ಕ್ಲಾಸ್‌ಗೆ ಹೋಗುತ್ತಿದ್ದಾಳೆ. ವಾರದ ಕೋರ್ಸ್. ಮುಂಬೈನ ಸೌಂದರ್ಯ ತಜ್ಞೆ ಈ ಊರಿನಲ್ಲಿ ಸೌಂದರ್ಯ ತರಬೇತಿ ತರಗತಿ ಶುರು ಮಾಡಿ ಸುಮಿ ತರಹದ ಹೆಂಗಸರ ಅಂದ ಚೆಂದ ಹೆಚ್ಚಿಸುತ್ತಿದ್ದಾಳೆ. ಒಂದು ಕೋರ್ಸ್‌ಗೆ ಶುಲ್ಕ ಕೇವಲ ಹತ್ತು ಸಾವಿರ ರೂಪಾಯಿ ಮಾತ್ರ.

'ಬ್ಯೂಟಿ ಮೇಡಂ ಹೇಳಿಕೊಡುವ ಪಾಠ, ಕಲಿಸುವ ಲೆಸನ್ನನ್ನು ಫಾಲೋ ಮಾಡಿ ಚೆನ್ನಾಗಿ ಕಲಿತು ಸೌಂದರ್ಯ ಹೆಚ್ಚಿಸಿಕೊಳ್ತೀನ್ರೀ...' ಒಬಿಡಿಯಂಟ್ ಸ್ಟೂಡೆಂಟ್ ರೀತಿ ಸುಮಿ ಹೇಳಿದಳು.

'ಹೌದು, ಚೆನ್ನಾಗಿ ಕಲಿತು ನೀವೆಲ್ಲಾ ಅಪ್ರತಿಮ ಸುಂದರಿಯರಾಗಿ, ಈ ಊರನ್ನು ಬ್ಯೂಟಿ ಸಿಟಿ ಮಾಡಿ' ಅಂತ ಶಂಕ್ರಿ ಹಾರೈಸಿದ. 'ಏನೇನೋ ಬ್ಯೂಟಿ ಐಟಂ ಪರ್ಚೇಸ್ ಮಾಡಬೇಕು, ಐದು ಸಾವಿರ ತಗೊಂಡು ಹೋಗ್ತೀನಿರೀ...' ಅಂದಳು.

'ಶಾರ್ಟೇಜ್ ಬರಬಹುದೇನೋ, ಇನ್ನೊಂದೆರಡು ಸಾವಿರ ಜಾಸ್ತಿನೇ ತಗೊಂಡು ಹೋಗು' ಅಂದ ಶಂಕ್ರಿ.

'ಇವತ್ತು ಕ್ಲಾಸ್‌ನಲ್ಲಿ ಪ್ರಾಕ್ಟಿಕಲ್ಸ್ ಇದೆ ರೀ... ಮೇಡಂ ನಮಗೆಲ್ಲಾ ಮೇಕಪ್ ಮಾಡಿ, ಮನೆಯಲ್ಲೇ ಮೇಕಪ್ ಹೇಗೆ ಮಾಡಿಕೊಳ್ಳಬಹುದು ಅನ್ನೋದನ್ನ ಹೇಳಿಕೊಡ್ತಾರೆ. ನಾನಂತೂ ಸೀರಿಯಸ್ಸಾಗಿ ಕಲಿತುಕೊಳ್ತೀನಿ...'

'ವೆರಿಗುಡ್, ಒಂದು ಚಾಪ್ಟರ್ರೂ ಬಿಡದಂತೆ ಕಲಿತುಕೊ'

'ನಾಳೆ ಕ್ಲಾಸ್‌ನಲ್ಲಿ ಬ್ಯೂಟಿ ಟಿಪ್ಸ್ ಕೊಡ್ತಾರೆ... ಮದುವೆ, ನಾಮಕರಣದಂಥಾ ಫಂಕ್ಷನ್‌ಗೆ ಯಾವ ಥರದ ಡ್ರೆಸ್, ಹೇರ್‌ಸ್ಟೈಲ್ ಮಾಡಿಕೊಂಡು ಹೋಗಬೇಕು, ಫ್ರೆಂಡ್ಸ್ ಪಾರ್ಟಿಗಳಿಗೆ ಯಾವ ಥರ, ಶಾಪಿಂಗ್, ಸಿನಿಮಾಗಳಿಗೆ ಹೋಗುವಾಗ ಯಾವ ರೀತಿ ಡ್ರೆಸ್, ಮೇಕಪ್ ಇರಬೇಕು, ಮಕ್ಕಳ ಸ್ಕೂಲಿಗೆ ಆಸ್ ಎ ಪೇರೆಂಟ್ ಆಗಿ ಯಾವ ಡ್ರೆಸ್ ಹಾಕ್ಕೊಂಡು ಹೋಗಬೇಕು ಅಂತೆಲ್ಲಾ ಹೇಳಿಕೊಡುತ್ತಾರೆ ಕಣ್ರೀ...' ಅಂತ ನುಲಿದಳು.

'ಹೌದೆ? ಭೇಷ್... ವೈಕುಂಠ ಸಮಾರಾಧನೆ, ಶಿವಗಣಾರಾಧನೆಗೂ ಸೆಪರೇಟ್ ಡ್ರೆಸ್ ಕೋಡ್ ಇರುತ್ತಂತಾ?' ಅನುಮಾನ ಬಗೆಹರಿಸಿಕೊಳ್ಳಲು ಶಂಕ್ರಿ ಕೇಳಿದ.

'ಇದ್ದೇ ಇರುತ್ತೆ ರೀ, ಮಾರ್ಕೇಟ್‌ಗೆ, ತವರು ಮನೆಗೆ, ಅತ್ತೆ ಮನೆಗೆ ಹೋಗಲು ಪ್ರತ್ಯೇಕ ಡ್ರೆಸ್ಸು, ಮೇಕಪ್ಪು ಇರುತ್ತೆ, ಅದನ್ನೆಲ್ಲಾ ಮುಂದಿನ ಕ್ಲಾಸ್‌ನಲ್ಲಿ ಹೇಳಿಕೊಡ್ತಾರೆ' ಸುಮಿ ಸಡಗರದಿಂದ ಹೇಳಿದಳು.

'ಇಷ್ಟೆಲ್ಲಾ ಹೇಳಿಕೊಡ್ತಾರೆ ಅಂದ್ರೆ ಅವರ ಹತ್ತು ಸಾವಿರ ಫೀಸು ಕಡಿಮೆ ಆಯ್ತು ಅನ್ಸುತ್ತೆ...' ಶಂಕ್ರಿ ಇನ್ನೇನೊ ಹೇಳಲು ಹೋದ.

'ಹೌದು ರೀ, ನಮಗೂ ಹಾಗೇ ಅನ್ಸಿದೆ. ಕೋರ್ಸ್ ಕಂಪ್ಲೀಟ್ ಆದ್ಮೇಲೆ ನಾವೆಲ್ಲಾ ಸೇರಿ ಬ್ಯೂಟಿ ಮೇಡಂಗೆ ದೊಡ್ಡದೊಂದು ಗಿಫ್ಟ್ ಕೊಡೋಣ ಅಂದುಕೊಂಡಿದ್ದೇವೆ...' ಎಂದಳು ಸುಮಿ.

'ಬ್ಯೂಟಿ ಕೋರ್ಸ್ ಮುಗಿದ ಮೇಲೆ, ಮೇಡಂ ನಿಮಗೆ ಪರೀಕ್ಷೆನೂ ಮಾಡ್ತಾರಾ?' ಶಂಕ್ರಿಗೆ ಕುತೂಹಲ.

'ಮಾಡ್ತಾರೆ ರೀ. ವಾರದಲ್ಲಿ ಯಾರು ಹೆಚ್ಚು ಸುಂದರಿಯಾಗಿ ರೂಪುಗೊಂಡಿರುತ್ತಾರೋ ಅವರಿಗೆ ಎ ಗ್ರೇಡ್ ಕೊಟ್ಟು, ಅವರು ಸಿನಿಮಾ, ಸೀರಿಯಲ್‌ನಲ್ಲಿ ನಟಿಸೋ ಚಾನ್ಸ್‌ಗೆ ಶಿಫಾರಸ್ಸು ಮಾಡ್ತಾರಂತೆ ರೀ...' ಸುಮಿ ರೋಮಾಂಚನಗೊಂಡಳು. ■

---

## ಮಂಗನಾಟ

*ಸಂಗ್ರಹ : ಆನಂದ*

ಒಂದೂರಿನಲ್ಲಿದ್ದ ತುಂಬಾ ಮಂಗಗಳನ್ನು ಹಿಡಿದುಕೊಟ್ಟರೆ, ಒಂದು ಮಂಗನಿಗೆ ನೂರು ರುಪಾಯಿಯ ಹಾಗೆ ಕೊಡುವುದಾಗಿ ವ್ಯಾಪಾರಿಯೊಬ್ಬ ಹೇಳಿದ. ಗ್ರಾಮವಾಸಿಗಳು ಮಂಗಗಳನ್ನು ಹಿಡಿದು ಕೊಟ್ಟು ದುಡ್ಡು ಇಸ್ಕೊಂಡರು...ನಂತರ ಆ ವ್ಯಾಪಾರಿ ಒಂದು ಮಂಗನಿಗೆ ಇನ್ನೂರು ರುಪಾಯಿಯಂತೆ ದರ ಹೆಚ್ಚಿಸಿದ..ಗ್ರಾಮವಾಸಿಗಳು ಮಂಗಗಳನ್ನು ಹಿಡಿಯಲು ಹರಸಾಹಸಪಟ್ಟು ಸಿಕ್ಕಿದ ಮಂಗಗಳನ್ನು ಇನ್ನೂರು ರೂಪಾಯಿಗೆ ಮಾರಿದರು...

ಪುನಃ ಆ ವ್ಯಾಪಾರಿ ಒಂದು ಮಂಗನಿಗೆ ಐನೂರು ರುಪಾಯಿ...!! ಆ ಗ್ರಾಮವಾಸಿಗಳು ಊಟ ನಿದ್ದೆ ಬಿಟ್ಟು ಮಂಗನಿಗಾಗಿ ಹುಡುಕಾಡತೊಡಗಿದರು.... ಐದಾರು ಸಿಕ್ಕಿದವು ಅವನ್ನು ಆ ವ್ಯಾಪಾರಿಗೆ ಮಾರಿದರು... ಉಳಿದ ಮಂಗಗಳು ಕಾಣೆಯಾದವು....ಅಷ್ಟರಲ್ಲಿ ಆ ವ್ಯಪಾರಿ ಆ ಗ್ರಾಮವಾಸಿಗಳಿಗೆ " ತಾನು ತನ್ನ ಊರಿಗೆ ಹೋಗುತ್ತಿದ್ದು, ಮರಳಿ ಬರುವಾಗ ಒಂದೊಂದು ಮಂಗಗಳಿಗೆ ಒಂದೊಂದು ಸಾವಿರ ರುಪಾಯಿಗಳ ಹಾಗೇ ಖರೀದಿಸುವೆ..ತಾನು ಈವರೆಗೆ ನಿಮ್ಮಿಂದ ಖರೀದಿಸಿದ್ದ ಮಂಗಗಳನ್ನು ಇಲ್ಲೇ ನನ್ನ ಸೇವಕ ಕೊಳ್ಳುವನು.." ಅಂತ ಅವುಗಳನ್ನು ಒಂದು ಗೂಡೊಳಗೆ ಕೂಡಿ ಹಾಕಿ ಸೇವಕನೊಬ್ಬನನ್ನು ನೋಡಿಕೊಳ್ಳಲು ನೇಮಿಸಿ ಹೊರಟು ಹೋದ...ವ್ಯಾಪಾರಿ ಮರಳಿ ಬರುವಾಗ ಸಾವಿರ ರುಪಾಯಿಗಳಿಗೆ ಮಾರಲು ಮಂಗಗಳಿಲ್ಲವಲ್ಲಾ ಅಂತ ಆ ಗ್ರಾಮವಾಸಿಗಳು ದುಃಖಿತರಾದರು...ಆಗ ಆ ವ್ಯಾಪಾರಿಯ ಸೇವಕ ಆ ಗ್ರಾಮವಾಸಿಗಳಿಗೆ" ಒಂದು ಮಂಗನಿಗೆ ಏಳುನೂರು ರುಪಾಯಿಗಳ ಹಾಗೆ ಕೊಟ್ಟರೆ ಗೂಡಲ್ಲಿರುವ ಮಂಗಗಳನ್ನು ಕೊಡುವೆ. ನನ್ನ ಯಜಮಾನ ಮರಳಿ ಬರುವಾಗ ಒಂದು ಸಾವಿರಕ್ಕೆ ಮಾರಿದರೆ ಮುನ್ನೂರು ರುಪಾಯಿಗಳ ಲಾಭ" ಅಂದ. ಆತನ ಮಾತುಗಳನ್ನು ಕೇಳಿದ ಗ್ರಾಮವಾಸಿಗಳು ನಾ ಮುಂದು, ತಾ ಮುಂದು ಅಂತ ಸಾಲ ಸೋಲ ಮಾಡಿ ಮಂಗಗಳನ್ನು ಏಳು ನೂರು ರುಪಾಯಿಯಲ್ಲಿ ಖರೀದಿಸಿದರು. ಆ ಸೇವಕ ಗೂಡಲ್ಲಿ ಇದ್ದ ಮಂಗಗಳನ್ನೆಲ್ಲಾ ಏಳುನೂರು ರುಪಾಯಿಗಳ ಹಾಗೆ ಮಾರಿದ... ಖರೀದಿಸಿದ ಮಂಗಗಳನ್ನು ತಮ್ಮ ತಮ್ಮ ಮನೆಯಲ್ಲಿ ಕಟ್ಟಿ ಹಾಕಿ ಆ ವ್ಯಾಪಾರಿಯ ಬರುವಿಕೆಗಾಗಿ ಕಾದು ಕುಳಿತರು. ದಿನಗಳನೇಕ ಕಳೆದರೂ ಆ ವ್ಯಾಪಾರಿ ಬರಲೇ ಇಲ್ಲ...ಕೆಲವು ದಿನಗಳ ನಂತರ ಆ ಸೇವಕನೂ ಅಲ್ಲಿ ಇರಲಿಲ್ಲ.. ಆಗಲೇ ಅವರಿಗೆ ಗೊತ್ತಾದದ್ದು... "ಬೆಲೆಯೇ ಇಲ್ಲದ ಈ ಮಂಗಗಳಿಗೆ ಏಳುನೂರು ರುಪಾಯಿಗಳನ್ನು ಕೊಟ್ಟು ಖರೀದಿಸಿ ಮೋಸ ಹೋದ ವಿಷಯ" "ಈ ವ್ಯಾಪಾರವೇ ನಾವು ಇಂದು ಸ್ಟಾಕ್ ಮಾರ್ಕೆಟ್, ಷೇರ್ ಮಾರ್ಕೆಟ್ ಅಂತ ಎಲ್ಲಾ ಕರೆಯೋದು...!!!!

# ಡಾ. ಪ್ರಭುಶಂಕರ್ ನೆನಪುಗಳು

*ಸಂಗ್ರಹ :* ● **ಜೆ.ಬಿ. ರಂಗಸ್ವಾಮಿ**

*ಪ್ರಸಿದ್ಧ ಲೇಖಕ , ಸಹೃದಯಿ ಡಾ.ಪ್ರಭುಶಂಕರ್ ಅಸ್ತಂಗತರಾಗಿ ಎರಡು ವರ್ಷವೇ ಕಳೆಯಿತು. ( 08–04–2018 ). ಕುವೆಂಪು ಅವರ ನೆಚ್ಚಿನ ಒಡನಾಡಿಯಾಗಿ, ಮೈಸೂರಿನ ಸಾಂಸ್ಕೃತಿಕ ಬದುಕಿನಲ್ಲಿ ಅವರು ಮೂಡಿಸಿರುವ ಛಾಪು ದೊಡ್ಡದು.*

**ಡಾ. ಪ್ರಭುಶಂಕರ ಅವರನ್ನು ಕುರಿತ ಅನೇಕ ನೆನಪುಗಳು – 1**

1986. ಮಹಮ್ಮದ್ ದ ಈಡಿಯಟ್ ಕಥೆ ಪ್ರಕಟವಾಗಿ, ಎಲ್ಲೆಡೆ ದೊಡ್ಡ ಗಲಭೆಗಳಾದವು. ಮೈಸೂರಿನಲ್ಲೂ ಕರ್ಫ್ಯೂ ವಿಧಿಸಲಾಗಿತ್ತು.

ನಾನಾಗ ಸರಸ್ವತಿಪುರಂ ಠಾಣೆಯ ಸಬ್ಇನ್ಸ್‌ಪೆಕ್ಟರ್. ಡಾ. ಪ್ರಭುಶಂಕರ ಮತ್ತು ಅಂದಿನ ಪರೀಕ್ಷಾ ರಿಜಿಸ್ಟ್ರಾರ್ ಶ್ರೀ ಎಸ್. ವಿ.ರಘುಪತಿ ಇಬ್ಬರೂ ಗಂಗೋತ್ರಿಯ ಬಯಲು ರಂಗಭೂಮಿಯ ಬಳಿ ಏನೋ ಕೆಲಸಕ್ಕೆಂದು ಹೋಗಿದ್ದಾರೆ. ಅಲ್ಲೇ ಗಸ್ತಿನಲ್ಲಿದ್ದ ಪೊಲೀಸರು ಇವರನ್ನು ತಡೆದರು.

ರಿಜಿಸ್ಟ್ರಾರ್ ರಘುಪತಿಯವರು ತಕರಾರು ತೆಗೆದರು. "ನಾವೇನು ಇಲ್ಲಿಗೆ ಸುಮ್ಮನೇ ಬಂದಿಲ್ಲ ಕಣ್ರೀ. ಯೂನಿವರ್ಸಿಟಿ ಡ್ಯೂಟಿ ಮೇಲೆ ಬಂದಿದ್ದೇವೆ. " ಅಂದರು.

ರಘುಪತಿ ದೊಡ್ಡ ಆಳು. ದೊಡ್ಡ ಧ್ವನಿ.. ಪೌರಾಣಿಕ ನಾಟಕಗಳಲ್ಲಿ ಬೇರೆ ಆರ್ಭಟಿಸುವ ರಾವಣ, ದುರ್ಯೋಧನನ ಪಾತ್ರ ಮಾಡುತ್ತಿದ್ದವರು. ಅವರ ಮಾತು ಉದ್ಧಟನಂತೆ ಕೇಳಿಸಿದೆ. ಮೊದಲೇ ಕರ್ಫ್ಯೂ ಕ್ಲ್ಯಾಂಪ್ ಆಗಿದೆ. ಯಾರಾದರೇನು ? ದಂಡಿನಲ್ಲಿ ಸೋದರ ಮಾವನೇ?

ಪೊಲೀಸರು ಇಬ್ಬರಿಗೂ ಲಾಠಿಯಿಂದ ಎರಡೆರಡು ಬಿಗಿದು ಓಡಿಸಿದ್ದಾರೆ.

ಡಾ. ಪ್ರಭುಶಂಕರ್ ಅಂದಿನ ಡಿಐಜಿ ಡಾ. ಪಿ.ಎಸ್. ರಾಮಾನುಜಂ ಅವರಿಗೆ ಫೋನ್ ಮಾಡಿ ದೂರಿದ್ದಾರೆ.

" ಆ ಏರಿಯಾದಲ್ಲಿ ರಂಗಸ್ವಾಮಿ ಇರೋದು. ಆತ ಹಾಗೆಲ್ಲ ದುಡುಕೋದಿಲ್ಲ. ನಾನು ವಿಚಾರಿಸುತ್ತೇನೆ. ಹಾಗೇನಾದ್ರೂ ಇದ್ರೆ ಐ ವಿಲ್ ಇನಿಶಿಯೇಟ್ ಆಕ್ಷನ್ ಅಗೆನ್ಸ್ಟ್ ಹಿಮ್." ಅಂತ ಡಾ. ರಾಮಾನುಜಂ ಸಮಾಧಾನ ಹೇಳಿದ್ದಾರೆ.

ಪ್ರಭುಶಂಕರ್ ತಮ್ಮ ಮಾತು ನಿಲ್ಲಿಸಿಲ್ಲ. " ನಾವು ಯಾರೂ ಅಂತ ನಿಮ್ಮ ಪೊಲೀಸ್ನೋರಿಗೆ ಹೇಳಿದೋ. ಆದರೂ ಇಬ್ಬರಿಗೂ ಲಾಠಿಯಲ್ಲಿ ಎರಡೆರಡು ಬಾಸುಂಡೆ ಏಟು ಬಿಟ್ಟಿದ್ದಾರೆ ನೋಡಿ !."

ಡಾ. ರಾಮಾನುಜಂ, ಕೊಂಚ ಸಲುಗೆಯ ಧಾಟಿಯಲ್ಲಿ, "ಯಾರು ನೀವು ಅಂತ ಹೇಳಿದ್ದರೂ ಹೊಡೆದರಾ? ಅಂದಮೇಲೆ ನಮ್ ಪೋಲೀಸ್ನೋರು ನಿಷ್ಪಕ್ಷಪಾತಿಗಳು ಅಂತ ಆಯ್ತಲ್ಲಾ ?!. ಯಾರೇ ಆಗಿರಲಿ. ಅವರು ಎಲ್ಲರಿಗೂ ಒಂದೇ. ನಾನು ವಿಚಾರಿಸುತ್ತೇನೆ ಬಿಡಿ " ಸವರಣೆ ಮಾತಾಡಿದರು.

ಪಟ್ಟು ಬಿಡದ ಪ್ರಭುಶಂಕರ್,

"ನಾನು ಅದಕ್ಕೇ ಫೋನ್ ಮಾಡಿದ್ದು. ನಿಮ್ ಪೊಲೀಸ್ನೋರು ನಿಷ್ಪಕ್ಷಪಾತವಾಗಿ ಕೆಲಸ ಮಾಡಿಲ್ಲ ಅಂತ !."

"ಸಣ್ಣಗಿರೋ ನನಗೇನೋ ಎರಡೇಟು ಸರಿ. ಆದರೆ ನನಗಿಂತ ಮೂರುಪಟ್ಟು ದಪ್ಪಗಿರೋ ರಘುಪತಿಗೂ ಎರಡೇ ಏಟೇ?.

ನಿಂ ಪೋಲಿಸರು ನಿಜವಾಗಿಯೂ ನಿಷ್ಪಕ್ಷಪಾತಿಗಳೇ? ನೀವೇ ಹೇಳಿ! ".

* * *

**ನೆನಪು – 2**

ಕುವೆಂಪು ಅವರಿಗೆ ಪ್ರಭುಶಂಕರ ಎಂದರೆ ಅಚ್ಚುಮೆಚ್ಚು. ಪರಮ ಶಿಷ್ಯ. ಸಲಿಗೆಯೂ ಅಂತಹುದೇ.

ಜ್ಞಾನಪೀಠ ಬಂದಿದ್ದ ಸಮಯ. ತಮ್ಮ ಸಂತೋಷವನ್ನಾಗಲೀ, ದುಃಖವನ್ನಾಗಲೀ ಯಾರೊಂದಿಗೂ ಹಂಚಿಕೊಳ್ಳದ ಜೀವ ರಸಋಷಿಯದು. ಆದರೆ ಪ್ರಿಯ ಶಿಷ್ಯ ಪ್ರಭುಶಂಕರ್ ಅದಕ್ಕೆ ಅಪವಾದ.

ಮನೆಗೆ ಬಂದ ಪ್ರಭುಶಂಕರರ ಬಳಿ ಕುವೆಂಪು ಹೇಳಿಕೊಂಡರು.

"ಜ್ಞಾನಪೀಠದ ಪ್ರಶಸ್ತಿ ಪತ್ರ, ಶಾಲು, ಫಲಕ ಎಲ್ಲವನ್ನೂ ದೇವರ ಮುಂದಿಟ್ಟು ಕೈಮುಗಿದೆ".

"ಅವನ್ನೇನೋ ದೇವರ ಮುಂದಿಟ್ಟು ಕೈಮುಗಿದಿರಿ, ಅದೇನೋ ಸರಿ.

ಅದೇ ಆ ಚೆಕ್ಕೂ?. ಅದು ಮಾತ್ರ ಬ್ಯಾಂಕಿಗಾ? ಅದನ್ನೆಲ್ಲಿಟ್ರೀ ಅದನ್ನು ಮೊದಲು ಹೇಳಿ! "

ಪ್ರಭುಶಂಕರರ 'ರೆಡಿ ವಿಟ್' ಅಂದರೆ ಹೀಗೆ.

ಕುವೆಂಪು ಫಕ್ಕನೆ ನಕ್ಕರು.

ಅದಾದ ನಂತರ ನಡೆಯುತ್ತಿದ್ದ ಸರಸ ಸಂಭಾಷಣೆಗಳಲ್ಲಿ, ಕುವೆಂಪುರವರು, "ಎಲ್ಲಿ ಪ್ರಭುಶಂಕರ್, ಅದೇ ಆ ಚೆಕ್ಕಿನ ವಿಷಯ ಹೇಳಿ" ಎಂದು ಕೇಳುತ್ತಿದ್ದರು. ಮನಸಾರೆ ನಕ್ಕು ಹಗುರಾಗುತ್ತಿದ್ದರು.

***

**ನೆನಪುಗಳು – 3**

ಸ್ವಾತಂತ್ರ್ಯ ಪೂರ್ವ ದಿನಗಳು :

ಡಾ. ಪ್ರಭುಶಂಕರ ಆಗಿನ್ನೂ ವಿದ್ಯಾರ್ಥಿ. ಭಾರತ ಸೇವಾದಳದ ವಾಲಂಟಿ. ಮಹಾತ್ಮಾ ಗಾಂಧಿಯವರು ಮದರಾಸಿಗೆ ಬರಲಿದ್ದಾರೆಂದು ತಂಡದೊಂದಿಗೆ ಹೋಗಿದ್ದರು. ಶುಭ್ರ ಬಿಳಿ ಷರಟು, ನೀಲಿಚಡ್ಡಿಯ ಸಮವಸ್ತ್ರ ಧರಿಸಿದ್ದರು. ಗಾಂಧೀಜಿಯವರು ಬರಲು ಇನ್ನೂ ಸಮಯವಿತ್ತು. ಮೈದಾನದ ಉರಿ ಬಿಸಿಲಿನಲ್ಲಿ ಸಾಲಾಗಿ ಕುಳಿತಿದ್ದ ಸೇವಾದಳದ ಬಾಲಕರಿಗೆಲ್ಲಾ ಐಸ್ ಕ್ರೀಂ ಇತ್ಯಾದಿ ತಂದುಕೊಟ್ಟರು.

ತಿಂದು ಮುಗಿಸಿದ ಖಾಲಿ ದೊನ್ನೆಗಳನ್ನು ಒಂದೆಡೆ ಹಾಕಿದರು.

ತಿಂದು ಎಂಜಲಾಗಿರುವ ಕೈಗಳನ್ನು ಈಗ ಹೇಗಪ್ಪಾ ತೊಳೆದು ಕೊಳ್ಳುವುದು? . ನೀರಿನ ಜಾಗ ಎಲ್ಲಿದೆಯೋ ? ಕೂತಿರುವ ಸಾಲನ್ನು ಬಿಟ್ಟು ಹೋಗುವಂತಿಲ್ಲ. ಹೊಸ ಬಿಳಿ ಷರಟಿಗೆ ಕೈಯ್ಯ ಕೊಳೆ ಅಂಟಿಕೊಂಡರೆ ?

ಬಾಲಕ ಪ್ರಭುಶಂಕರನಿಗೆ ಪೇಚಾಟ.

ಮೇಷ್ಟ್ರು ನಾ.ಕಸ್ತೂರಿಯವರು (ಅನರ್ಥಕೋಶ ) ಇವರ ಹಿಂದೆಯೇ ಕುಳಿತಿದ್ದರು.

"ಕೈ ತೊಳಕೋಬೇಕು . ಹೋಗಿ ಬರಲಾ ಸಾರ್ ?".

"ಏಯ್ , ಸಾಲುಬಿಟ್ಟು ಅದು ಹೇಗೆ ಎದ್ದು ಹೋಗ್ತೀಯೋ ? ನೀನು ಶಿಸ್ತಿನ ಸಿಪಾಯಿ ಅಲ್ಲವಾ ? ಇನ್ನೇನು ಗಾಂಧೀಜಿಯವರು ಬಂದುಬಿಡ್ತಾರೆ " .

"ಮತ್ತೆ ಏನು ಮಾಡಲಿ ಸಾರ್ ?"

"ಮಾಡೋದೇನು ? ನಿನ್ನ ಮುಂದೆ ಕೂತಿದ್ದಾನಲ್ಲಾ ? ಸಿಲ್ಕ್ ಷರಟು ಹಾಕ್ಕೊಂಡು. ಆ ಮಂಗನ ಬೆನ್ನಿಗೆ ಹಾಗೇ ಒರೆಸಿಬಿಡು"

ಮಹಾ ತರಲೆಗುರು ಅಭಿನಯ ಪೂರ್ವಕವಾಗಿ ಉಪದೇಶಿಸಿದರು.

"ಏನ್ಸಾರ್ ನೀವು ! ಅವನು ಸುಮ್ನೆ ಬಿಡ್ತಾನಾ. ಹಿಡ್ಕಂಡ್ ಒದೀತಾನೆ ಅಷ್ಟೇ."

"ಏಯ್, ಯಾಕೋ ಒದೀತಾನೆ ?. ಈಗ ನಾನು ನಿನ್ನ ಬೆನ್ನಿಗೆ ಒರೆಸಿಲ್ಲವಾ? ನೀನೇನು ಹೊಡೆದೇ ಬಿಡ್ತೀಯಾ ? "

ಕೈ ಒರೆಸಿಕೊಳ್ಳುವುದನ್ನೂ ಮರೆತು ಪ್ರಭುಶಂಕರ್ ತಮ್ಮ ಬೆನ್ನು ತುರಿಸಿಕೊಂಡರು.

* * *

**ನೆನಪು – 4.**

ಕುವೆಂಪು ಅವರ ಶಿಷ್ಯಗಣದಲ್ಲಿ ತುಂಬ ಆಪ್ತರಾಗಿದ್ದವರ ಪೈಕಿ ಶ್ರೀ ಉ.ಕಾ.ಸುಬ್ಬರಾಯಾಚಾರ್ ಅವರೂ ಒಬ್ಬರು. ಗಾಂಧಿವಾದಿ, ಋಜುಜೀವಿ, ಸನ್ನಡತೆ, ಸಚ್ಚಾರಿತ್ರಕ್ಕೆ ಹೆಸರಾದವರು. ಕುವೆಂಪು ಅವರಿಗಂತೂ ಉಕಾಸು ಎಂದರೆ ಅಚ್ಚುಮೆಚ್ಚು.

ಡಾ. ಪ್ರಭುಶಂಕರ್ ಯಾರ ಬಗ್ಗೆಯಾದರೂ ಹಾಸ್ಯ ಮಾಡಲಿ. ಕೇಳಿಸಿಕೊಂಡು ನಿರುಮ್ಮಳ ನಗೆ ಬೀರುತ್ತಿದ್ದವರು ಕುವೆಂಪು. ಆದರೆ ಉಕಾಸು ? .

"ಪ್ರಭುಶಂಕರ್, ಅವರ ಬಗ್ಗೆ ಮಾತ್ರ ನೀವೇನೂ ಹೇಳಬೇಡಿ. ನಂಗಿಷ್ಟ ಆಗೋದಿಲ್ಲ" ನೇರವಾಗಿ ಹೇಳಿದ್ದರು.

ಉಕಾಸು ಮತ್ತು ಪ್ರಭುಶಂಕರ್ ನಡುವೆ ನಡೆದ ಪ್ರಸಂಗವೊಂದಿತ್ತು. ಅದನ್ನು ಹೇಳಲು ಹತ್ತಾರು ಬಾರಿ ಹವಣಿಸಿದ್ದರು. ಹೇಳುವುದಕ್ಕೆ ಕುವೆಂಪು ಅವಕಾಶವನ್ನೇ ಕೊಡುತ್ತಿರಲಿಲ್ಲ.

ಅವರಿಗೆ ಪ್ರಭುಶಂಕರ್‌ರ ಕೀಟಲೆ, ಕಿತಾಪತಿ ಗೊತ್ತಿತ್ತು.

‘ಐ ಕಾನ್ ಲೂಸ್ ಅ ಫ್ರೆಂಡ್. ಬಟ್ ನಾಟ್ ಎ ಜೋಕ್’ ಸಿದ್ಧಾಂತದವರು ಪ್ರಭುಶಂಕರ್. ಯಾರನ್ನೂ ಪರಿಹಾಸ್ಯ ಮಾಡದೆ ಬಿಟ್ಟವರೇ ಅಲ್ಲ. ಅವರು ಬಾಯಿ ಬಿಟ್ಟರೆ ಸಾಕು. ಒಂದಲ್ಲ ಒಂದು ರೆಡಿ ವಿಟ್‌ನ ಚಟಾಕಿ ಸಿದ್ಧವಿರುತ್ತಿತ್ತು.

ಪ್ರಭುಶಂಕರ್ ಮಹಾರಾಜ ಕಾಲೇಜಿನ ಅಧ್ಯಾಪಕರಾಗಿದ್ದ ಕಾಲ. ಉಕಾಸು ಅವರು ಮೈಸೂರು ವಿವಿ ನಿಲಯದ ಡೀನ್ ಆಗಿದ್ದರು. ಅವರೊಮ್ಮೆ ಅರ್ಜಂಟಾಗಿ ಪ್ರಭುಶಂಕರನ್ನು ಕಾಣಲು ಬಂದರು. ನೋಡಿದರೆ ಪ್ರಭುಶಂಕರ್ ಯಾವುದೋ ಮುಖ್ಯವಾದ ಮೀಟಿಂಗ್‌ನಲ್ಲಿದ್ದಾರೆ. ಹಿರಿಯ ಪ್ರಾಧ್ಯಾಪಕರುಗಳು ನೆರೆದಿದ್ದಾರೆ.

"ಮುಖ್ಯವಾದ ಮೀಟಿಂಗ್‌ನಲ್ಲಿದ್ದೇನೆ. ಸಂಜೆ ಸಿಕ್ಕೋಣವೇ ?".

"ಇಲ್ಲ. ವಿಷಯ ತುಂಬಾ ಅರ್ಜೆಂಟಿತ್ತು. ಅದಕ್ಕಾಗಿ ನಾನೇ ಬಂದೆ." ಉಕಾಸು ಉತ್ತರ.

"ನನ್ನ ಛೇಂಬರ್ ನಲ್ಲಿ ಕುಳಿತಿರಿ. ನಾನೇ ಬರ್ತೀನಿ. ". ಕೊಂಚ ಹೊತ್ತಿನಲ್ಲೇ ಮೀಟಿಂಗನ್ನು ಅರ್ಧಕ್ಕೆ ನಿಲ್ಲಿಸಿ ಬಂದರು.

"ತುಂಬಾ ಮುಖ್ಯವಾದ ಮೀಟಿಂಗ್. ನಾನೀಗ ಬರುವಂತೆಯೇ ಇರಲಿಲ್ಲ. ಏನು ಸಮಾಚಾರ ? " .

ಉಕಾಸು ವ್ಯಾಕುಲಚಿತ್ತರಾಗಿದ್ದರು. ಮುಖದಲ್ಲಿ ಬೇಸರ ಮಡುಗಟ್ಟಿತ್ತು.

"ನಮ್ಮ ರಿಟೈರ್ಡ್ ಪ್ರೊಫೆಸರ್ .....ಅವರು . . . . ".

"ಏನೂ ಹೋಗಿಬಿಟ್ಟರಾ ?. ಯಾವಾಗ ? ". ತವಕದಿಂದ ಪ್ರಭುಶಂಕರ್ ಕೇಳಿದರು.

ಅವರಿಬ್ಬರೂ ಕನ್ನಡ ಅಧ್ಯಾಪಕರುಗಳು. ಕುವೆಂಪು ಅವರ ನೆಚ್ಚಿನ ಶಿಷ್ಯರು. ಹತ್ತು ವರ್ಷದ ಅಂತರವಿದ್ದರೂ ಏಕವಚನದ ಗೆಳೆಯರು.

"ಯೇ ಆತುರಗೇಡಿ. ನಾನು ಹೇಳೋದನ್ನು ಸ್ವಲ್ಪ ತಾಳ್ಮೆಯಿಂದ ಕೇಳಿಸಿಕೋ. ದೇವರ ದಯದಿಂದ ಅವರು ಚೆನ್ನಾಗಿದ್ದಾರೆ. ಅರ್ಜೆಂಟಾಗಿ ನಾನೀಗ ಬೇರೆ ವಿಷಯ ಹೇಳಬೇಕು.

"ಅವರಿಗೆ ಇಬ್ಬರು ಹೆಣ್ಣು ಮಕ್ಕಳು. ನಿಂಗೊತ್ತಲ್ವಾ ?. "

"ಗಂಡು ಮಕ್ಕಳಾದ್ರೆ ಗೊತ್ತಿರೊಲ್ಲ. ಇವರ್ಯಾರಿಗೆ ಗೊತ್ತಿರೋದಿಲ್ಲ ?. ಯಾಕೆ ಏನಾಯ್ತು ?".

"ಅವರಿಬ್ಬರಿಗೂ ಇನ್ನೂ ಮದುವೇನೆ ಆಗಿಲ್ಲ. ದೊಡ್ಡವಳಿಗೆ 30 ವರ್ಷ. ಚಿಕ್ಕವಳಿಗೆ 25 ವರ್ಷ. ಪ್ರೊಫೆಸರ್‌ಗೂ ಅವರ ಹೆಂಡತಿಗೂ ದಿನಾ ಅದೇ ಚಿಂತೆ. ಈ ಬೆಳಿಗ್ಗೆ ಅವರ ಮನೆಗೆ ಹೋಗಿದ್ದೆ. ಹೇಳಿಕೊಂಡು ಅತ್ತೇ ಬಿಟ್ಟರು ಕಣಯ್ಯ". ಉಕಾಸು ಗದ್ಗದಿತರಾದರು.

"ನಾವು ಹೋಗೋದರೊಳಗೆ ಇಬ್ಬರ ಮದುವೇನೂ ಮಾಡಿ ಬಿಡಬೇಕು. ಯಾರಾದರೂ ಗಂಡುಗಳಿದ್ದರೆ ಹೇಳಿ ಅಂತ ಕೈ ಹಿಡಿದು ಕೇಳಿಕೊಂಡರು. ನಿನಗೂ ಅವರು ಗುರುಗಳೇ ತಾನೇ?. ಹಾಗೇ ನಿನ್ನ ಕಿವಿಗೂ ಹಾಕಿ ಹೋಗೋಣವೆಂದು ಬಂದೆ. "

ಪ್ರಭುಶಂಕರ್‌ಗೆ ಉರಿದು ಹೋಯಿತು. ಉಕಾಸು ಬಂದ ಗಾಬರಿ ನೋಡಿ ಏನೋ ಅನಾಹುತ ಆಗಿರಬೇಕೆಂದು ಮುಖ್ಯ ಮೀಟಿಂಗ್‌ನಲ್ಲಿ ಏನೋ ಸಬೂಬು ಹೇಳಿ ಹೊರ ಬಂದಿದ್ದರು. ಇಲ್ಲಿ ನೋಡಿದರೆ ಯಾವುದೋ ಮದುವೆ ವಿಚಾರ. ವಯಸ್ಸು ಮೀರಿದವರಿಗೆ ಗಂಡು ಹುಡುಕುವ ವಿಚಾರ!. ಇಪ್ಪತ್ತು ಆದಾಗಲೇ ಅವಸರ ಮಾಡದವರಿಗೆ ಮೂವತ್ತು ಮೀರಿದ ಮೇಲೆ ಅರ್ಜಂಟ್ ಯಾಕೋ? .

"ಇದನ್ನು ಫೋನಿನಲ್ಲೇ ಹೇಳಬಹುದಿತ್ತಲ್ಲಯ್ಯಾ ?. ಇಲ್ಲೀತನಕ ಯಾಕೆ ಬಂದೆ?.

ಕುದಿಯುವ ಅಸಹನೆ.

"ಏನು ಮಾಡೋದಪ್ಪಾ ?. ಇದಕ್ಕಿಂತ ಮುಖ್ಯವಾದ ವಿಚಾರ ಬೇರಾವುದು?. ನೋಡು ಪ್ರಭು, ಈ ಕೆಲಸ ನೀನು ಮಾಡಬೇಕು. ನಿನಗೆ ಜನ ಸಂಪರ್ಕ ಇದೆ. ನಿನ್ನ ಕೈಯ್ಯಲ್ಲಿ ಆಗೇ ಆಗುತ್ತೆ. ನಮ್ಮ ಗುರುಗಳಿಗೆ ಋಣ ತೀರಿಸಿದಂತೆಯೂ ಆಗುತ್ತೆ.".

" ನನ್ನ ಕೈಯ್ಯಲ್ಲಿ ಆಗುತ್ತೆ ನಿಜ. ಆದರದು 50% ಮಾತ್ರ. ಆದರೆ ನೀನೂ ನನ್ನ ಜೊತೆಗೆ ಸೇರಿಕೊಂಡ್ರೆ ಪೂರ್ತಿ ಕೆಲಸ ಆಗುತ್ತೆ.". ನಿಶ್ಚಯದ ದನಿಯಲ್ಲಿ ಪ್ರಭುಶಂಕರ್ ಅಂದರು.

" ಓ... ಹಾಗಾ ?. ನಾವಿಬ್ಬರೂ ಸೇರಿದ್ರೆ ಖಂಡಿತಾ ಕೆಲಸ ಆಗುತ್ತಾ ?. ಹೇಳು ಮತ್ತೆ. ಖಂಡಿತವಾಗಿಯೂ ಮಾಡುತ್ತೇನೆ." ಲಗುಬಗೆಯ ದನಿ.

"ಈಗ ನೀನು ಹೇಳಿದಂತೆ ದೊಡ್ಡವಳಿಗೆ 30 ವರ್ಷ .ಚಿಕ್ಕವಳಿಗೆ 25 ವರ್ಷ ತಾನೇ?.

"ಒಂದು ಕೆಲಸ ಮಾಡು. ಹೇಗೂ ನೀನು ಹಿರಿಯ. ದೊಡ್ಡವಳನ್ನು ನೀನು ಮದುವೆಯಾಗು. ನಾನು ಚಿಕ್ಕವಳನ್ನು ಆಗ್ತೀನಿ. ಅಲ್ಲಿಗೆ ಸಮಸ್ಯೇನೂ ಪರಿಹಾರವಾಗುತ್ತೆ. ಗುರುಗಳ ಕಣ್ಣಲ್ಲೂ ಆನಂದ ಭಾಷ್ಪ ಉದುರುತ್ತೆ ! " .

ಬ್ರಹ್ಮಚಾರಿ ಉಕಾಸು ಸಿಟ್ಟಿನಿಂದ ಎದ್ದು ಪ್ರಭುಶಂಕರ್ ತಲೆಯ ಮೇಲೊಂದು ಕುಟ್ಟಿ, ದಢ ದಢ ಹೋಗಿಬಿಟ್ಟರು.

*(* ಅಂದಾಜು ನೆನಪುಗಳು. ವಿವರಗಳು ಕೊಂಚ ಏರುಪೇರಾಗಿರುತ್ತವೆ. ಕ್ಷಮೆ ಇರಲಿ)*

■

---

ಬಿ.ಜಿ..ಎಲ್. ಸ್ವಾಮಿಯವರು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿರುವಾಗ ಬರೆದ ಕೆಲವು ವಿಜ್ಞಾನ ಲೇಖನಗಳನ್ನು ತಂದೆ ಡಿವಿಜಿಯವರಿಗೆ ತೋರಿಸಿ ಹೇಗಿದೆ ನನ್ನ ಬರವಣಿಗೆ, ಮುಂದುವರಿಸಬಹುದಾ ಅಂತ ಕೇಳಿದರು. ಅದಕ್ಕೆ ಡಿವಿಜಿ ಅವರು ಲೇಖನಗಳು ಚೆನ್ನಾಗಿದೆ, ನೀನು ಬರವಣಿಗೆಯನ್ನೇ ಮುಂದುವರಿಸುವುದು ಬೇಡ. ಮನೆಗೊಬ್ಬ ಸಾಹಿತಿ ಇರೋದು ಸಾಕು, ನೀನು ಬೇರೆ ಕ್ಷೇತ್ರದಲ್ಲಿ ಬೆಳಗು ಎಂದರು. ಆದರೆ ಮುಂದೊಂದು ದಿನ ಬಿಜಿಎಲ್ ಸ್ವಾಮಿಯವರು ಹಸಿರು ಹೊನ್ನು ಕೃತಿಯ ಹಸ್ತಪ್ರತಿ ಸಿದ್ಧವಾದಾಗ ತಂದೆಗೆ ತೋರಿಸಿದರು. ಡಿವಿಜಿ ಅವರು ಅದನ್ನು ಸಂಪೂರ್ಣವಾಗಿ ಓದಿ, ಚೆನ್ನಾಗಿ ಬರೆದಿದೀಯ ಮುಂದುವರಿಸು ಎಂದರು. ಆದರೆ ಹಸಿರು ಹೊನ್ನು ಪುಸ್ತಕ ರೂಪದಲ್ಲಿ ಪ್ರಕಟವಾಗುವ ಹೊತ್ತಿಗೆ ಡಿವಿಜಿ ಅವರು ಇರಲಿಲ್ಲ.

# ಮುದ್ದು ಮೀನಾಳ 'ಮೀ ಟೂ' ಪ್ರಶ್ನೆ

● ಪ್ರೊ. ಸಿ.ಕೆ.ರೇಣುಕಾರ್ಯ

ಮೀನಾ ನನ್ನ ಸ್ನೇಹಿತ ಕೃಷ್ಣಪ್ರಸಾದನ ಮಗಳು. ಅವಳಿಗೆ 6 ವರ್ಷ. ಒಂದನೇ ತರಗತಿ. ಕೃಷ್ಣಪ್ರಸಾದ ಕಾಲೇಜಿನ ಸಮಾಜಶಾಸ್ತ್ರ ಅಧ್ಯಾಪಕ. ತುಂಬಾ ಓದುವ ಹುಚ್ಚಿರುವ ವ್ಯಕ್ತಿ. ಯಾವುದೇ ಹೊಸ ಪುಸ್ತಕ ಕಂಡರೂ ಖರೀದಿಸಿ ತಂದು ಓದುವವ. ಅವನಿಗೆ ಇಬ್ಬರು ಮಕ್ಕಳು. ಮೊದಲನೆಯವನು ಹರೀಶ 9 ವರ್ಷ, 3ನೇ ತರಗತಿ. ಇಬ್ಬರೂ ಮಕ್ಕಳೂ ತುಂಬಾ ಬುದ್ಧಿವಂತರು. ಶಾಲೆಯಲ್ಲಿ ಪ್ರಥಮರು.

ಮೀನಾ ತುಂಬಾ ಬುದ್ಧಿವಂತೆ. ಚುರುಕಿನ ಹುಡುಗಿ. ಎಲ್ಲವನ್ನೂ ತಿಳಿದುಕೊಳ್ಳಬೇಕೆಂಬ ಉತ್ಸಾಹ. ಒಂದು ರೀತಿಯ ಸಂಶೋಧಕ ಬುದ್ಧಿಯ ಹುಡುಗಿ.

ಒಮ್ಮೆ ಅವಳು ಅವರ ತಂದೆ ಹೊಸದಾಗಿ ತಂದಿದ್ದ 'ಮೀ ಟೂ' ಶೀರ್ಷಿಕೆಯ ಪುಸ್ತಕ ಹಾಲಿನಲ್ಲಿ ಟೇಬಲ್ ಮೇಲೆ ರಾರಾಜಿಸುತ್ತಿರುವುದನ್ನು ನೋಡಿದಳು. ತುಂಬಾ ಅಂದವಾಗಿ ಮುದ್ರಿತವಾಗಿದ್ದ ಆಕರ್ಷಕ ಪುಸ್ತಕ. ಮೀನಾಳಿಗೆ ಈ ಪುಸ್ತಕ ಯಾವುದರ ಬಗ್ಗೆ ಎಂದು ತಿಳಿದುಕೊಳ್ಳುವ ಕುತೂಹಲ. ಪ್ರತಿಯೊಂದರಲ್ಲೂ ಅವಳಿಗೆ ಕುತೂಹಲ. ಯಾವಾಗಲೂ ಅವಳಿಂದ ತಂದೆ–ತಾಯಿಗಳಿಗೆ ಪ್ರಶ್ನೆಗಳೇ. ಅದು ಏನು ? ಅದರಲ್ಲಿ ಏನಿದೆ ? ಏನು ಮಾಡಬೇಕು ? ಎನ್ನುವುದು ಅವಳ ಸಾಮಾನ್ಯ ಪ್ರಶ್ನೆಗಳು. ಅದಕ್ಕೇ ಅವಳಿಗೆ ಎಲ್ಲರೂ "ಏಕೆ–ಏನು ಮೀನಾ" ಎಂಬ ಅಡ್ಡ ಹೆಸರಿಟ್ಟಿದ್ದರು.

ಈಗ ಅವಳಿಗೆ 'ಮೀ ಟೂ' ಪುಸ್ತಕದ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ. ಅವಳು, ಕೃಷ್ಣಪ್ರಸಾದ್ ಅನ್ನು ಕೇಳಿದಳು. "ಅಪ್ಪಾ, 'ಮೀ ಟೂ' ಎಂದರೇನು ? ಈ ಪುಸ್ತಕದಲ್ಲಿ ಏನಿದೆ ?

ಅವನು ಅವಳಿಗೆ ಇದರ ಬಗ್ಗೆ ಹೇಗೆ ತಾನೇ ವಿವರಿಸಿಯಾನು ? ಅಮೆರಿಕಾದಲ್ಲಿ ಉದ್ಯೋಗಪತಿಗಳಿಂದ ನಡೆದಿರುವ ಲೈಂಗಿಕ ದೌರ್ಜನ್ಯಗಳನ್ನು ಕುರಿತಾದ ಬೆಸ್ಟ್ ಸೆಲರ್ ಪುಸ್ತಕ ಅದು. ಮೀನಾಳಿಗೆ ಅದನ್ನು ವಿವರಿಸುವುದಕ್ಕೆ ಸಾಧ್ಯವೇ ಇಲ್ಲದ ಪರಿಸ್ಥಿತಿ ಕೃಷ್ಣಕುಮಾರನದು. ಅವಳಿಂದ ತಪ್ಪಿಸಿಕೊಳ್ಳಲು ಅವನು "ಮೀನಾ ನನಗೆ ಆಫೀಸಿಗೆ ಟೈಂ ಆಗಿದೆ. ಇದರ ವಿಷಯ ನಿಮ್ಮಮ್ಮನನ್ನು ಕೇಳು" ಎಂದು ಹೇಳಿ ಅವನು ಹೊರಟ.

ಮೀನಾಳ ತಾಯಿ ಉಪ್ಪಿಟ್ಟಿಗೆ ಒಗ್ಗರಣೆ ಹಾಕುತ್ತಿದ್ದಳು. ಮೀನಾ ಅವಳ ಬಳಿ ಹೋಗಿ 'ಅಮ್ಮಾ 'ಮೀ ಟೂ' ಎಂದರೇನು ? ಅಪ್ಪ ತಂದಿರುವ ಪುಸ್ತಕದಲ್ಲಿ ಯಾವ ಕಥೆ ಇದೆ ? ಚಿತ್ರಗಳೇ ಇಲ್ಲವಲ್ಲ. ? ಎಂದು ಕೇಳಿದಳು.

ಮೀನಾಳ ಅಮ್ಮನಿಗೆ ಪೀಕಲಾಟಕ್ಕೆ ಬಂತು. ಮೀನಾಳದು 'ಮೀ ಟೂ' ವನ್ನು ಅರ್ಥ ಮಾಡಿಕೊಳ್ಳುವ ವಯಸ್ಸಲ್ಲ. ಆದರೆ ಅವಳ ಕುತೂಹಲಕ್ಕೆ ತಣ್ಣೀರೆರಚುವಂತೆಯೂ ಇಲ್ಲ. "ಮೀನಾ ಈಗ ತಿಂಡಿ ಮಾಡುತ್ತಿದ್ದೇನೆ. ನನಗೂ ಆಫೀಸಿಗೆ ಲೇಟ್ ಆಗುತ್ತಾ ಇದೆ. ಆಮೇಲೆ ಪುಸ್ತಕದ ವಿಷಯ ಹೇಳುತ್ತೇನೆ' ಎಂದು ತಪ್ಪಿಸಿಕೊಂಡಳು.

ಮೀನಾಳಿಗೆ ಇನ್ನಿಲ್ಲದ ಕುತೂಹಲ. ಈ ಪುಸ್ತಕದಲ್ಲಿ ಏನಿದೆ ಎನ್ನುವುದನ್ನು ತಿಳಿದುಕೊಳ್ಳಲೇಬೇಕೆಂಬ ಕುತೂಹಲ. ಪುಸ್ತಕವನ್ನು ತನ್ನ ಸ್ಕೂಲ್ ಬ್ಯಾಗಿನಲ್ಲೇ

ತೆಗೆದುಕೊಂಡು ಹೋದಳು. ಮಿಸ್.ಸರಸ್ವತಿಗೆ ಮೀನಾ ಅಚ್ಚು-ಮೆಚ್ಚು. ಅವರು ವಿಜ್ಞಾನದ ಅಧ್ಯಾಪಕಿ. ಮಕ್ಕಳ ಕುತೂಹಲಗಳನ್ನು ತಣಿಸಬೇಕೆಂಬ ಹಂಬಲ ಅವರಿಗೆ ಯಾವಾಗಲೂ ಮೀನಾ, ವಿಜ್ಞಾನದ ತರಗತಿಯಲ್ಲಿ, ಕುತೂಹಲದ ಪ್ರಶ್ನೆಗಳನ್ನು ಕೇಳುವ ಹುಡುಗಿ ಅವಳು. ಸರಸ್ವತಿಯವರಲ್ಲಿ ಈ ಪ್ರಶ್ನೆ ಕೇಳಿದಳು. 'ಮಿಸ್ ಮೀ ಟೂ' ಎಂದರೇನು ?

ಸರಸ್ವತಿ : ಯಾವ 'ಮೀ ಟೂ'

ಮೀನಾ : ನೋಡಿ. ನಮ್ಮ ತಂದೆ ಈ ಒಂದು ಹೊಸ ಪುಸ್ತಕ ತಂದಿದ್ದಾರೆ. ಅದು ಅಮೆರಿಕಾದಿಂದ ಬಂದಿದೆ. ನೋಡಲು ತುಂಬಾ ಚೆನ್ನಾಗಿದೆ. ಆದರೆ ಒಂದೇ, ಒಂದು ಚಿತ್ರಾನೂ ಇಲ್ಲ. ನಮ್ಮ ತಂದೆ-ತಾಯಿ ಇಬ್ಬರನ್ನೂ ಈ ಹೊಸ ಪುಸ್ತಕದಲ್ಲಿ ಏನು ಕಥೆ ಇದೆ ? ಎಂದು ಕೇಳಿದರೆ ಇಬ್ಬರೂ ಹೇಳಲಿಲ್ಲ. ನೀವು ಹೇಳಿ ಮಿಸ್ ನಿಮಗೆ ಗೊತ್ತಿದೆಯೇ ?

ಸರಸ್ವತಿಯವರಿಗೆ ತುಂಬಾ ಮುಜುಗರವಾಯಿತು. ಈ ಮುಗ್ಧ ಮಗುವಿಗೆ ಲೈಂಗಿಕ ದೌರ್ಜನ್ಯದ ವಿಷಯವನ್ನು ಹೇಗೆ ವಿವರಿಸುವುದು ? ಆದರೂ ಪ್ರಯತ್ನ ಪಡೋಣವೆಂದು; ಮೀನಾ, ಅಮೆರಿಕಾದಲ್ಲಿ ಕಂಪನಿಗಳಲ್ಲಿರುವ ಮಾಲಿಕರು. ಅವರಲ್ಲಿ ಕೆಲಸ ಮಾಡುವ ಹೆಂಗಸರಿಗೆ ತುಂಬಾ ತೊಂದರೆ ಕೊಡುತ್ತಿದ್ದರು. ಆ ಹೆಂಗಸರು, ತಮಗಾದ ತೊಂದರೆಯನ್ನು ಒಬ್ಬೊಬ್ಬರಾಗಿ ಹೇಳಿಕೊಂಡಿದ್ದಾರೆ. ಇದೇ 'ಮೀ ಟೂ' ಪುಸ್ತಕದ ವಿಷಯ.

ಮೀನಾ : ಸರಿ ಮಿಸ್. ಏನು ತೊಂದರೆ ? ತೊಂದರೆಯಾದರೆ ಪೋಲೀಸಿನವರಿಗೆ ಹೇಳಬಹುದಲ್ಲಾ ? ಪೋಲೀಸ್ ಅಂಕಲ್ ತೊಂದರೆ ಕೊಡುವವರನ್ನು ಹಿಡಿದುಕೊಂಡು ಹೋಗುತ್ತಾರೆ ತಾನೆ ?

ಸರಸ್ವತಿ: ಅದು ಆ ರೀತಿ ಅಲ್ಲ. ನಿನಗೆ ಈಗ ಅರ್ಥವಾಗುವುದಿಲ್ಲ. ದೊಡ್ಡವಳಾದ ಮೇಲೆ ತಿಳಿಯುತ್ತೆ.

ಮೀನಾ: ಇಲ್ಲ ಮಿಸ್. ತಿಳಿಯುತ್ತೆ ಹೇಳಿ. ಪೋಲೀಸಿನವರಿಗೆ ಯಾಕೆ ಕಂಪ್ಲೆಂಟ್ ಕೊಡದೆ ಪುಸ್ತಕ ಬರೆದಿದ್ದಾರೆ. ಈಗ ಸರಸ್ವತಿಯವರಿಗೆ ನಿಜವಾದ ಸಮಸ್ಯೆಯಾಯಿತು. ಆದರೆ ಯಾವ ಕಾರಣಕ್ಕೂ ಮಕ್ಕಳ ಕುತೂಹಲವನ್ನು ಸಮಾಧಾನಕರವಾಗಿ ತಣಿಸಬೇಕೆಂಬುದು ಅವರ ಬಯಕೆ. ಅದಕ್ಕೆ ಇನ್ನೊಂದು ಉಪಾಯ ಮಾಡಿದರು. ತಮಗಿಂತ ಹೆಚ್ಚು ಸಮಾಧಾನಕರ ಉತ್ತರ ಕೊಡಬಹುದಾದ ಹೆಡ್ ಮಿಸ್ಟ್ರೆಸ್, ವಿನೋದಮ್ಮನವರ ಹತ್ತಿರ ಮೀನಾಳನ್ನು ಕರೆದುಕೊಂಡು ಹೋದರು.

ಸರಸ್ವತಿ : ಮೇಡಂ, ಮೀನಾಳದು ಒಂದು ಪ್ರಶ್ನೆಯಿದೆ. ಅದಕ್ಕೆ ಅವಳಿಗೆ ಸಮಾಧಾನವಾಗುವ ಹಾಗೆ ನೀವೇ ಉತ್ತರಿಸಬೇಕು.

ಹೆಡ್ ಮಿಸ್ಟ್ರೆಸ್ ವಿನೋದಮ್ಮನವರಿಗೆ ಮೀನಾಳನ್ನು ಕಂಡರೆ ತುಂಬಾ ಅಕ್ಕರೆ. ಅವರ ತರಗತಿಯಲ್ಲಿ ಎಲ್ಲದರಲ್ಲೂ ಅವಳೇ ಫಸ್ಟ್. ಅವಳು ಎಲ್ಲ ಸ್ಪರ್ಧೆಗಳಲ್ಲೂ ಫಸ್ಟ್. ಹೀಗಾಗಿ ಮೀನಾಳ ಪ್ರಶ್ನೆಗೆ ಉತ್ತರಿಸುವುದಕ್ಕೆ ಅವರಿಗೆ ಬಹಳ ಆಸಕ್ತಿ.

ವಿನೋದಮ್ಮ : ಏನು ಮೀನಾ ? ಏನು ನಿನ್ನ ಪ್ರಶ್ನೆ ?

ಮೀನಾ : ನಮ್ಮ ತಂದೆ, ನಮ್ಮ ಮನೆಗೆ ತುಂಬಾ ಚೆನ್ನಾಗಿ ಕಾಣುವ ಪುಸ್ತಕ ತಂದಿದ್ದಾರೆ ನೋಡಿ ಇಲ್ಲೇ ಇದೆ. ಅದು ಎಲ್ಲ ಕಡೆ ಖರ್ಚಾಗುತ್ತಿದೆಯಂತೆ. ಆದರೆ ಅದರಲ್ಲಿ ಚಿತ್ರಗಳಿಲ್ಲ. ಅದರ ಹೆಸರು 'ಮೀ ಟೂ' ಎಂದು. ಈ ಪುಸ್ತಕ ನಮ್ಮ ಮನೆಗೆ ಅಮೆಜಾನ್‌ನಿಂದ ಬಂದಿದೆ ಮೇಡಂ. ಅದರಲ್ಲಿ ಏನಿದೆ ಎಂದು ಕೇಳಿದರೆ ನಮ್ಮ ತಂದೆಯೂ ಸರಿಯಾಗಿ ಹೇಳಲಿಲ್ಲ. ಅಮ್ಮನೂ ಸರಿಯಾಗಿ ಹೇಳಲಿಲ್ಲ, ಸರಸ್ವತಿ ಮೇಡಂ, ನೀವು ಚೆನ್ನಾಗಿ ಹೇಳುತ್ತೀರೆಂದು ನಿಮ್ಮ ಬಳಿ ಕರೆದುಕೊಂಡು ಬಂದಿದ್ದಾರೆ. 'ಮೀ ಟೂ' ಎಂದರೆ ಏನು ಮೇಡಂ ? ಇಷ್ಟೊಂದು ಖರ್ಚಾಗಲು ಈ ಪುಸ್ತಕದಲ್ಲಿ ಏನಿದೆ ಮೇಡಂ ?

ವಿನೋದಮ್ಮನವರಿಗೆ ಈ ಪ್ರಶ್ನೆಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ. ಸದ್ಯಕ್ಕೆ ತಪ್ಪಿಸಿಕೊಳ್ಳುವುದಕ್ಕೆ,"ಮೀನಾ ನಾಳೆಯಿಂದ ಬೇಸಿಗೆ ರಜೆ ಬರುತ್ತಿದೆ. ನಾನು ನಿನ್ನ ಪ್ರಶ್ನೆಗೆ ಮತ್ತೆ ಶಾಲೆ ಪ್ರಾರಂಭವಾದ ಮೇಲೆ ತಿಳಿಸುತ್ತೇನೆ. ಏಕೆಂದರೆ ಈ ಪ್ರಶ್ನೆಗೆ ಉತ್ತರ ತುಂಬಾ ಉದ್ದವಾದದ್ದು" ಎಂದು ಹೇಳಿ ಮೀನಾಳನ್ನು ಸಾಗು ಹಾಕಿದರು.

ಮೀನಾಳಿಗೆ ಏನೇನೂ ಸಮಾಧಾನವಾಗಲಿಲ್ಲ. ಏಕೆ ಎಲ್ಲರೂ ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಿಲ್ಲ ಎನ್ನುವುದೂ ಅವಳಿಗೆ ಅರ್ಥವಾಗಲಿಲ್ಲ. ಇರಲಿ ಮನೆಗೆ ಹೋದ ಮೇಲೆ ಅಣ್ಣ ಕೃಷ್ಣನನ್ನಾದರೂ ಕೇಳೋಣ ಅಂದುಕೊಂಡಳು.

ಕೃಷ್ಣ, ಕೃಷ್ಣಪ್ರಸಾದನ ಮಗ. ಮೀನಾಳಿಗಿಂತ 3 ವರ್ಷ ದೊಡ್ಡವನು. ತುಂಬಾ ಬುದ್ಧಿವಂತ ಮತ್ತು ಚೂಟಿಯಾದ ಹುಡುಗ. ಆದರೆ ಅವನಿಗೆ ಪುಸ್ತಕ-ಗಿಸ್ತಕಗಳಲ್ಲಿ ಆಸಕ್ತಿಯಿಲ್ಲ. ಆಟದಲ್ಲಿ ತುಂಬಾ ಇಷ್ಟ. ಯಾವಾಗಲೂ ಮನೆಯ ಹೊರಗೆ ಆಟದಲ್ಲಿ ತೊಡಗಿರುವವನು.

ಮೀನಾ, ಮನೆಗೆ ಹೋದ ತಕ್ಷಣ ಕೃಷ್ಣನನ್ನು ಕರೆದಳು.

'ಅಣ್ಣ ಬಾಯಿಲ್ಲಿ'

ಕೃಷ್ಣ ಬಂದ.

ಮೀನಾ : ಕೃಷ್ಣ, ಈ ಪುಸ್ತಕ ನೋಡು. ಅಪ್ಪಾ ಹೊಸದಾಗಿ ತಂದಿದ್ದಾರೆ. ಇದು ಯಾವುದರ ಬಗ್ಗೆ ಹೇಳುತ್ತೀಯಾ ?

ಕೃಷ್ಣ : 'ಅದು ಯಾವುದರ ಬಗ್ಗೆ ಆದರೆ ನಮಗೇನೆ ? ಬಾ ಕೇರಂ ಆಡೋಣ' ಅಂದ.

ಮೀನಾ : ಇಲ್ಲ. ಇದರ ಬಗ್ಗೆ ತಿಳಿದುಕೊಳ್ಳಲೇ ಬೇಕು. ಯಾರೂ ಹೇಳುತ್ತಿಲ್ಲ. ಯಾರನ್ನು ಕೇಳಿದರೆ 'ಮೀ ಟೂ' ಒಳ್ಳೆಯದು ?

ಮೀನಾ : ಅಪ್ಪ, ಅಮ್ಮ ಸರಸ್ವತಿ ಮಿಸ್, ಹೆಡ್ ಮಿಸ್ಟ್ರಸ್ ವಿನೋದಾ ಮಿಸ್ ಎಲ್ಲರನ್ನೂ ಕೇಳಿದೆ. ಆದರೆ 'ಮೀ ಟೂ' ಯಾರೂ ಸರಿಯಾಗಿ ಹೇಳಲಿಲ್ಲ. ಈ ಪುಸ್ತಕದಲ್ಲಿ ಚಿತ್ರಗಳಿದ್ದರೆ ನನಗೆ ಸ್ವಲ್ಪ ಗೊತ್ತಾಗುತ್ತಿತ್ತು. ನಿನಗೆ 'ಮೀ ಟೂ' ಇಂಗ್ಲೀಷ್ ಬರುತ್ತೆ ನೋಡಿ ಹೇಳೋ.

ಕೃಷ್ಣನಿಗೆ ಯಾವುದರಲ್ಲೂ ಅಸಕ್ತಿ ಇಲ್ಲ. ಆದರೆ ಇವಳಿಂದ ತಪ್ಪಿಸಿಕೊಳ್ಳಲು ಒಂದು ಉಪಾಯ ಅವನಿಗೆ ಹೊಳೆಯಿತು.

ಕೃಷ್ಣ : ಮೀನಾ. ಒಂದು ಕೆಲಸ ಮಾಡೋಣ. ತಿರುಪತಿ ತಿಮ್ಮಪ್ಪನಿಗೆ ಒಂದು ಪತ್ರ ಬರೆಯೋಣ. ಅವನು ನಿನಗೆ ಸರಿಯಾದ ಉತ್ತರ ಕೊಡುತ್ತಾನೆ.

ಕೃಷ್ಣ ಚೇಷ್ಟೆಗೆ ಹೇಳಿದ ಈ ಮಾತು ಮೀನಾಳಿಗೆ ನಿಜ ಅನ್ನಿಸಿತು. ಏಕೆಂದರೆ ಅವಳು, ಅವರ ಅಮ್ಮನ ಆಜ್ಞೆಯಂತೆ ಬೆಳಗ್ಗೆ ಮತ್ತು ರಾತ್ರಿ ದೇವರ ಮನೆಯಲ್ಲಿ ತಿರುಪತಿ ತಿಮ್ಮಪ್ಪನಿಗೆ ಭಕ್ತಿಯಿಂದ ನಮಸ್ಕಾರ ಮಾಡುತ್ತಿದ್ದಳು. ಅವರಮ್ಮ ಹೇಳುತ್ತಿದ್ದರು. ತಿಮ್ಮಪ್ಪ ಸರ್ವಶಕ್ತ. ನಮ್ಮ ಎಲ್ಲ ಸಮಸ್ಯೆಗಳನ್ನೂ ಬಗೆಹರಿಸುತ್ತಾನೆ ಎಂದು. ಮೀನಾಳಿಗೆ ಇದೇ ಸರಿ ಎನ್ನಿಸಿತು. ಅವಳು ಕೃಷ್ಣನನ್ನು ಕೇಳಿದಳು.

ಮೀನಾ : ಕೃಷ್ಣಾ ತಿಮ್ಮಪ್ಪನ ವಿಳಾಸ ಏನೋ.

ಕೃಷ್ಣ : ಅದೇನೇ ಎಲ್ಲರಿಗೂ ಗೊತ್ತು. ಹೀಗೆ ಬರಿ.

ಮೀನಾ ಶ್ರದ್ಧೆಯಿಂದ ಒಂದು ಕಾಗದ ತಯಾರು ಮಾಡಿದಳು. ಅದರ ಒಕ್ಕಣೆ ಹೀಗಿತ್ತು.

ತಿರುಪತಿ ತಿಮ್ಮಪ್ಪ, ತಿಮ್ಮಪ್ಪನ ಬೆಟ್ಟ, ಆಂಧ್ರಪ್ರದೇಶ.

ತಿರುಪತಿ ತಿಮ್ಮಪ್ಪನಿಗೆ, ಸಾಷ್ಟಾಂಗ ಪ್ರಣಾಮಗಳು. ನೀವು ನನ್ನದೊಂದು ಪ್ರಶ್ನೆಗೆ ಉತ್ತರ ಹೇಳಲೇಬೇಕು. ಇಲ್ಲಿ ನನಗೆ ಯಾರೂ ಸರಿಯಾಗಿ ಉತ್ತರ ಹೇಳುತ್ತಿಲ್ಲ. ಪ್ರಶ್ನೆಯೆಂದರೆ 'ಮೀ ಟೂ' ಪುಸ್ತಕ ಯಾವುದಕ್ಕೆ ಸಂಬಂಧಿಸಿದ್ದು ? ದೇವರಿಗೆ ಎಲ್ಲಾ ತಿಳಿದಿದೆಯೆಂದು ಅಮ್ಮ ಹೇಳುತ್ತಿರುತ್ತಾಳೆ. ಆದ್ದರಿಂದ ದಯವಿಟ್ಟು ನನ್ನ ಪ್ರಶ್ನೆಗೆ ಉತ್ತರ ಕಳುಹಿಸಿ ಕಾಯುತ್ತಿರುತ್ತೇನೆ.

ನಿಮ್ಮ ಭಕ್ತೆ

ಮೀನಾ

ಮೀನಾ ಈ ಕಾಗದವನ್ನು ಮನೆಯಲ್ಲಿ ಡ್ರಾಯರ್‌ನಲ್ಲಿಟ್ಟಿದ್ದ ಕವರಿಗೆ ಹಾಕಿ ವಿಳಾಸ ಬರೆದು ಹಾಕೇ ಬಿಟ್ಟಳು. ಒಂದು ವಾರದ ನಂತರ ತಿರುಪತಿಯಿಂದ ಮೀನಾಳ ಹೆಸರಿಗೆ ಒಂದು ಸಣ್ಣ ಪಾರ್ಸೆಲ್ ಬಂತು. ಮನೆಯವರೆಲ್ಲರಿಗೂ ಆಶ್ಚರ್ಯ. ಮೀನಾ ಪ್ಯಾಕೆಟ್ ಒಡೆದಳು. ಅದರ ಒಳಗೆ ಒಂದು ದೊಡ್ಡ ಲಾಡು ಉಂಡೆ ಮತ್ತು ಒಂದು ಪತ್ರ ಇತ್ತು. ಆದರೆ ಈ ಪತ್ರ ತೆಲುಗಿನಲ್ಲಿತ್ತು. ಮೀನಾಳಿಗೆ ತನಗೆ ತಿಮ್ಮಪ್ಪ ಉತ್ತರ ಕೊಟ್ಟಿದ್ದಾನೆಂಬ ನಂಬಿಕೆ ಮತ್ತು ಖುಷಿ. ಆದರೆ ಪತ್ರ ತೆಲುಗಿನಲ್ಲಿದೆ. ಮೀನಾ ಪತ್ರದೊಡನೆ ಪಕ್ಕದ ಮನೆಗೆ ಓಡಿದಳು. ಪಕ್ಕದ ಮನೆಯ ಕೃಷ್ಣ ಶೆಟ್ಟರು ತೆಲುಗಿನವರು. ಅವರಿಗೆ ಮೀನಾಳನ್ನು ಕಂಡರೆ ಬಹಳ ಇಷ್ಟ.

ಮೀನಾ : ಅಂಕಲ್ ನನಗೆ ತಿರುಪತಿ ತಿಮ್ಮಪ್ಪನಿಂದ ಪತ್ರ ಬಂದಿದೆ. ಆದರೆ ಅದು ತೆಲುಗಿನಲ್ಲಿದೆ. ನೀವು ಓದಬೇಕು ಅಂದಳು.

ಕೃಷ್ಣಶೆಟ್ಟರು, ಅಯ್ಯೋ ಅದಕ್ಕೇನಂತೆ. ಕೂತುಕೋ ಓದಿ ಹೇಳುತ್ತೇನೆ ಎಂದರು.

ಕೃಷ್ಣಶೆಟ್ಟರು ಪತ್ರವನ್ನು ನಿಧಾನವಾಗಿ ಓದಿಕೊಂಡರು. ಆಮೇಲೆ ಅದನ್ನು ಮೀನಾಳಿಗೆ ವಿವರಿಸಿದರು.

ಕೃಷ್ಣಶೆಟ್ಟರು : ಮೀನಾ, ನಿನ್ನ ಪತ್ರ, ಏಳುಕೊಂಡಳ ಸ್ವಾಮಿ, ತಿರುಪತಿ ತಿಮ್ಮಪ್ಪನ

ಸನ್ನಿಧಿಗೆ ತಲುಪಿದೆ. ಸ್ವಾಮಿ ತಿಮ್ಮಪ್ಪನ ಪರವಾಗಿ ಆಡಳಿತ ಮಂಡಳಿ ಉತ್ತರಿಸುತ್ತಿದೆ. ಪರಮಾತ್ಮನಾದ ತಿಮ್ಮಪ್ಪನಿಗೆ ಪ್ರತಿದಿನ ಸಾವಿರಾರು ಪತ್ರ ಬರುತ್ತದೆ. ಅದೆಲ್ಲದಕ್ಕೂ ಉತ್ತರ ಬರೆಯುವುದು ಕಷ್ಟ. ಅದನ್ನು ದಿನಾಂಕದ ಪ್ರಕಾರ ಜೋಡಿಸಿಟ್ಟು ಒಂದು ದಿನಕ್ಕೆ 5 ಪತ್ರದಂತೆ ಭಗವಂತ ಉತ್ತರಿಸುತ್ತಾನೆ. ನಿನ್ನ ಪತ್ರದ ಸರದಿ ಬರುವುದಕ್ಕೆ ಒಂದು ವರ್ಷವಾಗುತ್ತದೆ. ಆಗ ನಿನಗೆ ಉತ್ತರ ಬರುತ್ತದೆ. ಅದುವರೆಗೆ ನೀನು ಕಾಯಬೇಕು. ಈ ಪತ್ರದ ಜೊತೆ ಒಂದು ಲಾಡು ಉಂಡೆ ಕಳುಹಿಸುತ್ತಿದ್ದೇವೆ. ಅದು ಭಗವಂತನ ಪ್ರಸಾದ. ದೇವರ ಆಶೀರ್ವಾದ ನಿನ್ನ ಮೇಲೆ ಇರುತ್ತದೆ.

ಇಂತೀ, **ತಿಮ್ಮಪ್ಪನ ಆಡಳಿತ ಮಂಡಳಿ**

ಈ ಉತ್ತರವನ್ನು ಕೇಳಿ ಮೀನಾಳಿಗೆ ತುಂಬಾ ನಿರಾಸೆಯಾಯಿತು. ಭಗವಂತನೂ ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ ಎಂದು ದುಃಖವಾಯಿತು.

ಕೃಷ್ಣ ಶೆಟ್ಟರು ಮಾತ್ರ, ಮೀನಾ ಎಲ್ಲಿ ಪ್ರಸಾದ ಎಂದು ಕೇಳಿದರು. ಕೃಷ್ಣ ಶೆಟ್ಟರು, ಮೀನಾಳ ಮನೆಯವರೆಲ್ಲರಿಗೂ ರುಚಿ-ರುಚಿಯಾದ ಲಾಡು ದೊರೆಯಿತು.

ಹತ್ತು ತಿಂಗಳಿಂದ ಮೀನಾ 'ಮೀ ಟೂ'ಗೆ ಉತ್ತರ ಹುಡುಕುತ್ತಿದ್ದಾಳೆ. ಅವಳಿಗೆ ಅರ್ಥವಾಗುವ ರೀತಿಯಲ್ಲಿ ನಿಮಗೆ ಉತ್ತರ ಹೇಳುವುದಿದ್ದರೆ, ದಯವಿಟ್ಟು ಅವಳಿಗೆ ಕೆಳಗಿನ ವಿಳಾಸಕ್ಕೆ ತಿಳಿಸಿ ;

ಮೀನಾ,
ಕೆ/ಆ. ಅಪರಂಜಿ, ಬೆಂಗಳೂರು

■

---

# ಲಿಮಿರಿಕ್ಸ್

ಬಿ.ಎಸ್. ರವಿಕುಮಾರ್

ದೇವಕಣ

~~~~~~

ದೇವಕಣ ಕಂಡು ಹಿಡಿದ ಕೀರ್ತಿ
ಕುವೆಂಪು ಅವರಿಗೇ ಸಲ್ಲಬೇಕಿತ್ರೀ
ಓದಿದರೆ ಅವರ ಕವಿತೆ
ಹೇಳಿ ಸಿಕ್ಕದೇ ಇದ್ದೀತೇ
ಮಂತ್ರಕಣಾ ಶಕ್ತಿಕಣಾ ದೇವಕಣಾ ಆಲ್ ತ್ರೀ
~~~~~~

● ದಂಡಣಆ

3 ಅತಿಥಿ ದೇವೋಭವ. ಈ ಸಮಯದಲ್ಲೂ?

3 ಯಾವುದೋ ಒಂದು ಮೆಸೇಜನ್ನು ಅಣತಿ ಮಾಡಿದಂತೆ ಹತ್ತು ಜನಕ್ಕೆ ಮುಂದೊತ್ತಿಲ್ಲದೆ ಇದ್ದುದಕ್ಕೆ – ಅಂದರೆ ಫಾರ್‌ವರ್ಡ್ ಮಾಡಿಲ್ಲದ್ದಕ್ಕೆ– ಈ ಅನಾಹುತಕ್ಕೆಲ್ಲ ಕಾರಣ ಇರಬಹುದೆ ಎಂದೊಬ್ಬರು ಕೇಳುತ್ತಿದ್ದಾರೆ.

3 ಮದುವೆಗಳು ಈಗ ಸ್ವರ್ಗದಲ್ಲಷ್ಟೇ ನಡೆಯುತ್ತಿಲ್ಲ. ಸೈಬರ್ ಸ್ಪೇಸ್‌ನಲ್ಲೂ ಸಹ.

3 ಶಿಕ್ಷಣಕ್ಕೆ ಮಂತ್ರಿ ಇದ್ದಾರೆ. ಆದರೆ ಅವರಿಗೆ ಶಿಕ್ಷಣ ಇರಬೇಕು ಎಂತೇನಿಲ್ಲ.

3 ಕೃಷ್ಣ ಎಂದರೆ ನಿಮಗೇನನಿಸುತ್ತದೆ? ಹಾಲು/ಬೆಣ್ಣೆ ಅಥವಾ ನಿಷ್ಕಾಮಕರ್ಮ?

3 ನಮ್ಮನ್ನು ಘಾಸಿಗೊಳಿಸುವುದು ಬದಲಾವಣೆ ಅಲ್ಲ. ಆ ಬದಲಾವಣೆಗೆ ಪ್ರತಿರೋಧ ತೋರುವದರಿಂದ.

3 ಎನಿಒನ್ ಹು ಈಸ್ ಬೋರಡ್ ಆನ್ ಹಿಸ್ ಓನ್ ಈಸ್ ಬೋರಿಂಗ್ ಇನ್ ಕಂಪನಿ.

3 ಸಮುದ್ರ ಎಲ್ಲರಿಗೂ ಒಂದೇ. ಆದರೆ ಅದರಲ್ಲಿ ಕೆಲವರಿಗೆ ಮುತ್ತು ಸಿಗುತ್ತದೆ; ಕೆಲವರಿಗೆ ಮೀನು. ಕೆಲವರ ಕಾಲು ಒದ್ದೆಯಾಗುತ್ತದೆ ಅಷ್ಟೆ. ಬದುಕು ಎಲ್ಲರಿಗೂ ಒಂದೇ. ನಾವು ಏನು ಪ್ರಯತ್ನಿಸುತ್ತೇವೋ ಅದು ದಕ್ಕುತ್ತದೆ.

3 ಸಂಬಂಧಗಳು ಪಕ್ಷಿಯಂತೆ. ಬಿಗಿಯಾದರೆ ಪಕ್ಷಿ ಸಾಯುತ್ತದೆ. ಸಡಿಲವಾದರೆ ಅದು ಹಾರಿ ಹೋಗುತ್ತದೆ. ಎಚ್ಚರದಿಂದಿದ್ದರೆ ನಮ್ಮೊಟ್ಟಿಗೆ ಇರುತ್ತದೆ.

3 ಕೆಲವೊಮ್ಮೆ ನಮ್ಮ ಹಾದಿಯಲ್ಲಿ ಬರುವ ಅಡಚಣೆ ಬೇರೆ ಹಾದಿಯಲ್ಲಿ ಹೋಗಲು ನಮಗೆ ಸೂಚಿಸುತ್ತಿರುವ ಸಂಕೇತ ಆಗಿರಬಹುದು.

3 ಇನ್ ಚೈಲ್ಡ್ ಹುಡ್ ವಿ ಸ್ಮೈಲ್ ಫಾರ್ ನೊ ರೀಸನ್. ಇನ್ ಅಡಲ್ಟ್‌ಹುಡ್ ವಿ ಸ್ಮೈಲ್ ಟು ಹೈಡ್ ದಿ ರೀಸನ್.

3 ನೆನಪುಗಳು ಇರುವವರೆಗೂ ನಿನ್ನೆ ಇರುತ್ತದೆ, ಭರವಸೆ ಇದ್ದಾಗ ನಾಳೆ ನಮಗಾಗಿ ಕಾಯುತ್ತದೆ.

3 ಪ್ರತಿ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ. ಹೆಚ್ಚು ಯಶಸ್ಸು ಬೇಕಾದರೆ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬಹುದು.

3 ಒಂದು ಮಗು ಹುಟ್ಟಿದಾಗ ಅದರ ಜತೆ ಅಪ್ಪನೂ ಹುಟ್ಟುತ್ತಾನೆ. ಮಗು ಬೆಳೆಯುತ್ತದೆ. ಆದರೆ ಕೆಲವು ಅಪ್ಪಂದಿರು ಬೆಳೆಯುವುದೇ ಇಲ್ಲ.

3 ನನಗೆ ಕ್ಲೀನಾಗಿರಲು ಇಷ್ಟ ಆದರೆ ಸ್ನಾನ ಮಾಡಲು ಬೇಜಾರು.

3 ಪಕ್ಷಿಗಳು ಕಾಣೆಯಾದರೆ ಚಿಂತೆ ರೈತನಿಗಲ್ಲ, ಬೆದರುಬೊಂಬೆಗೆ.

■

# ಕೋಟಿಗೊಬ್ಬ ಕಾಣ್ರೇ.....

● ಎಚ್. ಗೋಪಾಲಕೃಷ್ಣ

**ಮರು ಜನ್ಮ ತಪ್ಪಿಸಿ ಕೊಂಡದ್ದು.......**

ತುಂಬಾ ದಿವಸದ ಒಂದು ಆಸೆ ತೀರಿಸಿ ಕೊಂಡರೆ ಯಾರಿಗೆ ತಾನೇ ಸಂತೋಷ ಆಗುಲ್ಲಾ ಹೇಳಿ? ಹಾಗೆ ನೋಡಿದರೆ ಕೆಲವು ಆಸೆಗಳು ಆಸೆಗಳಾಗೇ ಉಳಿತವೆ. ನನಗೆ ಮೊನ್ನೆ ಅದೇ ಆಗಿದ್ದು.

ಕಳೆದ ವರ್ಷ ಅದ್ಯಾವ್‌ದೋ ಟ್ರಿಪ್ ಅಂತ ಹೋಗಿದ್ದೆವಲ್ಲಾ ಅಲ್ಲಿ ಸಮುದ್ರ ತೀರದಲ್ಲಿ ಚುರು ಮುರಿ ಮಾರ್ತಾ ಇದ್ದಳು ಒಂದು ಹುಡುಗಿ. ಅದನ್ನು ತಿನ್ನೋಕೆ ಅಂತ ಹೋದ್ನಾ? ನನ್ನ ಹೆಂಡತಿ ಅದೆಲ್ಲಿ ಇದ್ದಳೋ, ಸರಕ್ ಅಂತ ಅಡ್ಡ ಬಂದಳು. ಅದು ಬೇಡ ಅಂತ ಕೈ ಹಿಡಿದು ದರ ದರ ಎಳೆದುಕೊಂಡು ದೂರ ಬಂದು ಬಿಟ್ಟಳು.

ಯಾಕೆ ಹಾಗೆ ಎಳೆದು ಕೊಂಡು ಬಂದೆ? ಕೊಬ್ರಿ ಎಣ್ಣೆ ಹಾಕಿ ಚುರು ಮುರಿ ಮಾಡ್ತಾ ಇತ್ತು ಆ ಹುಡುಗಿ, ಕಾಸು ಕೊಟ್ಟಿದ್ದೆ ಆಗಲೇ ಅವಳಿಗೆ..... ಅಂತ ರೇಗಿದೆ.

ಎಲ್ಲೋ ಬಂದು ಅದೇನು ಹಾಳು ಎಣ್ಣೆ ಹಾಕಿರ್ತಾರೋ ಅದನ್ನ ತಿಂದು ಬಿದ್ದು ಕೊಂಡರೆ ಇಲ್ಲಿ ನಿಮ್ಮನ್ ನೋಡ್ಕೋಳ್ಳೋಕೆ ಯಾರಿದ್ದಾರೆ ಅಂತ ರೇಗಿ ಬಿಟ್ಟಳು.

ದೂರದ ಊರು, ಅವಳ ಜೊತೆಗೆ ಅವಳ ಬಂಧುಗಳೇ ತುಂಬಿದ್ದಾರೆ ; ಅದರ ಜತೆಗೆ ಮರ್ಯಾದೆ ಪ್ರಶ್ನೆ ಬೇರೆ ನೋಡಿ ನಾನೇ ಸಾವರಿಸಿ ಕೊಂಡೆ...

ಹೆಹೆಹೆ ನೀನು ಹೇಳೋದು ಸರಿ, ಇಲ್ಲಿ ನಾನು ಮಲಗಿದರೆ ಪಾಪ ನೀನು ಏನು ಮಾಡೋಕ್ಕೆ ಆಗುತ್ತೆ... ಅಂತ ಮೀಸೆ ಮಣ್ಣಾಗಿಲ್ಲ ಅಂತ ತೋರಿಸಿ ಕೊಂಡಿದ್ದೆ.

ಜತೆ ಇದ್ದ ಎಲ್ಲಾ ಗಂಡಸರು ಮೀಸೆಲೇ ನಕ್ಕಿದ್ದು, ಹೆಂಗಸರು ಮೂತಿ ಕೊಂಕು ಮಾಡಿದ್ದೂ ಗಮನಿಸಿದ್ದೆ. ಆದರೂ ಜಟ್ಟಿ ಗತ್ತಿನಲ್ಲೇ ವರ್ತಿಸಿದ್ದೆ.. !

ಆದರೂ ಒಂದು ಕೊರಗು ಈವರೆಗೂ ಹಾಗೇ ಇದೆ. ಅದೇನು ಅಂದರೆ ಕೊಬ್ರಿ ಎಣ್ಣೆ ಹಾಕಿದ ಚುರು ಮುರಿ ರುಚಿ ತಪ್ಪಿದ ಕೊರಗು. ಇನ್ನೊಂದು ಜನ್ಮ ಎತ್ತಿ ಈ ಆಸೆ ತೀರಿಸಿಕೊಳ್ಳಬೇಕು ಅನ್ನುವ ಹಾಗಿದೆ, ಸಮುದ್ರ ತೀರ, ಆ ಹುಡುಗಿ, ಭೋರ್ಗರೆಯುವ ಸಮುದ್ರದ ಎತ್ತರದ ಅಲೆಗಳು.... ... ಇವು ನೆನಪು ಬಂದಾಗ.... ಇದು ಹಾಗಿರಲಿ ಬಿಡಿ. ಈಗ ನಾನು ನಿಮಗೆ ಹೇಳಲು ಹೊರಟಿರೋದು ನನ್ನ ಮತ್ತೊಂದು ಆಸೆ ಕುರಿತು. ಈಗ ಅದಕ್ಕೆ ಬರಲೇ..?

ಬಡವರಿಗೆ, ರಿಕ್ಷಾ ಟ್ಯಾಕ್ಸಿ ಡ್ರೈವರ್‌ಗಳಿಗೆ, ಪೌರ ಕಾರ್ಮಿಕರಿಗೆ, ದೀನರಿಗೆ ಇವರಿಗೆಲ್ಲ ಊಟ ತಿಂಡಿ ಸುಲಭವಾಗಿ ಕೈಗೆ ಸಿಗುವ ದರದಲ್ಲಿ ಕೊಡಬೇಕು ಅಂತ ಒಂದು ಸ್ಕೀಮ್ ಶುರು ಆಯ್ತು ನೆನಪಿದೆ ತಾನೇ? ಅಂದರೆ ಬಡತನದ ರೇಖೆ ಗಿಂತ ಕೆಳಗೆ ಇರೋರಿಗೆ...

ಆಮೇಲೆ ಆ ಸ್ಕೀಮ್‌ಗೆ ಇಂದಿರಾ ಕ್ಯಾಂಟೀನ್ ಅಂತ ಹೆಸರು ಮಡಗಿ,

ಆರಂಭ ಆಯ್ತು ಅದೂ ಗೊತ್ತು ತಾನೇ. ನನ್ನ ಪ್ರಾಬ್ಲಮ್ ಶುರು ಆಗಿದ್ದು ಆಗಲೇ. ಒಂದು ಸಲ ಇಂದಿರಾ ಕ್ಯಾಂಟೀನ್‌ಗೆ ಹೋಗಬೇಕು, ಅಲ್ಲಿ ಉಣ್ಣಬೇಕು ಅಂಬೋ ಆಸೆ.

ಅದೇನು ಅಂತ ದೊಡ್ಡದಯ್ಯಾ ಅಂತ ನೀವು ಕೇಳಬಹುದು. ಅದಕ್ಕೆ ಬಂದೆ. ನಾನು ಬಡವ ಅಲ್ಲ, ರಿಕ್ಷಾ ಟ್ಯಾಕ್ಸಿ ಡ್ರೈವರ್ ಅಲ್ಲ, ಪೌರ ಕಾರ್ಮಿಕ ಅಂತೂ ಅಲ್ಲವೇ ಅಲ್ಲ. ಜತೆಗೆ ಬಡತನದ ರೇಖೆಗಿಂತ ಅದೆಷ್ಟೋ ಸಾವಿರ ಮೆಟ್ಟಿಲು ಮೇಲೆ ಇರೋನು.

ನನ್ನಂಥ ನಾಗರೀಕ ಅದು ಹೇಗೆ ಸರ್ಕಾರ ಬಡವರಿಗೆ ಅಂತ ಮಾಡಿರೋ ಕ್ಯಾಂಟೀನ್‌ನಲ್ಲಿ ಹೋಗೋದು? ಅಲ್ಲಿ ಬಡವರ ಪಾಲಿನ ಊಟ ತಿಂಡಿ ಕಬಳಿಸೋದು? ಅಕಸ್ಮಾತ್ ಹೇಗೋ ಹೋದೆ ಅನ್ನಿ, ಅಲ್ಲಿ ಯಾರಾದರೂ ಗೊತ್ತಿರೋರು ಸಿಕ್ಕಿ ಗುರುತು ಹಿಡಿದು ಬಿಟ್ಟರೆ ಏನು ನನ್ನ ಪಾಡು....?

ಈ ತೊಳಲಾಟದಲ್ಲಿ ಸುಮಾರು ದಿವಸ ಕಳೆದೆ. ದಿನಾ ಬೆಳಿಗ್ಗೆ ಏಳೋದು, ಏಳು ಪೇಪರ್, ನಾಲ್ಕು ಕನ್ನಡ, ಎರಡು ಇಂಗ್ಲಿಷ್, ಒಂದು ತಮಿಳು ಮುಂದೆ ಹರಡಿ ಕೊಂಡು ಕುತ್ಕೋಳ್ಳೋದು, ಯಾರಾದರೂ ಮಂತ್ರಿ ಇಂದಿರಾ ಕ್ಯಾಂಟೀನ್‌ಗೆ ಬಡತನದ ರೇಖೆಗಿಂತ ಮೇಲಿರೋರು ಹೋಗಬಹುದು ಅಂತ ಪರ್ಮಿಷನ್ ಕೊಟ್ಟಿದಾರಾ ಅಂತ ಹುಡುಕೋದು.... ಈ ಸುದ್ದಿ ಪೇಪರ್‌ನಲ್ಲಿ ಕಾಣಿಸದೆ ಇದ್ದಾಗ ನಿಟ್ಟುಸಿರು ಬಿಟ್ಟು ಸ್ನಾನಕ್ಕೆ ಹೋಗೋದು, ಬಚ್ಚಲು ಮನೇಲಿ ನೀರು ಸುರಿದು ಕೊಳ್ತಾ ಅದರ ಜತೆಗೆ ಕಣ್ಣೀರು ಸುರಿಸೋದು.... ಹೀಗೆ ಅದೆಷ್ಟೋ ದಿವಸ ಕಳೆದುಬಿಟ್ಟೆ.

ನಿರಾಸೆ ಹೇಗೆ ಆವರಿಸಿ ಬಿಟ್ಟಿತು ಅಂದರೆ ಮುಂದಿನ ಜನ್ಮದಲ್ಲಿ ನಾನು ಬಡತನದ ರೇಖೆಗಿಂತಲೂ ಕಡಿಮೆ ಇರೋ ಹಾಗೆ ಹುಟ್ಟಿಸಿ ಬಿಡು ದೇವರೇ, ಅಲ್ಲಿವರೆಗೂ ಇಂದಿರಾ ಕ್ಯಾಂಟೀನ್ ಇರಲಿ ಅಂತ ದೇವರಲ್ಲಿ ದಿನಕ್ಕೆ ಮೂರು ಸಲ ಬೇಡಿಕೆ ಸಲ್ಲಿಸುತ್ತಿದ್ದೆ. ಹೀಗೆ ಸುಮಾರು ತಿಂಗಳುಗಳು ಬೇಡಿಕೆ ಸಲ್ಲಿಸಿದೆನಾ..? ಆಗಲೇ ಇದು ನಡೆದಿದ್ದು, ಇದನ್ನು ನೀವು ಪವಾಡ ಅಂದರೆ ನನ್ನ ತಕರಾರು ಇಲ್ರಿ...

ನನ್ನ ಮೊದಲ ಬಾಡಿಗೆ ಮನೆಯ ನೆರೆಯವರು ನಾನು ಒಂದೇ ಕಡೆ ಕೆಲಸ ಮಾಡ್ತಿದ್ದೋ. ಬಾಡಿಗೆ ಮನೆ ಅಂದಮೇಲೆ ಮನೆ ಓನರ್ ಸಂಗಡ ಕಿರಿ ಕಿರಿ ಇದ್ದೇ ಇರೋದು. ನನ್ನದು ಬಾಯಿ ಗಂಟಲು ಎರಡೂ ಮಿತಿ ಇಲ್ಲದವು. ಪಾಪ ನೇಬರು ಸಂಪನ್ನ, ಮೆದು ಭಾಷಿ. ಓನರ್ ಸಂಗಡ ನಾನು ಜಗಳ ಆಡಬೇಕಾದರೆ ಈತ ನನಗೆ ಮಾರಲಿ ಸಪೋರ್ಟ್‌ರು. ಜಗಳ ಆಡೋರಿಗೆ ಸ್ನೇಹಿತರು ಜಾಸ್ತಿ ಅಂತೆ. ನಮ್ಮ ಈ ನಂಟು ನಾವು ಮನೆ ಕಟ್ಟಿಕೊಂಡು ಬಂದ ಮೇಲೂ, ಅವರು ಮನೆ ಕಟ್ಟಿಕೊಂಡು ಹೋದಮೇಲೆ ಸಹ ಮುಂದುವರಿದು ಒಟ್ಟಾರೆ ಫ್ಯಾಮಿಲಿ ಫ್ರೆಂಡ್ಸ್ ಆಗಿದ್ದೋ. .........

ಆ ನೇಬರಿನ ಒಬ್ಬರು ನೆಂಟರು, ನನಗೂ ಗೊತ್ತಿರೋರು ತೀರಿದರು, ಬೆಳಿಗ್ಗೆ ಬೇಗ ದೇಹ ತೆಗಿತಾರೆ ಅಂತ ಸುದ್ದಿ ರಾತ್ರಿ ಬಂತು. ಪಾಪ ಅವರು ನಮ್ಮನೆಗೂ ಬರೋರು, ಹೋಗಿ ನೋಡಿಕೊಂಡು ಬರಬಾರದೇ, ಮನೇಲೆ ಫೋನು ಹಿಡಿದು

ಕೂತಿರೋ ಬದಲು....? ಅಂತ ಅಪ್ಪಣೆ ಆಯಿತು. ರಾತ್ರಿ ಮಲಗೋ ಮೊದಲು. ಹುಂ ಅಂತ ತಲೆ ಆಡಿಸಿದೆ. ಸತ್ತವರನ್ನು ನೋಡೋದಿಕ್ಕೆ ಹೋಗಬೇಕು ಅಂದಾಗ ಕೆಲವು ಡ್ರೆಸ್ ಕೋಡ್ ಇದಾವೆ ಗೊತ್ತು ತಾನೆ?

ಮಾಸಿರೋ ಶರ್ಟ್ ಅಥವಾ ಟಿ ಶರ್ಟ್, ಮನೆ ಹತ್ತಿರ ಆದರೆ ದಟ್ಟ ಪಂಚೆ, ದೂರ ಆದರೆ ಹಳೇ ಪ್ಯಾಂಟ್, ಅದಕ್ಕೆ ಜೇಬಿರಬೇಕು.... ಹೀಗೆ. ಹೆಂಗಸರಿಗೆ ಈ ಡ್ರೆಸ್ ಕೋಡ್ ಬೇರೆ. ನಮ್ಮ ಮನೆಯಿಂದ ಸಾವು ಆಗಿರೋ ಮನೆಗೆ ಆರು ಕಿಲೋಮೀಟರ್. ಬೆಳಿಗ್ಗೆ ಬೇಗ ಹೋಗೋದರಿಂದ ತಲೆಗೆ ರಾತ್ರಿ ಹಾಕಿದ್ದ ಮಂಕಿ ಟೋಪಿ ಹಾಗೇ ಹಾಕಿದೆ. ಒಂದು ಮಂಡಿ ಹರಿದಿರೋ ಹಳೇ ಪ್ಯಾಂಟ್, ಅದರ ಮೇಲೆ ಮೂವತ್ತು ವರ್ಷ ಹಿಂದೆ ಕೊಂಡಿದ್ದ ಒಂದು ಶರ್ಟ್ ಹಾಕಿದೆ, ಹವಾಯಿ ಚಪ್ಪಲಿ ತೊಟ್ಟು ಮನೆ ಬಿಟ್ಟೆ. ಆಟೋದಲ್ಲಿ ಹೋಗೋಣ ಅಂದುಕೊಂಡವನು ಬೆಳಿಗ್ಗೆ ಬೆಳಿಗ್ಗೆ ವಾಕಿಂಗ್ ಆಗುತ್ತೆ, ನಡೆದರೆ ಹೇಗೆ ಅಂತ ಥಿಂಕ್ ಮಾಡಿದೆ. ಅದೇ ಸರಿ ಅನಿಸಿತು. ಕಾಸು ಮಿಗುತ್ತೆ, ಸಾಯಂಕಾಲ ಮಸಾಲೆ ತಿನ್ನಬಹುದು ಅಂತ ತಲೆ ಐಡಿಯಾ ಕೊಡ್ತು.

ನನ್ನ ವಾಕಿಂಗ್ ಶುರು ಆಯಿತು. ಮಂಡಿ ಹರಿದಿರೋ ಬೆಲ್ ಬಾಟಂ ಪ್ಯಾಂಟ್, ದೊಗಲೆ ಶರ್ಟ್, ತಲೆಗೆ ಮಂಕಿ ಟೋಪಿ.. ಎದುರು ವಾಕಿಂಗ್ ಮಾಡುತ್ತಾ ಬಂದ ಗುರುತಿನೋರು, ನಾನು ಕೈ ಆಡಿಸಿದರೂ ಪಿಳಪಿಳ ನೋಡುತ್ತಾ ಮುಂದುವರೆದರು. ಏನಾಯಿತು ಇವರಿಗೆ ಅಂತ ಯೋಚಿಸುತ್ತಲೇ ಒಂದು ಒಂದೂವರೆ ಗಂಟೆ ನಡೆದಿದ್ದೆ.

ಸಾವಿನ ಮನೆಗೆ ಇನ್ನು ಹತ್ತು ನಿಮಿಷ. ಎಡಕ್ಕೆ ತಿರುಗಿ ಬಲಕ್ಕೆ ಹೋಗಿ ಮತ್ತೆ ಬಲ, ಆಮೇಲೆ ಎರಡು ಎಡ ತಿರುಗಿದರೆ ಅವರ ಮನೆ. ರಸ್ತೆ ಎಡಗಡೆ ಪಕ್ಕ ಅದೇನೋ ಚಟುವಟಿಕೆ ಕಾಣಿಸಿತು. ಅದೇನು ಅಂತ ನೋಡಿದರೆ ಜನ ಗುಂಪು ಗುಂಪು ಒಳಗೆ ಹೋಗ್ತಾ ಇದಾರೆ. ತಲೆ ಎತ್ತಿ ಬಿಲ್ಡಿಂಗ್ ಮೇಲಿನ ಬೋರ್ಡ್ ನೋಡಿದೆನಾ... ಹೃದಯ ಬಾಯಿಗೆ ಬಂತು ಅಂತಾರಲ್ಲಾ ಹಾಗಾಯ್ತು. ಅದೇನೋ ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರಿತು ಅಂತಾರೆ ನೋಡಿ ಹಾಗೆ.. !

ನನ್ನ ಕಣ್ಣಿಗೆ ಕಂಡಿದ್ದು ಏನು?

ಇಂದಿರಾ ಕ್ಯಾಂಟೀನ್ ಎನ್ನುವ ಫಲಕ ! ಕೊನೆಗೂ ಚಾನ್ಸ್ ಸಿಕ್ಕಿತು ಅಂತ ಖುಷಿ ಆಗಿ ಬಿಟ್ಟಿತು. ಜೇಬಲ್ಲಿ ದುಡ್ಡು ಹಾಕ್ಕೊಂಡು ಹೊರಟಿದ್ದೆ ಮನೆಯಿಂದ. ಊಟ ಇಲ್ಲ ಅಂದರೇನು, ತಿಂಡಿ ಇರುತ್ತೆ ಅದನ್ನೇ ತಿಂದರೆ ಆಯಿತು, ಜೀವನದ ಒಂದು ಆಸೆ ಈಡೇರಲಿ ಅನಿಸಿತು.

ಸೀದಾ ಒಳಗೆ ನಡೆದೆ. ಕೌಂಟರ್ ಹಿಂದೆ ಆ ಕಡೆ ಕೂತಿದ್ದ ಹೆಂಗಸಿನ ಎದುರು ನೂರು ರೂಪಾಯಿ ಇಟ್ಟೆ.

ಬೆಳಿಗ್ಗೆ ಬೆಳಿಗ್ಗೆ ನೂರು ತಂದರೆ ಚಿಲ್ರೆ ಯಾರು ಇಟ್ಟು ಕೊಂಡಿರುತ್ತಾರೆ.....ಅಂತ ತಮಿಳ್‌ನಲ್ಲಿ ಸಿಡುಕಿತು.

ಸಾರಿ, ಎಷ್ಟು ಕೊಡಲಿ ಮೇಡಂ.. ಅಂದೆ.

ಇಂದಿರಾ ಕ್ಯಾಂಟೀನ್ ರೇಟು ಗೊತ್ತಿಲ್ಲ ನನಗೆ.

ಎಷ್ಟು ಪ್ಲೇಟ್ ಅಂದರು

ಎರಡು ಅಂದೆ

ಹತ್ತು ಕೊಡಿ...

ಹತ್ತು ಇರಲಿಲ್ಲ, ಜೇಬಿನಲ್ಲಿ.

ಇಪ್ಪತ್ತು ಕೊಡ್ಲಾ.. ಅಂದೆ

ಹುಂ ಅಂತ ಮತ್ತೆ ಸಿಡಸಿಡಾ ಅಂದರು.

ಇಪ್ಪತ್ತು ಇಟ್ಟೆ. ಎರಡು ಕೂಪನ್ನು ಹರಿದು ಮುಂದೆ ಇಟ್ಟರು. ಅವರ ಮೊಬೈಲ್ ನೋಡುತ್ತಾ ತಲೆ ಬಗ್ಗಿಸಿ ಕೂತರು .

ಕೂಪನ್ನು ತಗೊಂಡೆ, ಮಿಕ್ಕಿದ ಹತ್ತಕ್ಕೆ ಹಾಗೇ ನಿಂತೆ. ಒಂದು ನಿಮಿಷ ಆದಮೇಲೆ ತಲೆ ಎತ್ತಿದರು.

ಎಷ್ಟು...? ಅಂದರು

ಹತ್ತು... ಅಂದೆ.

ಐವತ್ತು ಕೊಡಿ...

ಮೇಡಂ ನೀವು ಹತ್ತು ರೂಪಾಯಿ ಚಿಲ್ರೆ ಕೊಡಬೇಕು, ಆಗಲೇ ನಿಮಗೆ ಇಪ್ಪತ್ತು ಕೊಟ್ಟೆ ಅಂತ ಜ್ಞಾಪಕ ಮಾಡಿದೆ.

ಇದು ಬೇರೆ.. ಅಂತ ಮತ್ತೆ ಸಿಡಸಿಡಿಸಿ ಹತ್ತರ ನೋಟು ಎಸೆದರು. ಅದನ್ನ ಜೇಬಲ್ಲಿ ಇರಿಸಿ ಕೌಂಟರ್‌ಗೆ ಬಂದೆ. ಕ್ಯೂನಲ್ಲಿ ನಿಂತೆ. ಸರದಿ ಬಂದ ಹಾಗೆ ಕೂಪನ್ನು ಮುಂದೆ ಇಟ್ಟೆ. ಒಂದು ಬೌಲ್‌ನಲ್ಲಿ ಎರಡು ಸಲ ತುಂಬಿ ಎದುರಿನ ತಟ್ಟೆಗೆ ಹಾಕಿದರು. ತಟ್ಟೆ ತಗೊಂಡು ಟೇಬಲ್ ಹತ್ತಿರ ಬಂದೆ. ತಟ್ಟೆಯಲ್ಲಿ ಇದ್ದದು ಬಾಯಲ್ಲಿ ಹಾಕಿದೆ. ಅದೇನು ಅಂತ ತಿಳಿಲಿಲ್ಲ. ಪಕ್ಕದಲ್ಲಿ ಇದ್ದೋರಿಗೆ ಇದೇನು ಅಂತ ಕೇಳಿದೆ. ಆತ ನಕ್ಕ. ಇದಾ ಚಾರ್? ಇದೀ ಪುಳಿಯೋಧರೆ ಚಾರು... ಅಂದ !

ಪ್ಲೇಟ್‌ನಲ್ಲಿದ್ದ ಪುಳಿಯೋಗರೆ ಪೂರ್ತಿ ತಿನ್ನೋ ಅಷ್ಟರಲ್ಲಿ ನಾಲ್ಕು ಸಲ ಬಿಕ್ಕಲು ಬಂತು. ಪಾಪ ಆತನೇ ಹೋಗಿ ಹೋಗಿ ಪ್ಲಾಸ್ಟಿಕ್ ಲೋಟದಲ್ಲಿ ನೀರು ತಂದು ಕೊಟ್ಟ. ತಟ್ಟೆ ಎಲ್ಲರೂ ಅಲ್ಲಿ ಮೂಲೆಯಲ್ಲಿ ಇಡುತ್ತಿದ್ದರು. ನಾನೂ ತಟ್ಟೆ ತಗೊಂಡು ಎದ್ದೆ. ಬಿಡಿ ಚಾರು ಬಿಡಿ ಅಂತ ಅವನೇ ನನ್ನ ತಟ್ಟೆ ತಗೊಂಡ, ಮೂಲೆಯಲ್ಲಿ ಇಟ್ಟು ಬಂದ.

ಕಾಪಿ ಇಲ್ಲಿ ಚಿಗಲ್ಲ ಚಾರು. ಆಚೆ ವೋಗ್ಬೇಕು ಅಂದ.

ಆಚೆ ಬಂದ್ರೋ. ದರ್ಶಿನಿ ಹೋಟಲ್ ಹೊಕ್ಕಿದೇವಾ, ಅವನೇ ಎರಡು ಕಾಪಿ ಅಂತ ಕೂಪನ್ನು ತಂದ.

ನನಗೆ ಸಕ್ಕರೆ ಬೇಡ ಅಂದೆ. ತಲೆ ಆಡಿಸಿದ, ಗೊತ್ತು ಚಾರು ಅಂದ !

ಇಲ್ಲಿ ಯಾವುದಪ್ಪಾ ಶನೇಶ್ವರ ಬಂತು ಅಂತ ತಲೆ ಕೆಡಿಸಿ ಕೊಳ್ತಾ ಕಾಪಿ ಹೀರಿದೆ. ಆತನು ಕಾಪಿ ಕುಡಿದ.

ಚಾರ್ ಎಷ್ಟು ದಿನ ಆಗಿತ್ತು ನಿಮ್ಮನ್ನು ನೋಡಿ... ಅಂದ.

ಸುಮ್ಮನೆ ತಲೆ ಆಡಿಸಿದೆ. ಅವನು ಯಾರು ಅಂತ ಇಷ್ಟು ಹೊತ್ತಿಗೆ ಹೊಳೆದಿತ್ತು. ಶಿವಾ ಅಂತ ನಾನು ಕೆಲಸ ಮಾಡುತ್ತ ಇದ್ದ ಕಡೆ ಕಾಪಿ ತಂದು ಕೊಡ್ತಾ ಇದ್ದ. ಭಾರಿ ಮಾತು ಮತ್ತು ಊರಿನ ಎಲ್ಲರೂ ತನಗೆ ಗೊತ್ತು ಎನ್ನುವ ಮನೋಭಾವನೆ ಇದ್ದೋನು. ಈಗ ಹೇಗೆ ಇವ್ನ ಕೈಲಿ ತಪ್ಪಿಸಿ ಕೊಳ್ಳೋದು? ನಾನು ಇಲ್ಲಿ ಸಿಕ್ಕಿದ್ದೇ ಅಂತ ನಾಳೆ ಅಷ್ಟು ಹೊತ್ತಿಗೆ ಇಡೀ ಬೆಂಗಳೂರಿಗೆ ಸುದ್ದಿ ಹಬ್ಬಿಸಿ ಬಿಟ್ಟಿ ಇರ್ತಾನೆ.

ಚಾರು ನಾನು ನೆನಪು ಬಂತಾ... ಅಂದ.

ಮುಖದಲ್ಲಿ ಏನೂ ಭಾವನೆ ಇಲ್ಲದೇ ಅವನನ್ನ ನೋಡಿದೆ.

ಚಾರು, ನಾನು ಶಿವಾ...

ನನ್ನ ಮುಖ ಹಾಗೇ ಇತ್ತು.

ನಿಮ್ಮ ಕೆಳಗೆ ನಾನು ಕೆಲಸ ಮಾಡ್ತಿದ್ದೆ....

ಕಣ್ಣು ಪಿಳಪಿಳ ಮಾಡಿದೆ.

ಅಷ್ಟರಲ್ಲಿ ಯಾರೋ ಎನ್ನ ಶಿವಾ ಅಂತ ಅವನ ಬಳಿ ಬಂದರು.

ಇವರು ನಂಗೆ ಚಾರ್ ಆಗಿದ್ದರು, ಪಾಪ ಮರೆವು ಬಂದಿದೆ ಅಂತ ಕಾಣುತ್ತೆ ಅಂತ ಸಂತಾಪ ತೋರಿಸಿದ.

ಅಷ್ಟರಲ್ಲಿ ಅವನ ಗೆಳೆಯ ಕೂಗಿದ. ಚಾರ್, ಇಲ್ಲೇ ಇರು ಈಗ ಬಂದೆ. ಮನೆಗೆ ಬಿಡ್ತೀನಿ ಅಂತ ಅವನು ಆ ಕಡೆ ಹೋದ.

ನಾನು ಈ ಪಕ್ಕದಲ್ಲಿ ಆಚೆ ಬಂದು ಸಾವಿನ ಮನೆ ಸೇರಿದೆ. ಅದು ಮುಗಿಸಿ ಸೀದಾ ಆಟೋ ಹತ್ತಿ ಮನೆ ಸೇರಿದೆ, ಶಿವನಿಂದ ತಪ್ಪಿಸಿಕೊಂಡು ಬಚಾವ್ ಆದೆ!

ಆದರೆ ನನಗೆ ಎಷ್ಟೋ ವರ್ಷಗಳ ನಂತರ ಸಂತೋಷ ನೀಡಿದ ಸಂಗತಿ ಎಂದರೆ ಇಂದಿರಾ ಕ್ಯಾಂಟೀನ್‌ನಲ್ಲಿ ಉಂಡಿದ್ದು ಮತ್ತು ಮತ್ತೊಂದು ಜನ್ಮತಳೆಯುವ ಸಂದರ್ಭ ತಪ್ಪಿಸಿಕೊಂಡು ಈ ಜನ್ಮದ ಆಸೆ ಈ ಜನ್ಮದಲ್ಲೇ ತೀರಿಸಿಕೊಂಡಿದ್ದು. ಇಂದಿರಾ ಕ್ಯಾಂಟೀನ್‌ನಲ್ಲಿ ಉಣ್ಣುವ ಆಸೆಯನ್ನು ಎಷ್ಟು ಜನ ತೀರಿಸಿ ಕೊಳ್ಳಲು ಸಾಧ್ಯ ಹೇಳಿ?

ಅದರಿಂದಲೇ ನಾನು ಕೋಟಿಗೊಬ್ಬ ಕಾಣ್ರೀ..... ■

---

ಬರೀ ದುಡ್ಡಿಂದ ಎಲ್ಲವನ್ನೂ
ಕೊಂಡುಕೊಳ್ಳಲಾಗುವುದಿಲ್ಲ ಎನ್ನುವುದು ಸತ್ಯ.
ಹೌದು ನಿಜ, ಆದರೆ ದುಡ್ಡೇ ಇಲ್ಲದಿದ್ದರೆ ಏನನ್ನೂ
ಕೊಳ್ಳಲಾಗುವುದಿಲ್ಲ ಎನ್ನುವುದೂ ಅಷ್ಟೇ ಸತ್ಯ

# ಯಾರ್ರಿ ಅವಳು...?

● ಗುಂಡುರಾವ್ ದೇಸಾಯಿ

"ಅಲ್ರಿ ಇಪ್ಪತ್ತು ವರ್ಷದಿಂದ ನೋಡತಾ ಇದ್ದೀನಿ, ಹತ್ತು ಹನ್ನೆರಡು ಪುಸ್ತಕ ಬರದೀರಿ, ಒಂದಾದರೂ ಕವಿತೆ ಬರಿದರೇನ್ರೀ..... ನಾನು ನಿಮ್ಮನ್ನ ಸಾಹಿತಿಗಿಂತ ಕವಿಯಾಗಿ ನೋಡುವ..ನಿಮ್ಮ ಕಾವ್ಯ ಆಸ್ವಾದಿಸಬೇಕು ನನ್ನ ಕಂಠದಿಂದ ಮಧುರವಾಗಿ ಹಾಡಬೇಕು ಅಂತ ಆಸೆ..ನಿಮ್ಮ ಕವಿತೆನ ಹಲವು ಜನರು ಹಾಡದನ್ನ ಕೇಳಬೇಕು ಅಂತ ಬಯಕೆ ನನ್ನದು" ಎಂದು ಈಕೆ ಉದ್ಗಾರ ತೆಗೆದಳು

ನಾನೆಂದೆ " ಸಾಹಿತಿಗಳಾದ ಎನ್ಕೆಯವರಿಗೂ ಕವಿತೆ ಬರೆಯುವ ಹಂಬಲವಾಗಿ ಬರೆದು ಅದನ್ನ ಬೇಂದ್ರೆಯವರಿಗೆ ತೋರಿಸಿದರಂತೆ, ಆಗ ಬೇಂದ್ರೆಯವರು ನಿನಗ ಕವಿತೆ ಒಲಿತಿಲ್ಲ ದಯವಿಟ್ಟು ಬರದು ಅಪಕೀರ್ತಿ ಹೊಂದಬೇಡ. ನಿನಗ ಗದ್ಯದಲ್ಲಿ ಗಟ್ಟಿತನ ಅದ ಅದರಲ್ಲಿಯ ಮುಂದುವರಿ ಅಂದ್ರು" ಎಂದೆ

"ಅದಕ್ಕೂ ನಿಮಗೂ ಏನು ಸಂಬಂಧರಿ....?"

"ನನ್ನದು ಸೇಮ್ ಕೇಸು..ನೋಡೆ, ಕಾವ್ಯದ ಬಗ್ಗೆ ಒಲವಿಲ್ಲ, ನನಗೆ ಒಲಿತಿಲ್ಲ, ಕಾವ್ಯ ಕನ್ನಿಕೆ ಸುಲಭದಲಿ ದಕ್ಕುವವಳು ಅಲ್ಲ.. ದಯವಿಟ್ಟು ಒತ್ತಾಯಿಸಬೇಡ"

"ಇಲ್ಲ ಇಲ್ಲ... ಆಗದು...ಆಗದು... ನೀವು ಬರೆಯಲೇಬೇಕು"

"ಯಾಕೆ ಅಷ್ಟು ಒತ್ತಡ ಹಾಕುತ್ತಿಯೆ?"

"ಇಲ್ಲ ನನ್ನ ಸ್ನೇಹಿತೆಯರು, ಛೇಡಸ್ತಾ ಇದ್ದಾರೆ 'ನಿಮ್ಮ ಮನೆಯವರು ಕವಿತೆನೆ ಬರದಿಲ್ಲ......ಬರಿ ಎಂತಂತದೊ ಬರಿತಾರೆ ಅಂತ. ಅಂದರ ನೀನು ಅವರಲ್ಲಿ ಕಾವ್ಯ ಹುಟ್ಟೊ ಹಾಗೆ ಮಾಡಿಲ್ಲ..ಇಲ್ಲದಿದ್ದರೆ ನರಸಿಂಹಸ್ವಾಮಿಯವರಾಂಗ, ಬೇಂದ್ರೆಯವರಂಗ, ಕಾಯ್ಕಿಣಿಯವರಂಗ ಕಾವ್ಯ ಬರದು ಫೇಮಸ್ ಆಗತಿದ್ರು... ನಿನ್ನ ಸ್ಥಾನದಾಗ ನಾವು ಇದ್ದಿದ್ರ ಶೃಂಗಾರ ಕಾವ್ಯಗಳ ಸಂಪುಟನ ಹೊರಗ ತರೊಹಾಂಗ ಮಾಡತಿದ್ವಿ' ಎಂದ್ರು" ಎಂದಳು ದುಃಖಿಸುತ್ತಾ.

"ನೋಡೆ ಅವರು ಏನೋ ತಮಾಷೆ ಮಾಡಿರಬೇಕು. ಅದಕ್ಯಾಕ ತಲೆಕೆಡಿಸಿಕೊತಿ.. ಕಾವ್ಯ ಬರೆಯುವುದು ಸುಲಭ ಅಲ್ಲ. ಇದುವರೆಗೂ ಎಷ್ಟೊ ಕವಿತೆ ಬರೆದರು ಅದನ್ನು ಪ್ರಕಟಿಸಲು ಹೋಗಿಲ್ಲ ಕಾರಣ ಅದು ನನಗೆ ತೃಪ್ತಿ ನೀಡಿಲ್ಲ"

"ಅಂದ್ರೆ ನಾನು ನಿಮಗೆ ಸರಿಯಾದ ಹೆಂಡತಿ ಅಲ್ಲ ಅಂದಂಗಾತು...."

"ಎಂತವಳೆ ನೀನು.. ಬರೆಯುವುದಕ್ಕೂ ನಿನಗೂ ಏನು ಸಂಬಂಧ? ಕಾವ್ಯನ ಬೇರೆ, ಬದುಕ ಬೇರೆ"

"ಅದೆಂಗ ಸಾದ್ಯ ಇರಲ್ರಿ .. ಎರಡು ಒಂದೆ ಅಂತ ನೀವ ಹೇಳತಿದ್ದೀರಿ"

"ಅಯ್ಯೊ....? ನಾನು ಹೇಳಿದ್ದು ನನಗೆ ತಿರುಮಂತ್ರ ಆಯ್ತಲ್ಲ" ಎಂದು ಹಣೆಹಣೆ ಬಡದುಕೊಂಡೆ.

"ಅದೆಲ್ಲ ಬೇಕಿಲ್ಲ. ನಿಮಗೆ ನನ್ನ ಮೇಲೆ ಒಲವಿಲ್ಲ ಹಾಗಾಗಿ ಬರದಿಲ್ಲ.....ನಿಮ್ಮ ಪ್ರೀತಿಯೆಲ್ಲ ನಾಟಕ" ಎಂದು ಮಾತಿಗೆ ಇತಿಶ್ರೀ ಹಾಕಿದಳು.

"ಅಯ್ಯ.... ಏನೆ ನಿನ್ನದು ಹೊಸ ವರಾತ..ಅದಕ್ಕೂ ಇದಕ್ಕೂ ಏನು ಸಂಬಂಧ?"

"ಹಾಗಾದರೆ ಬರೀರಿ ನನಗೋಸ್ಕರವಾಗಿಯಾದರೂ...."

"ಬಹಳ ಕಷ್ಟ ಕಣೆ..ಬರಿಯೋದು ಬೇಕಾದ್ರ ಶೃಂಗಾರ ಕಥೆ ಬರಿತಿನಿ...ನೋಡು ಬೇಕಾದ್ರೆ. ನಿನ್ನ ಗೆಳತಿಯರೆ ನನ್ನ ಬಂದು ಸುತ್ತುವರಿಬೇಕು"

"ಯೂ.....ಏನ್ರೀ? ನಿಮ್ಮ ಕಣ್ಣು ಕಿತ್ತಿಬಿಡತಿನಿ. ನಾನು ಕೇಳಿದ್ದು ಕಾವ್ಯ. ಅದು ಮೊದಲು ಬರಿರಿ ಅಷ್ಟೆ ಸಾಕು"

"ಅಯ್ಯೋ...? ವಿಧಿಯೇ!"

"ನನ್ನ ಮೇಲೆ ನಿಮಗೆ ಪ್ರೀತಿ ಇಲ್ಲಂದಂಗಾತು"

"ಕರ್ಮ ಕರ್ಮ.. ಬೇಡ" ಎಂದೆ

ಬಾಗಿಲು ಹಾಕಿಕೊಂಡು ಒಳಹೊಕ್ಕಳು.

ಎರಡು ದಿನ ಆಯ್ತು.... ಮೂರು ದಿನ ಆಯ್ತು ಕವಿತೆಗಾಗಿ ಮೌನ ಪ್ರತಿಭಟನೆ. ನಾನು ನಿರ್ಧರಿಸಿದೆ. ಬರಿಯುವುದು ಕಷ್ಟ ಅಂತ ಗೊತ್ತಿತ್ತು. ಮೊದಲು ಬರೆದ ಕವಿತೆಗಳೆಲ್ಲ ಸಂಪಾದಕರ ಅವಕೃಪೆಗೆ ಪಾತ್ರವಾಗಿ ಮರಳಿ ಬಂದಿದ್ದವು. ಕಾವ್ಯ ಬರಿಬೇಕೆನಿಸಿದರೂ ಗದ್ಯ ನನಗ ಯಾಕೋ ಬಹಳ ಇಷ್ಟವಾಗಿ ಅದರ ಕೈ ಬಿಟ್ಟಿದ್ದೆ. ಮನೆಯ ಈ ಬಿರುಸಿನ ವಾತಾವರಣಕ್ಕಾದರೂ ಬರಿಲೇಬೇಕಾಯಿತು...ದೊಡ್ಡವರೆಲ್ಲರ ಯಾವ್ಯಾವೊ ಕವನಸಂಕಲನ ಓದಿದೆ. ಅಧ್ಯಯನ ಮಾಡಿ ಅಂತೂ ಆರ್ಕಿಮಿಡಸ್‌ಗೆ ಸಾಕ್ಷೇಪ ಸಿದ್ಧಾಂತದ ಸಮಸ್ಯೆಗೆ ಉತ್ತರ ಸಿಕ್ಕಂಗೆ ನನಗೂ ಕಾವ್ಯದ ಜಾಡು ಸಿಕ್ಕಿತು. ಸುಂದರ ಕವಿತೆಯೊಂದು ಒಲಿಯಿತು ಹಲವು ವರ್ಷಗಳ ತಪಸ್ಸಿನ ಫಲದಂತೆ. ಬರೆದೆ ತಿದ್ದಿದೆ. ಹೊಸತಾಗಿ ಕಂಡಿತು. ಇದುವರೆಗೂ ಬರೆದಕ್ಕಿಂತ ವಿಶೇಷವಾಗಿದೆ ಎನಿಸಿತು. ನನ್ನ ಕೈನಾ ಬರೆಸಿದ್ದು ಎಂದು ಪ್ರಶ್ನಿಸಿಕೊಂಡೆ! ಅಷ್ಟು ಶೃಂಗಾರಮಯವಾಗಿ ರಮಣೀಯತೆ ಅದರಲ್ಲಿ ಹಾಸುಹೊಕ್ಕಿತು.

ಅಂತೂ ನನ್ನವಳ ಹಠದಿಂದಾರೂ ಕಾವ್ಯ ಒಲಿಯಿತು ಹಲವರು ಬರೆಯಬೇಡ ಎಂದವರು ಮುಖಕ್ಕೆ ಒಗೆಯಲು ಅನುಕೂಲವಾಯಿತು ಎಂದು ಓಡೊಡಿ ಬಂದು ಅವಳ ಮುಂದೆ ಓದಲು ಅನುವಾದೆ.

"ಏನು ಬಂದಿದ್ದು.." ಬಂತು ಅವಳಿಂದ ಪ್ರಶ್ನೆ

"ಅದೆ ಕಣೆ ವಾರಗಟ್ಟಲೆ ಕಷ್ಟಪಟ್ಟು ನಿನಗಾಗಿ ಕಾವ್ಯ ಬರೆದುಕೊಂಡು ಬಂದಿದ್ದರೆ..... ಏನು ಉತ್ಸುಕತೆ ಇಲ್ಲದೆ 'ಏನು ಬಂದಿದ್ದು?' ಅಂತ ಕೇಳ್ತಿಯಲ್ಲೆ"

"ಖುಷಿಯಿಂದ ಹೌದಾ ಕಾವ್ಯ ಬರದರಾ... ಆ ಬಿನ್ನಾಣಗಿತ್ತೇರಿಗೆ ಇವತ್ತು ನಿಮ್ಮ ಕವಿತೆ ಓದಿ ತೋರಸ್ತಿನಿ ಏನಂತ ತಿಳಕೊಂಡರಾ ನಿಮ್ಮನ್ನು?" ಎಂದು ಸಂಭ್ರಮಿಸಿ ಓದಲು ಹೇಳಿದಳು

ನಾನು ಭಾವನಾತ್ಮಕ ಕಾವ್ಯ ಓದಿದೆ

ಓದುತ್ತಾ ಓದುತ್ತಾ ಹೋದಂತೆ ನನ್ನವಳ ಕೆನ್ನೆ ಕೆಂಪೇರತೊಡಗಿತು

ನನಗೂ ಕಳೆದುಕೊಂಡ ಒಲವನ್ನು ಮತ್ತೆ ಪಡೆದ ಖುಷಿ. ಖುಷಿಯಿಂದ

ಮತ್ತೆ ಓದಲಾರಂಭಿಸಿದೆ...ಹಾಗೆ ಓದುತ್ತಾ ಓದುತ್ತ ಹೋಗಿ ಮುಗಿಸಿ ಅವಳ ಮುಖ ನೋಡಿದೆ. ಕಣ್ಣು ಕೆಂಪಾಗಿತ್ತು ಆರಂಭದಲ್ಲಿ ಇದ್ದ ಕಾಂತಿ ಇಲ್ಲದಾಗಿತ್ತು.

"ಏನ್ರಿ ಇದು?" ಎಂದಳು

"ಕಾವ್ಯ...."

"ಯಾರ್ರೀ ಅವಳು?"

"ಅದೇ ಕಾವ್ಯ ?"

"ಅದೇರಿ..... ಯಾರ್ರೀ ಅವಳು?"

"ನನಗ ಅರ್ಥ ಆಗಲಿಲ್ಲ?" ಎಂದೆ

"ನನಗೆಲ್ಲ ಅರ್ಥ ಆತೂ....." ಎಂದು ಸಿಟ್ಟಿನಿಂದ ಬೆಡ್ ರೂಮೊಳಗೆ ಹೊಕ್ಕು ಬಾಗಿಲು ಮುಚ್ಚಿಕೊಂಡಳು...

ಈಗ ಹಲವು ದಿನ ಆಯ್ತು ಪದ್ಯನೂ ಇಲ್ಲ ಗದ್ಯನೂ ಜೊತೆಗೆ ನನಗೆ ನಿದ್ದೇನೂ.

ಕಾವ್ಯ ಓದಿದ ದಿನದಿಂದ ಮನೆಯಲ್ಲಿ ಆಗಾಗ ಭೂಕಂಪ ಸುನಾಮಿ.

ಎಷ್ಟೆ ಸಮಾಜಾಯಿಷಿ ನೀಡಿ ಸಮಾಧಾನಿಸಿದರು ಅವಳು ಬಿಟ್ಟಿಲ್ಲ "ಯಾರ್ರಿ ಅವಳು?" ಎಂದು ಕೇಳುವುದು.

ನಡು ರಾತ್ರಿ ಬೆಚ್ಚಿ ಬಿದ್ದು, ಎದ್ದು ಎಬ್ಬಸಿ 'ಗೊಳೊ' ಅಂತ ಅತ್ತು ಕೇಳುತಿರುತ್ತಾಳೆ "ಯಾರ್ರಿ ಅವಳು...ಯಾರ್ರಿ ಅವಳು" ಎಂದು. ■

---

# ಲಿಮಿರಿಕ್ಸ್

ಬಿ.ಎಸ್. ರವಿಕುಮಾರ್

ಮಾರೀಚ

~~~~~ ~~

ಬ್ರದರ್ಸ್ ಮಾರೀಚ ಮತ್ತು ಸುಬಾಹು
ರಾಮನ ಕೈಯಲ್ಲಿ ಅಪ್ಪಿದರು ಸಾವು
ಇನ್ನಿಬ್ಬರು ಇದ್ದರಲ್ಲ ಏನಾದರೋ ಅವರು
ಗಣಿತದ ಮೇಷ್ಟ್ರು ಹೇಳ್ತಿದ್ರು ಹೆಸರು
ಬ್ರದರ್ಸ್ ಸಮಬಾಹು ಮತ್ತು ವಿಷಮಬಾಹು
~~~~~

# ಗೂಬೆ ಸುಳಿಯ ಹೋರಿ

**ಮಲ್ಲಿಕಾರ್ಜುನ ಹೊಸಪಾಳ್ಯ**

ನಮ್ಮ ಹಳ್ಳಿಗಾಡಿನ ರೈತಾಪಿ ಅಪ್ಪಂದಿರುಗಳಿದ್ದ ಹತ್ತೆಂಟು ಥರದ ಖಾಯಿಷ್ಗಳು ನಮ್ಮಪ್ಪನಿಗೂ ಇದ್ದವು. ಹೊಲ ಕೊಳ್ಳುವುದು–ಮಾರುವುದು, ಮರ ಕಡಿಯುವುದು–ಸಸಿ ನೆಡುವುದು, ರೌಂಡ್ ಬಾವಿ ತೆಗೆಸುವುದು–ಅದಕ್ಕೆ ಕಲ್ಲು ಕಟ್ಟಿಸುವುದು, ಗ್ವಾರೆ ಕಟ್ಟಿ ನೆಲ ಸಮ ಮಾಡುವುದು, ನೆಲ್ಲು ಬೆಳೆಯುವುದು, ಹೊಲದಲ್ಲಿ ಜೋಪಡಿ, ಮಂಚಿಗೆ ಕಟ್ಟುವುದು . . . ಹೀಗೆ. ಅದರಲ್ಲಿ ಬಹುಮುಖ್ಯವಾದುದು ಬೀಜದ ಹೋರಿ ಕಟ್ಟುವುದಾಗಿತ್ತು. ಅವರಿವರ ಬಳಿ ಈ ಬಗ್ಗೆ ಹೇಳುತ್ತಲೇ ಇದ್ದರು. ಆದರೆ ಕೈಯಲ್ಲಿ ಕಾಸಿಲ್ಲದೆ ಸುಮ್ಮಕಾಗಿದ್ದರು.

ಹೀಗಿರಬೇಕಾದರೆ ಒಂದು ದಿನ, ನಾಕನೇ ಕ್ಲಾಸು ಓದುತ್ತಿದ್ದ ನಾನು ಆಗ ತಾನೇ ಸೈಕಲ್ಲಿನಲ್ಲಿ ಕತ್ರಿ ಹೊಡೆಯುವುದನ್ನು ಕಲಿಯುತ್ತಿದ್ದೆ. ನಾಗಲಮಡಿಕೆ ಜಾತ್ರೆಗೆ ಹೋಗಿದ್ದ ಅಪ್ಪ ಪ್ರತ್ಯಕ್ಷ. ಕೈಯಲ್ಲಿ ಎರಡು ಹಗ್ಗ ಹಾಕಿ ಹಿಡಿದಿದ್ದ ಹೋರಿ. ಬಂದವರೇ ಅದನ್ನು ಎರಡು ಕಣ್ಣಿಯಲ್ಲಿ ಗ್ವಾಂದಿಗೆಗೆ ಕಟ್ಟಿ ನೋಡುತ್ತಾ ನಿಂತಿದ್ದ ನನಗೆ 'ಕಡ್ಲೆ ಬಳ್ಳಿ ಕಿತ್ಕಂಬಾ ಓಗಲೇ' ಎಂದಿತು.

ಹೋರಿ ಎಂದರೆ ಘನವಾದ ಹೋರಿ. ರುಪಾಯಿ ಬಣ್ಣ. ನೀಳವಾದ ಮುಂಗಾಲುಗಳು. ಕಪ್ಪು–ಕಂದು ಮಿಶ್ರಿತ ಪುಟ್ಟ ಗೊರಸುಗಳು. ಬಿರುಸಾದ ಮಾಂಸ ಖಂಡಗಳ ಹಿಂಗಾಲು ಪಿರ್ರೆಗಳು. ದಿವಿನಾದ ಬಾಲ. ತುಸುವೇ ಹಿಂಭಾಗಿದ ಒಂದಡಿ ಉದ್ದದ ಕಪ್ಪನೆ ಕೊಂಬುಗಳು. ನಿರಿಗೆ ಇಳಿದಂತೆ ಕಾಣುತ್ತಿದ್ದ ಕೊರಳಿಗೆ ಇಳಿಬಿದ್ದ ಚರ್ಮ. ನಕ್ಷತ್ರದಂತೆ ಕಾಣುತ್ತಿದ್ದ ಬೆನ್ನ ಮೇಲಿನ ಸುಳಿ. ನಡೆಯುವಾಗ ಬಲಗಾಲಿಟ್ಟರೆ ಎಡಗಡೆಗೂ, ಎಡಗಾಲಿಟ್ಟರೆ ಬಲಗಡೆಗೂ ವಾಲುತ್ತಿದ್ದ ಆಕರ್ಷಕ ಗೋಪುರ. ನೊಗ ಸೋಕದ ಹೆಗಲು. ಉಬ್ಬಿದ ಹಣೆ. ಕರ್ರಗೆ ಹೊಳೆವ ಗುಡ್ಡೆಗಳ ಕಣ್ಣುಗಳು, ಆ ಕಣ್ಣುಗಳ ಮೇಲೆ ಬಾಗಿದ ರೇಕುಗಳು, ಸದಾ ಥಣ್ಣಗಿರುತ್ತಿದ್ದ ಕಂದು ಮೂಗು. ತಿಳಿಗೆಂಪಿನ ಮೃದುವಾದ ಗದ್ದ.

ಅಪ್ಪನಂತೂ ದಿನದ 24 ಗಂಟೆಗಳಲ್ಲಿ ಕೆಲವೇ ಗಂಟೆಗಳನ್ನು ತನಗಾಗಿ ಇರಿಸಿಕೊಂಡು ಮಿಕ್ಕಸಮಯವನ್ನು ಹೋರಿಯ ಆರೈಕೆಗೇ ಮೀಸಲಿಟ್ಟಿತು. ಅದರ ಮೂಗುದಾರ ತಿರುವುವುದು, ಈರೆಕಾಯಿ ಒಪ್ಪಿನಿಂದ ಮೈಯುಜ್ಜುವುದು, ಬಿಸಿನೀರು ಕಾಸಿ ಮೈತೊಳೆಯುವುದು, ಹುಳ್ಳಿನುಚ್ಚು ಕಡ್ಲೆಕಾಯಿ ಹಿಂಡಿ ನೆನಾಕಿ ಉಂಡೆ ಮಾಡಿ ತಿನ್ನಿಸುವುದು, ತೆಂಗಿನ ಮಟ್ಟೆ ಬಡಿದು ಅದರ ನಾರಿನಿಂದ ಹಗ್ಗ, ಕಣ್ಣಿ, ಕೊಳ್ಳುದಂಡೆಗಳೇ ಮುಂತಾದುವನ್ನು ಹೊಸೆಯುವುದು, ಕೊಂಬು ಜೀವುವುದು, ಉಣ್ಣೆ–ಪಿಡದಗಳನ್ನು ಕೀಳುವುದು . . . ಹೀಗೆ ಸದಾ ಹೋರಿಯ ಸೇವೆಯಲ್ಲೇ ಇರುತ್ತಿದ್ದರು. ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಾದ ನಮಗೆ ಅದರಲ್ಲಿ ನಾಲ್ಕಾಣೆ ಭಾಗ ಸಮಯ ಕೊಟ್ಟಿದ್ದರೂ ಸೈತ ನಮ್ಮ ಪೊಸಿಷನ್ನೇ ಬೇರೆ ಆಗುತ್ತಿತ್ತು ಎಂದು ನನ್ನ ಅಣ್ಣಂದಿರೆಲ್ಲಾ ನಗಸಾರ ಮಾಡುತ್ತಿದ್ದರು.

ಅಪ್ಪ ಹೋರಿ ಸೇವೆಗೆ ನಿಂತ ಮೇಲೆ ಅಮ್ಮನಿಗೆ ಕೆಲಸ ಜಾಸ್ತಿಯಾಯಿತು. ಈ ಪಾಯಿಂಟು ಹಿಡಿದು ಅಮ್ಮ ಜಗಳ ತೆಗೆಯುತ್ತಿತ್ತು. ಹೊತ್ತುಟ್ಟಿದರೆ ಜಗಳ, ಹೊತ್ತು

ಮುಣುಕಿದರೆ ಜಗಳ. ಇದೇ ಸಮಯಕ್ಕೆ ಒಂದು ದಿನ ಪಕ್ಕದ ಗೊಲ್ಲರಹಟ್ಟಿಯ ದೊಡ್ಡರಾಮಯ್ಯ ಬಂದು ವೈದ್ಯರು ರೋಗಿಯನ್ನು ಪರೀಕ್ಷಿಸುವಂತೆ ಹೋರಿಯನ್ನು ಅಪೂಟಾ ಪರೀಕ್ಷಿಸಿದ. ಈವಯ್ಯ ನಮ್ಮ ಮನೆಯ ಜಗಳಕ್ಕೆ ತುಪ್ಪ ಸುರಿದಿದ್ದನ್ನು ಹೇಳುವ ಮುನ್ನ ಈತನ ವ್ಯಕ್ತಿತ್ವದ ಕಿರು ಪರಿಚಯ ಮಾಡುವುದು ಉತ್ತಮ. ಪೂರ್ತಿ ಪರಿಚಯ ಮಾಡಲು ಏಳು ಹಗಲು, ಏಳು ರಾತ್ರಿ ಬೇಕು, ಇರಲಿ.

ಈತ ತನ್ನ ಐದು ಜನ ಗಂಡುಮಕ್ಕಳನ್ನು ಐದು ಊರುಗಳ ಸಾವ್ಕಾರರ ಮನೆಗಳಲ್ಲಿ ಸಂಬಳಕ್ಕಿಟ್ಟು, ಇದ್ದ ಲಂಗೋಟಿಯಗಲದ ಜಮೀನನ್ನು ಕಂಡೋರಿಗೆ ಕೋರಿಗೆ ಕೊಟ್ಟು, ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಸಾಲ ಮಾಡಿ ಇವತ್ತು ಈ ಊರು, ವತ್ತಾರೆ ಇನ್ನೊಂದೂರು ಅಂತ ಅಲೆಯುತ್ತಿದ್ದ. ಕಟ್ಟಿಕೊಂಡ ಕರ್ಮಕ್ಕೆ ಹೆಂಡತಿಯೂ ಮತ್ತು ಎಳೆಯದೆಂಬ ಕಾರಣಕ್ಕೆ ಒಂದು ಗಂಡು ಮಗುವೂ ಮನೆಯಲ್ಲಿದ್ದರು.

ಇಂಥಾ ದೊಡ್ಡರಾಮಯ್ಯ ನಮ್ಮ ಹೋರಿಯನ್ನು ಕೊಂಬಿನ ತುದಿಯಿಂದ ಹಿಡಿದು ಬಾಲದ ಕುಚ್ಚಿನ ತನಕ ನೋಡಿ 'ಸ್ವಾಮೇ' ಎಂದು ಅಪ್ಪನನ್ನು ಕರೆದ. 'ಯಾಕಲ' ಎನ್ನುತ್ತಾ ಬಂದ ಅಪ್ಪನಿಗೆ 'ಮಟ್ ಮದ್ಲು ಮಾರಾಕ್ರಿ ಹೋರಿಕರನ' ಎಂದುಬಿಟ್ಟ. ಏನು ಎತ್ತ ಎಂದು ವಿಚಾರಿಸಲಾಗಿ ಹತ್ತಿರಕ್ಕೆ ಕರೆದು ಹೋರಿಯ ಯಾವುದೋ ಭಾಗ ತೋರಿಸಿ 'ಅಲ್ಲಿ ಗೂಬೆ ಸುಳಿ ಐತೆ' ಎಂದು ಹೇಳಿ ಕಾಪಿ ಕುಡಿದು ಹೊರಟೇಹೋದ. ಹೋದವನು ಸುಮ್ಮನಿರದೆ ಸುತ್ತ ಏಳು ಹಳ್ಳಿಗೂ "ಐನೋರ್ ಹೋರಿಕರೀಗೆ ಗೂಬೆ ಸುಳಿ ಐತೆ' ಅಮ್ತ ಸಾರಿದ.

ಎಲ್ಲಾ ಜೀವಾದಿಗಳಿಗೂ ಮೈಮೇಲೆ ಸುಳಿಗಳಿರುತ್ತವೆ. ಅವುಗಳು ಇರುವ ಜಾಗಕ್ಕನುಗುಣವಾಗಿ ಪೊರಕೆ ಸುಳಿ, ಪಾತಾಳ ಸುಳಿ, ನಾಗರಹಾವಿನ ಸುಳಿ, ದೇವ ಸುಳಿ ಎಂದು ಕರೆಯುತ್ತಾರೆ. ಕೆಲವು ಶುಭ, ಇನ್ನು ಕೆಲವು ಅಶುಭ ಎಂದು ನಂಬಿಕೆ.  ಅದರಲ್ಲಿ ಹೋರಿಗಳ ಹಿಂಗಾಲಿನ ಮೇಲ್ಭಾಗದ ಮುಡ್ಡಿಯ ಹತ್ತಿರ ಇರುವ ಸುಳಿಯನ್ನು 'ಗೂಬೆ ಸುಳಿ' ಎಂತಲೂ, ಅದು ಇದ್ದರೆ ಆ ಜೀವಾದಿ ಇರುವ ಮನೆಗೆ ಕೇಡೆಂತಲೂ ಭಾವಿಸುತ್ತಿದ್ದರು. ಇದಕ್ಕಾಗಿಯೇ ಹಸು, ಎತ್ತು, ಹೋರಿಕರಗಳನ್ನು ಖರೀದಿಸುವಾಗ ಕಣ್ಣಲ್ಲಿ ಕಣ್ಣಿಟ್ಟು ನಿಗಾ ಮಾಡುತ್ತಾರೆ. ಆದರೆ ಅದೆಂಗೋ ನಮಪ್ಪ ಗಮನಿಸಿರಲಿಲ್ಲ.

ದೊಡ್ಡರಾಮಯ್ಯನ ತುತ್ತೂರಿಯಿಂದ ಅಪ್ಪ–ಅಮ್ಮನ ಜಗಳ ಜೋರಾಯಿತು. ಅಮ್ಮನಂತೂ ಕೆಮ್ಮಿದ್ದು ಸೀನಿದ್ದಕ್ಕೆಲ್ಲಾ ಗೂಬೆಸುಳಿ ಹೋರಿಯೇ ಕಾರಣ ಎಂದು ಎಗರಾಡತೊಡಗಿತು. 'ತರಬೇಕಾದ್ರೆ ಕಣ್ಣು ಕಾಮಲಿಲ್ವ' ಎಂದು ಅಮ್ಮನೂ, 'ನಾನ್ ಸಂಪಾದ್ನೆ ಮಾಡಿದ್ದಿನಿ, ತಂದಿದ್ದಿನಿ ಹೋಗೆಲ ಅವುಳ್ಯಾವಳು' ಎಂದು ಅಪ್ಪನೂ ವರಾಸರಿ ಮಾಡುತ್ತಿದ್ದರು. ಒಂದು ಸಲವಂತೂ ಮಾತಿಗೆ ಮಾತು ಬೆಳೆದು ಅಪ್ಪ ಜಂತೆಯಲ್ಲಿದ್ದ ಕುಡ್ಲು ತಗೊಂಡು 'ಪಿಚ್ ಪಿಚ್ಚಿಗೆ ಕತ್ತರಿಸಿಬುಡ್ತೀನಿ' ಅಂತ ಏರಿ ಹೋಯಿತು. 'ಕತ್ತುರಿಸ್ತಿಯಾ ಕತ್ತುರಿಸ್ತಿಯಾ ಗಂಗಳದಾಗೆ ಹಿಟ್ನ' ಎಂದು ಅಮ್ಮ ಥಂಡ ಥಂಡ ಕೂಲ್ ಕೂಲ್ ಆಗಿ ಡಯಲಾಗ್ ಎಸೆಯಿತು. ಇನ್ನೂ ರೇಗಿದ ಅಪ್ಪ ಪಂಚೆ, ವಸ್ತ್ರ, ಜುಬ್ಬಗಳನ್ನೆಲ್ಲಾ ಕಂಕುಳಲ್ಲಿ ಇರುಕಿಕೊಂಡು 'ಇನ್ನೊಂದ್ ಸೆಕೆಂಡ್ ಈ ಮನೆಲಿರಲ್ಲ' ಅಂತಾ ಹೊರಟುಬಿಟ್ಟಿತು. ಸ್ವಲ್ಪ ಹೊತ್ತಷ್ಟೇ. ಮತ್ತೆ ವಾಪಸು. ಹೋರಿಯ ಸೆಳೆತ ಅಂಥಾದ್ದು.

ಇಷ್ಟೆಲ್ಲಾ ನಡೆಯುತ್ತಿರಬೇಕಾದರೆ ಆ ಹೋರಿಯು ರಾಗಿ ತಾಳು ತಿನ್ನುತ್ತಲೋ, ಮೆಲುಕು ಹಾಕುತ್ತಲೋ, ಅರೆಗಣ್ಣು ತೆರೆದು ನಿದ್ದೆ ಮಾಡುತ್ತಲೋ ಇರುತ್ತಿತ್ತು. ಕೆಲವೊಮ್ಮೆ ಕಿವಿಗಳನ್ನು ಹಿಂದಕ್ಕೂ ಮುಂದಕ್ಕೂ ಆಡಿಸುತ್ತಾ ಕೇಳಿಸಿಕೊಳ್ಳುತ್ತಿತ್ತು. ಗೂಬೆ ಸುಳಿ ಇರುವುದು ನನಗೋ ಇವರಿಗೋ ಎಂದುಕೊಂಡಿರಲೂ ಸಾಕು.

ತಿಂಗಳುಗಟ್ಟಲೆ ಹೀಗೇ ನಡೆದು ಕೊನೆಗೆ ಹೋರಿಯು ನಾಲ್ಕು ಹಲ್ಲು ಉದುರಿಸಿದಾಗ ಅಪ್ಪ ಅದನ್ನು ಮಾರಾಕಿಬಿಟ್ಟಿತು. ಅಂದರೆ ವಯಸ್ಸಾಯಿತು ಎಂದರ್ಥ. ಸಾಮಾನ್ಯವಾಗಿ ಹೋರಿಗಳೆಂದರೆ ಹಲ್ಲು ಹಾಕಿರಬಾರದು ಅಥವಾ ಎರಡು ಹಲ್ಲು ಹಾಕಿರಬೇಕು. ಈಶ್ವರನ ಫೋಟೋದಲ್ಲಿರುವ ನಂದಿಯಂತೆ ಸುಂದರವಾಗಿ, ಕಟ್ಟುಮಸ್ತಾಗಿದ್ದ ಅದು ಹೋದಮೇಲೆ ನನಗಂತೂ ಬೇಜಾರಾಯಿತು. ಮನೆ ಮುಂದೆ ಖಾಲಿ–ಖಾಲಿ. ನೋಡಲು ಹೆದರಿಕೆಯಾಗುತ್ತಿದ್ದರೂ ಹಸುಮಕ್ಕಳಿಗೂ ಅದು ಹಾಯುತ್ತಿರಲಿಲ್ಲ, ಒದೆಯುತ್ತಿರಲಿಲ್ಲ. ಕೊಂಬಿನ ಸಂದಿಯಲ್ಲಿ ಕೆರೆದರೆ ಅದಕ್ಕೆ ತುಂಬಾ ಖುಷಿಯಾಗುತ್ತಿತ್ತು.

ಹೋರಿ ಹೋಯ್ತು ಅಂತ ಮನೆಯಲ್ಲಿ ಜಗಳವೇನೂ ಮುಗಿಯಲಿಲ್ಲ. ಹೋರಿ ಬರೋಕೆ ಮುಂಚೆಯೂ ಇತ್ತು, ಅದು ಹೋದ ಮೇಲೂ ಮುಂದುವರಿಯಿತು

■

---



# ಹಿರಿಯರೊಂದಿಗಿನ ಅನುಭವ

● **ಬಿ.ಎಸ್.ದ್ವಾರಕಾನಾಥ್**

## ಶ್ರೀ ಜಿ.ಪಿ.ರಾಜರತ್ನಂ

1971ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಾನು ಶೀಘ್ರಲಿಪಿಗಾರನಾಗಿ ಕೆಲಸ ಮಾಡುತ್ತಿದ್ದೆ. ಆಗ ಪರಿಷತ್ತಿನ ಕಚೇರಿ ಹಳೆಯ ಕಟ್ಟಡದಲ್ಲಿತ್ತು. ಪ್ರವೇಶದ್ವಾರದ ನಂತರ ಪುಸ್ತಕ ಭಂಡಾರ, ಮುಂದೆ ಒಳಗಿನ ಕೊಠಡಿಯಲ್ಲಿ ಪರಿಷತ್ತಿನ ಕಚೇರಿ ಇತ್ತು. ಪ್ರವೇಶ ದ್ವಾರದಲ್ಲಿ ನಿಂತರೆ ನಾನು ಕುಳಿತುಕೊಳ್ಳುತ್ತಿದ್ದ ಜಾಗ ಕಾಣುತ್ತಿತ್ತು. ಒಂದು ದಿನ ಬೆಳಿಗ್ಗೆ 11–30ರ ಸಮಯದಲ್ಲಿ ಒಬ್ಬರು ಮುದುಕರು ಪ್ರವೇಶದ್ವಾರದಲ್ಲಿ ನಿಂತು "ಏಯ್ ಹುಡುಗ (ನನಗಾಗ 18 ವರ್ಷ) ಯಾರನ್ನಾದರೂ ಜವಾನರನ್ನು ಕಳಿಸು" ಎಂದರು. ನಾನು ಕುಳಿತ ಕಡೆಯಿಂದಲೇ "ಯಾರೂ ಇಲ್ಲ ಇಲ್ಲಿ" ಎಂದು ಕುಳಿತೆ. ಸ್ವಲ್ಪ ಹೊತ್ತಿನ ನಂತರ ಆ ಮುದುಕರು ಸೀದಾ ಪರಿಷತ್ತಿನ ಮ್ಯಾನೇಜರ್ ಕೈವಾರ ರಾಜಾರಾಯರ ಬಳಿ ಬಂದು ನೋಡಿ ರಾಜಾರಾಯರೆ, ಈ ಹುಡುನಿಗೆ ಯಾರಾದರೂ ಜವಾನರನ್ನು ಕಳಿಸು ಎಂದರೆ ಯಾರೂ ಇಲ್ಲ ಎಂದು ಕೈಯಾಡಿಸಿ ಕುಳಿತುಕೊಂಡಿದ್ದಾನೆ. ನಾನು ಆಟೋದಲ್ಲಿ ತುಂಬಾ ಪುಸ್ತಕಗಳನ್ನು ತಂದಿದ್ದೆ. ಅದನ್ನು ಇಳಿಸಿಕೊಳ್ಳಲು ಯಾರಾದರೂ ಜವಾನರನ್ನು ಕಳಿಸು ಅಂದೆ. ಯಾರೂ ಇಲ್ಲದಿದ್ದರೆ ಇವನಾದರೂ ಬಂದು ಸಹಾಯ ಮಾಡಬಹುದಿತ್ತು ಅಲ್ವಾ ಎಂದರು. ಆಗ ರಾಜಾರಾಯರು, ಏ ದ್ವಾರಕಿ, ಇವರ್ಯಾರು ಗೊತ್ತಿಲ್ವೇನೋ ಎಂದರು. ನಾನು ಗೊತ್ತಿಲ್ಲ ಎಂದೆ. ಜಿ.ಪಿ.ರಾಜರತ್ನಂ ಕಣೊ. ಅವರು ಕರೆದಾಗ ನೀನು ಹೋಗಬೇಕಾಗಿತ್ತು ಎಂದರು. ಅಯ್ಯೋ ಕ್ಷಮಿಸಿ ಸಾರ್, ನನಗೆ ಗೊತ್ತಾಗಲಿಲ್ಲ. ನಾನು ಶಾಲೆಯಲ್ಲಿದ್ದಾಗ ಇವರ ಪದ್ಯಗಳನ್ನು ಓದಿದ್ದೆ. ಆದರೆ ಇವರನ್ನು ನೋಡಿರಲಿಲ್ಲ ಅಂದೆ. ಆಗ ರಾಜರತ್ನಂ ಅವರು " ನೋಡೋ ಹುಡುಗ, ನಾನು ಅಂತ ಅಲ್ಲ. ಯಾರೇ ವಯಸ್ಸಾದ ಮುದುಕರು ಕರೆದರೂ ಹತ್ತಿರ ಹೋಗಿ ಏನು ಅಂತ ಕೇಳಿ ಸಹಾಯ ಮಾಡಬೇಕು. ಇನ್ನು ಮುಂದೆ ಹಾಗೆ ಮಾಡು ಎಂದರು. ತಪ್ಪಾಯ್ತು ಸಾರ್, ಇನ್ಮುಂದೆ ಹಾಗೇ ಮಾಡ್ತೀನಿ ಎಂದೆ. ಇನ್ನೊಂದು ದಿವಸ ರಾಜರತ್ನಂ ಆಟೋದಲ್ಲಿ ಬಟ್ಟೆ ಗಂಟಿನಲ್ಲಿ ಪುಸ್ತಕಗಳನ್ನು ತಂದರು. ನಾನು ಆಗತಾನೇ ಪರಿಷತ್ತಿಗೆ ಬರುತ್ತಿದ್ದೆ. ದೂರದಿಂದಲೇ ನೋಡಿ ಓಡಿಹೋಗಿ ಪುಸ್ತಕಗಳನ್ನು ಇಳಿಸಿಕೊಂಡು ಒಳಗಿಟ್ಟೆ. ಆಮೇಲೆ ಒಳಗೆ ಬಂದ ರಾಜರತ್ನಂ "ರಾಜಾರಾಯರೆ, ಈ ಹುಡುಗ ಈಗ ಒಳ್ಳೆಯವನಾಗಿಬಿಟ್ಟಿದ್ದಾನೆ. ನಾನು ಬಂದಿದ್ದನ್ನು ದೂರದಿಂದಲೇ ನೋಡಿ ಓಡಿಬಂದು ಪುಸ್ತಕ ಇಳಿಸಿಕೊಂಡ. ಇವನಿಗೆ ಕಾಫಿ ತರಿಸಿಕೊಡಿ. ಹಾಗೇ ನನಗೂ" ಎಂದರು. ಅಂದಿನಿಂದ ಯಾರೇ ವಯಸ್ಸಾದವರನ್ನು ನೋಡಿದರೂ ಹತ್ತಿರ ಹೋಗಿ ಮಾತನಾಡಿಸಿ ಅವರಿಗೇನಾದರೂ ಸಹಾಯ ಬೇಕಿದ್ದರೆ ಸಹಾಯ ಮಾಡುವುದನ್ನು ರೂಢಿಸಿಕೊಂಡೆ. ಜಿ.ಪಿ. ರಾಜರತ್ನಂ ಅವರು ನನಗೆ ಜೀವನದಲ್ಲಿ ಕಲಿಸಿದ ಪಾಠ ಇದು. ಆಮೇಲೂ ಪರಿಷತ್ತಿಗೆ ಅವರು ಬಂದಾಗಲೆಲ್ಲ ನನ್ನ ಬಳಿ ಬಂದು ಪ್ರೀತಿಯಿಂದ ತಲೆ ನೇವರಿಸಿ ಕೆನ್ನೆ ಮುಟ್ಟಿ ಹೋಗುತ್ತಿದ್ದರು.

# ಮಾಸ್ತಿ ವೆಂಕಟೇಶ ಅಯ್ಯಂಗಾರ್

ಜಿಲ್ಲಾಧಿಕಾರಿ ಆಗಿದ್ದ 'ಮಾಸ್ತಿ ವೆಂಕಟೇಶ ಅಯ್ಯಂಗಾರ್' ಅವರ ಜನಹಿತ ಕಾರ್ಯವೊಂದು ಅವರಿಗೇ ಕಾಣಸಿಕ್ಕಿದ ಪ್ರಸಂಗ: ಮಾಸ್ತಿಯವರು ಧರ್ಮಸ್ಥಳದ ಲಕ್ಷ ದೀಪೋತ್ಸವದ 'ಸರ್ವ ಧರ್ಮ ಸಮ್ಮೇಳನ' ದಲ್ಲಿ ಅಧ್ಯಕ್ಷತೆ ವಹಿಸಲು ಚಾರ್ಮಾಡಿ ಘಾಟಿಯ ಮೂಲಕ ಜಿ.ಪಿ. ರಾಜರತ್ನಂ ಅವರ ಜೊತೆಗೆ ಕಾರಿನಲ್ಲಿ ಹೋಗುತ್ತಿದ್ದರು. ಅವರಿಗೆ ಬಾಯಾರಿಕೆಯಾಯಿತು. ರಸ್ತೆ ಸಮೀಪದ ಹಳ್ಳಿಯಲ್ಲಿ ಒಬ್ಬ ಬಾವಿಯಿಂದ ನೀರು ಸೇದುತ್ತಿರುವುದನ್ನು ಕಂಡರು. ಗಾಡಿ ನಿಲ್ಲಿಸಿ ನೀರು ಸೇದುವ ಬಾವಿಯ ಬಳಿ ಮಾಸ್ತಿಯವರು ಹೋದರು. ನೀರು ಸೇದುತ್ತಿದ್ದವನಲ್ಲಿ ಕುಡಿಯಲು ನೀರು ಕೇಳಿದರು. ಆ ರೈತ ಬಾವಿಯಿಂದ ನೀರು ಸೇದಿದ. ಆ ನೀರನ್ನು ಮಾಸ್ತಿಯವರಿಗೆ ಕುಡಿಯಲು ಕೊಡುವ ಬದಲು ಅಲ್ಲಿಯೇ ಪಕ್ಕದಲ್ಲಿದ್ದ ನೀರಿನ ತೊಟ್ಟಿಗೆ ಸುರಿದ. ಆ ರೈತ ಮತ್ತೊಂದು ಕೊಡಪಾನ ನೀರು ಸೇದಿ "ಬನ್ನಿ ಸ್ವಾಮಿ, ನೀರು ಕುಡಿಯರಿ" ಎಂದ. ಮಾಸ್ತಿಯವರು ಬೊಗಸೆಯಲ್ಲಿ ನೀರು ಕುಡಿದರು. ಕೊಡಪಾನದಲ್ಲಿ ಉಳಿದ ನೀರನ್ನು ಆತ ಮತ್ತೆ ಆ ತೊಟ್ಟಿಗೆ ಹಾಕಿದ. ಮಾಸ್ತಿಯವರು ಅವನಿಗೆ ಹಣ ಕೊಡಲು ಮುಂದಾದರು. ಆದರೆ ಆತ ನಿರಾಕರಿಸಿದ. "ಅಲ್ಲ ಸ್ವಾಮಿ, ನಾವು ಕುಡಿಯೋ ನೀರಿಗೆ ದುಡ್ಡಿಸ್ಕಂಡ್ರೆ ಆ ದೇವ್ರಂತ ವ್ಯಕ್ತಿಗೆ ಅನ್ಯಾಯ ಮಾಡ್ದಂಗೆ" ಎಂದ. ಅದಕ್ಕೆ ಮಾಸ್ತಿ ಅವರು "ಯಾರಪ್ಪ ಆ ದೇವ್ರಂಥ ವ್ಯಕ್ತಿ" ಎಂದು ಕೇಳಿದರು.

"ಹಿಂದೆ ಬರಗಾಲ ಬಂದಿತ್ತು. ಆಗ ಕುಡಿಯಲು ನೀರಿರಲಿಲ್ಲ. ನಮ್ಮ ಚಿಕ್ಕಮಗಳೂರಲ್ಲಿ ಒಬ್ರು ಡಿಸಿ ಇದ್ರು. ಊರ್ಗೆ ಬರ್ಗಾಲ ಬಂದೈತೆ, ಒಂದು ಬಾವಿ ತೋಡ್ಸಿ ಕೊಡಿ ಸಾಮಿ ಅಂತ ಕೇಳ್ದ್ವಿ, ಅದಕ್ಕೆ ನೋಡ್ರೀ ನೀವು ಮನುಷ್ಯರು, ಬಾಯೈತೆ, ನೀವು ಮಾತಾಡ್ತೀರ, ಈಗ ಬಾವಿ ಬೇಕಂತ ಕೇಳ್ತೀರ, ಬಾವಿ ತೆಗೆಸಿ ಕೊಡ್ತೇನೆ. ಆದ್ರೆ ಪಕ್ಕದಲ್ಲಿ ತೊಟ್ಟಿ ಮಾಡಿ. ನೀವು ನಿಮಗೆ ಒಂದು ಕೊಡಪಾನ ನೀರು ತಗೊಂಡರೆ ಆ ತೊಟ್ಟಿಗೊಂದು ಕೊಡಪಾನ ನೀರು ಹಾಕಿ, ಯಾಕೆಂದರೆ ದನಕರು, ಪ್ರಾಣಿಪಕ್ಷಿಗಳಿಗೆ ಮಾತಾಡೋಕೆ ಬರೋಲ್ಲ, ಅವಕ್ಕೂ ಬರ್ಗಾಲವೇ ಅಲ್ಲವಾ ? ಅವಕ್ಕೂ ನೀರು ಬೇಕಲ್ವಾ ? ಈ ಕಂಡೀಸನ್ ಹಾಕಿ ಬಾವಿ ತೆಗೆಸಿ ಕೊಟ್ಟವ್ರೇ ಬುದ್ದಿ, ಅವರು ಮೂರು ನಾಮ ಹಾಕ್ಕೋಳ್ಳೋರು ಬುದ್ದೀ, ವಯಸ್ಸಾಗಿತ್ತು, ಮೂಡ್ಲ ದಿಕ್ಕಿನವ್ರು" ಎಂದು ರೈತ ಮಾತು ನಿಲ್ಲಿಸಿದ,

ಈ ರೈತ ಹೇಳುತ್ತಿರುವುದು ತನ್ನನ್ನೇ ಎಂದು ಮಾಸ್ತಿಯವರಿಗೆ ಅರ್ಥ ಆಗಿತ್ತು. ಆ ಸಮಯದಲ್ಲಿ ಚಿಕ್ಕಮಗಳೂರಿನ ಡಿಸಿ ಆಗಿ ನಿವೃತ್ತಿ ಹೊಂದಿದ್ದರು. ಮಾಸ್ತಿಯವರಿಗೆ ಆ ರೈತನ ಮುಗ್ಧತೆ, ಪ್ರಾಮಾಣಿಕತೆ ತುಂಬಾ ಸಂತೋಷ ನೀಡಿತು. ಆ ಡಿಸಿ ತಾನೇ ಎಂದು ರೈತನಿಗೆ ಹೇಳಲಿಲ್ಲ. ನಡೆದ ಘಟನೆಯನ್ನು ಜೊತೆಯಲ್ಲಿ ಬಂದಿದ್ದ ಜಿಪಿ ರಾಜರತ್ನಂ ಅವರಲ್ಲಿ ಹೇಳಿದಾಗ "ನೀವು ಆ ವ್ಯಕ್ತಿಗೆ ಹೇಳಿದ್ದರೆ ಅವನು ಇನ್ನಷ್ಟು ಖುಷಿ ಪಡುತ್ತಿದ್ದ" ಎಂದರು.

ನಾನು ಆ ಹುದ್ದೆಗೆ ಸಂಬಳ ಪಡೆಯುತ್ತಿದ್ದೆ, ನಾನೇನು ಧರ್ಮಾರ್ಥ ಮಾಡಲಿಲ್ಲ, ಸರ್ಕಾರದ ಹಣದಿಂದ ಮಾಡಿಸಿದೆ ಹೊರತು ನನ್ನ ಕಿಸೆಯ ಹಣದಿಂದಲ್ಲ, ಆ ರೈತನ ಮುಗ್ಧತೆ, ಪ್ರಾಮಾಣಿಕತೆಯ ಮುಂದೆ ನನ್ನ ಕೆಲಸ ಏನೇನೂ ಅಲ್ಲ, ಜೊತೆಗೆ ನಾನೇ ಆ ಡಿಸಿ ಎಂದು ಹೇಳಿದರೆ ಆ ರೈತನಿಗೆ ತಳಮಳವೂ ಶುರುವಾಗುತ್ತಿತ್ತು. ಎಂದು ಮಾಸ್ತಿಯವರು ಹೇಳಿದರು, ■